	Weft	190 (+/- 3%) (48:PPI)	300 (+/- 3%) (PPI:76)	196 (+/- 3%) (PPI:50)
	Blend Composition Percent P-Polyester V- Viscose C- Cotton	warp & weft P-67%(+/-3%) C- Remaining	warp & weft P-67%(+/-3%) V- Remaining	warp & weft P-67%(+/-3%) V- Remaining
1.	Weight - Mass (Gms/mtr Sqr) (GSM)	190 (+/- 3%)	200 (+/- 3%)	135 (+/- 3%)
5.	Breaking strength minimum in KGF on 5.0x20 cm strips (revelled strip)	Warp way - 88 kg	Warp way - 41 kg	Warp way - 60 kg
		weft way - 63 kg	weft way - 35 kg	weft way - 60 kg
6.	Width in Cm	138 (+/-3 cm)	90 (+/- 1 cm)	90 (+/- 1 cm)
7.	Shrinkage (% Max) (IS-2977)	Warp way 2	Warp way 2	Warp way 2
		Weft way 2	Weft way 2	Weft way 2
8.	Colour fastness			
	Light [IS:2454]	4-5 or better	4-5 or better	4-5 or better
	Washing (60°C) [IS/ISO- 105C10] CC and Staining on adj fab	4 or better	4 or better	4 or better
	Perspiration(IS 971) CC and Staining on adj fab	4 or better	4 or better	4 or better
	Rubbing (IS 766)	3 or better	4 or better	Dry - 4 or better Wet - 3 or better
9.	Pilling (IS-10971)	4 or better	4 or better	4 or better
10.	Weave	Plain	Plain	Plain
11.	colour and Shade L C H Delta E	18.5 11.08 288.12 1.0	57.84 31.14 262.24 1.0	21.71 13.42 296.49 1.0

ಕರ್ನಾಟಕ ಕೈಮಗ್ಗ ಅಭಿವೃದ್ಧಿ
ನಿಗಮ ನಿಯಮಿತದ ಪರವಾಗಿ

ಜಂಟಿ ನಿರ್ದೇಶಕರು

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

412

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

ಸಿಪಿಐ(2)/ಸ.ವ.ಸ-10(2)/2016-17

ರವರಿಗೆ,

ದಿನಾಂಕ: 29.11.2016.

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ,
ಪ್ರಿಯದರ್ಶಿನಿ ವಾಣಿಜ್ಯ ಸಂಕೀರ್ಣ
ಮಲ್ಲೇಶ್ವರಂ, ಬೆಂಗಳೂರು.

ಮಾನ್ಯರೇ,

ವಿಷಯ: 2017-18ನೇ ಸಾಲಿಗೆ ವಿದ್ಯಾವಿಕಾಸ ಯೋಜನೆಯಡಿಯಲ್ಲಿ ಬೆಂಗಳೂರು, ಕಲಬುರ್ಗಿ ಮತ್ತು ಬೆಳಗಾವಿ ವಿಭಾಗಗಳ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಬಟ್ಟೆ ಸರಬರಾಜು ಮಾಡಲು ಕಾರ್ಯಾದೇಶ.

ಉಲ್ಲೇಖ: ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ ಇವರು ಕಡತ ಸಂಖ್ಯೆ: ಸಿಪಿಐ(2)/ಸ.ವ.ಸ-10(2)/2016-17ರ ಟಿಪ್ಪಣಿ ಪುಟ ಸಂಖ್ಯೆ-4, ಕಂಡಿಕೆ-9, ದಿನಾಂಕ:28-11-2016 ರಲ್ಲಿನ ಆದೇಶದಂತೆ.

ಉಲ್ಲೇಖಿತ ಸರ್ಕಾರದ ಆದೇಶದಲ್ಲಿ 2017-18ನೇ ಸಾಲಿಗೆ ವಿದ್ಯಾವಿಕಾಸ ಯೋಜನೆಯಡಿಯಲ್ಲಿ ರಾಜ್ಯದ ಬೆಂಗಳೂರು ಮತ್ತು ಕಲಬುರ್ಗಿ ವಿಭಾಗ ಹಾಗೂ ಬೆಳಗಾವಿ ವಿಭಾಗದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 01 ರಿಂದ 10ನೇ ತರಗತಿಯಲ್ಲಿನ ವಿದ್ಯಾರ್ಥಿಗಳಿಗೆ ಒಂದು ಜೊತೆ ಉಚಿತ ಸಮವಸ್ತ್ರ ಬಟ್ಟೆಯನ್ನು ರಾಜ್ಯಸರ್ಕಾರದ ಉದ್ದಿಮೆಯಾದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ (ಕೆಹೆಚ್‌ಡಿಸಿ) ಸಂಸ್ಥೆಯ ವತಿಯಿಂದ ಸರಬರಾಜು ಮಾಡಲು ಸರ್ಕಾರದ ಆದೇಶವಾಗಿರುತ್ತದೆ. ಅದರಂತೆ ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧಗಳಲ್ಲಿ ತಿಳಿಸಿರುವಂತೆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ರಾಜ್ಯದ ಬೆಂಗಳೂರು, ಕಲಬುರ್ಗಿ ಮತ್ತು ಬೆಳಗಾವಿ ವಿಭಾಗದ ಎಲ್ಲಾ ತಾಲ್ಲೂಕುಗಳಿಗೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಬಂಧಗಳಲ್ಲಿ ವಿವರಿಸಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಪ್ರತಿ ವಿದ್ಯಾರ್ಥಿಗೆ ಒಂದು ಸೆಟ್‌ನಂತೆ ಸಮವಸ್ತ್ರ ಬಟ್ಟೆಯನ್ನು ಕಡ್ಡಾಯವಾಗಿ ದಿನಾಂಕ:30.04.2017ರ ಒಳಗಾಗಿ ಪೂರೈಕೆ ಮಾಡಲು ತುರ್ತು ಅಗತ್ಯ ಕ್ರಮ ಕೈಗೊಳ್ಳಲು ನಿಮಗೆ ತಿಳಿಸಿದೆ.

ಪೂರೈಕೆ ಮಾಡಬೇಕಾದ ಬಟ್ಟೆಯ ಅಳತೆ ಮತ್ತು ಬಣ್ಣ ಗಳ ಬಗ್ಗೆ ಅನುಬಂಧ-1 ರಲ್ಲಿ ವಿವರಿಸಿದೆ. ಸದರಿ ನಿಗಮವು ಕರ್ನಾಟಕ ರಾಜ್ಯದಲ್ಲಿರುವ ತನ್ನ ವ್ಯಾಪ್ತಿಯ ಕೈಮಗ್ಗ ಘಟಕಗಳಿಂದ ಮಾತ್ರ ಬಟ್ಟೆಗಳನ್ನು ಪಡೆದು ಸರಬರಾಜು ಮಾಡತಕ್ಕದ್ದು. ಹಾಗೂ ಬೇರೆ ಮೂಲಗಳಿಂದ / ಸಂಸ್ಥೆಗಳಿಂದ ಖರೀದಿಸಿ ಸರಬರಾಜು ಮಾಡತಕ್ಕದ್ದಲ್ಲ ಹಾಗೂ ಸರ್ಕಾರದ ಆದೇಶದಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳಿಗೆ ಬದ್ಧರಾಗಿ ಸರಬರಾಜುಕಾರ್ಯ ನಿರ್ವಹಿಸುವಂತೆ ತಿಳಿಸಿದೆ.

ಷರತ್ತುಗಳು:-

1. ಸಮವಸ್ತ್ರ ಬಟ್ಟೆಗಳನ್ನು ಯಾವುದೇ ಕಾರಣಕ್ಕೆ ವಿಳಂಬ ಮಾಡದೆ ಕಡ್ಡಾಯವಾಗಿ ದಿನಾಂಕ:30.04.2017ರ ಒಳಗಾಗಿ ಸಂಬಂಧಿಸಿದ ತಾಲ್ಲೂಕು ಕೇಂದ್ರಗಳಿಗೆ ಸೆಟ್‌ಗಳ ರೂಪದಲ್ಲಿ ಸರಬರಾಜು ಪೂರ್ಣಗೊಳಿಸತಕ್ಕದ್ದು.
2. ಕೆ.ಹೆಚ್.ಡಿ.ಸಿ ಸಂಸ್ಥೆ ವತಿಯಿಂದ ಶರ್ಟಿಂಗ್ 29.82ಲಕ್ಷ ಮೀಟರ್, ಸೂಟಿಂಗ್ 12.40ಲಕ್ಷ ಮೀಟರ್ ಹಾಗು ಸ್ಕರ್ಟಿಂಗ್ 22.09ಲಕ್ಷ ಮೀಟರ್ ಒಟ್ಟು 64.31ಲಕ್ಷ ಮೀಟರ್(ಅರವತ್ತ ನಾಲ್ಕು ಲಕ್ಷದ ಮೂವತ್ತ ಒಂದು ಸಾವಿರ ಮೀಟರ್ ಗಳು ಮಾತ್ರ) ಸಮವಸ್ತ್ರ ಬಟ್ಟೆ ಸರಬರಾಜಿಗೆ ಅನುಮತಿಸಿದೆ. ಬಟ್ಟೆಯ ದರವನ್ನು ಶರ್ಟಿಂಗ್ ಪ್ರತಿ ಮೀಟರ್‌ಗೆ ರೂ.65/- (ರೂ.ಅರವತ್ತ ಐದು ಮಾತ್ರ) ಸೂಟಿಂಗ್ ಬಟ್ಟೆ ಪ್ರತಿ ಮೀಟರ್‌ಗೆ ರೂ.130/- (ರೂ.ಒಂದುನೂರ ಮುವತ್ತು ಮಾತ್ರ) ಹಾಗೂ ಸ್ಕರ್ಟ್ ಬಟ್ಟೆ ಪ್ರತಿ ಮೀಟರ್‌ಗೆ ರೂ.68/- (ರೂ.ಅರವತ್ತ ಎಂಟು ಮಾತ್ರ) ರಂತೆ ಸರಬರಾಜು ಮಾಡಲು ಅನುಮತಿಸಿದೆ.
3. ಇದರಲ್ಲಿ ಬೆಂಗಳೂರು ವಿಭಾಗದ 11 ಜಿಲ್ಲೆಗಳ 59 ತಾಲೂಕುಗಳಿಗೆ ಮತ್ತು ಗುಲ್ಬರ್ಗ ವಿಭಾಗದ 6 ಜಿಲ್ಲೆಗಳ 33 ತಾಲೂಕ್ಕುಗಳಿಗೆ ಅನುಬಂಧದಲ್ಲಿ ತೋರಿಸಿರುವಂತೆ ತರಗತಿವಾರು ಮಕ್ಕಳ ಸಂಖ್ಯೆಗೆ ಅನುಗುಣವಾಗಿ 1 ರಿಂದ 7ನೇ ತರಗತಿ ಗಂಡು ಮಕ್ಕಳಿಗೆ ಒಂದು ಜೊತೆ ಶರ್ಟ ಮತ್ತು ನಿಕ್ಕರ್, 8 ರಿಂದ 10ನೇ ತರಗತಿ ಗಂಡು ಮಕ್ಕಳಿಗೆ ಶರ್ಟ್ ಮತ್ತು ಪ್ಯಾಂಟ್

43

ಹಾಗೂ 1 ರಿಂದ 7ನೇ ತರಗತಿ ಹೆಣ್ಣು ಮಕ್ಕಳಿಗೆ ಒಂದು ಜೊತೆ ಶರ್ಟ್ ಮತ್ತು ಸ್ಕರ್ಟ್ ಬಟ್ಟೆಯನ್ನು ಸರಬರಾಜು ಮಾಡುವುದು.

4. ಹಾಗೂ ಬೆಳಗಾವಿ ವಿಭಾಗದ ಬಾಗಲಕೋಟೆ ಜಿಲ್ಲೆಗೆ ತರಗತಿವಾರು ಮಕ್ಕಳ ಸಂಖ್ಯೆಗೆ ಅನುಗುಣವಾಗಿ 1 ರಿಂದ 7ನೇ ತರಗತಿ ಗಂಡು ಮಕ್ಕಳಿಗೆ ಒಂದು ಜೊತೆ ಶರ್ಟ್ ಮತ್ತು ನಿಕ್ಕರ್, 8 ರಿಂದ 10ನೇ ತರಗತಿ ಗಂಡು ಮಕ್ಕಳಿಗೆ ಶರ್ಟ್ ಮತ್ತು ಪ್ಯಾಂಟ್ ಹಾಗೂ 1 ರಿಂದ 7ನೇ ತರಗತಿ ಹೆಣ್ಣು ಮಕ್ಕಳಿಗೆ ಒಂದು ಜೊತೆ ಶರ್ಟ್ ಮತ್ತು ಸ್ಕರ್ಟ್, ಉಳಿದ ಜಿಲ್ಲೆಗಳಾದ ಬೆಳಗಾವಿ, ದಾರವಾಡ, ಉತ್ತರ ಕನ್ನಡ, ಶಿರ್ಸಿ, ವಿಜಯಪುರ, ಗದಗ, ಹಾವೇರಿ ಮತ್ತು ಚಿಕ್ಕೋಡಿ ಜಿಲ್ಲೆಗಳಿಗೆ 1 ರಿಂದ 7ನೇ ತರಗತಿ ಗಂಡು ಮಕ್ಕಳಿಗೆ ನಿಕ್ಕರ್ ಬಟ್ಟೆ, 8 ರಿಂದ 10ನೇ ತರಗತಿ ಗಂಡು ಮಕ್ಕಳಿಗೆ ಪ್ಯಾಂಟ್ ಹಾಗೂ 1 ರಿಂದ 7ನೇ ತರಗತಿ ಹೆಣ್ಣು ಮಕ್ಕಳಿಗೆ ಸ್ಕರ್ಟ್ ಬಟ್ಟೆಯನ್ನು ಸರಬರಾಜು ಮಾಡುವುದು.

5. ಬೆಳಗಾವಿ ವಿಭಾಗಕ್ಕೆ ಸಂಬಂಧ ಪಟ್ಟಂತೆ ಬೆಳಗಾವಿ, ದಾರವಾಡ, ಉತ್ತರ ಕನ್ನಡ, ಶಿರ್ಸಿ, ವಿಜಯಪುರ, ಗದಗ, ಹಾವೇರಿ ಮತ್ತು ಚಿಕ್ಕೋಡಿ ಒಟ್ಟು 8 ಜಿಲ್ಲೆಗಳಿಗೆ ಸಂಬಂಧಿಸಿದಂತೆ ವಿತರಿಸಬೇಕಾದ ಶರ್ಟ್ ಬಟ್ಟೆಯನ್ನು ಮೆ. ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ(ಕೆ.ಎಸ್.ಟಿ.ಐ.ಡಿ.ಸಿ) ಸಂಸ್ಥೆಯಿಂದ ಪಡೆದುಕೊಂಡು ತರಗತಿವಾರು ಸೆಟ್ ಗಳನ್ನಾಗಿ ವಿಂಗಡಿಸಿ ಸೂಕ್ತ ಪ್ಯಾಕಿಂಗ್ ಮಾಡಿ ಸಂಬಂಧಿಸಿದ ತಾಲೂಕುಗಳಿಗೆ ರವಾನಿಸುವುದು.

6. ವಿಳಂಬ ಸರಬರಾಜಿಗೆ ಯಾವುದೇ ರೀತಿಯ ವಿನಾಯಿತಿ ನೀಡದೆ ನಿಗಧಿತ ಪ್ರಮಾಣದಲ್ಲಿ ದಂಡ ವಿಧಿಸಲು ಶಿಕ್ಷಣ ಇಲಾಖೆಯು ಬದ್ಧವಾಗಿರುತ್ತದೆ.

7. ಸಂಸ್ಥೆಯು ತಯಾರಿಸಬೇಕಾದ ಬಟ್ಟೆಯನ್ನು ಕಡ್ಡಾಯವಾಗಿ ರಾಜ್ಯದಲ್ಲಿನ ಕೈಮಗ್ಗ ನೇಕಾರರಿಂದಲೇ ನೇಯ್ದ ಬಟ್ಟೆಗಳನ್ನು ಮಾತ್ರ ಸರಬರಾಜು ಮಾಡತಕ್ಕದ್ದು.

8. ಯಾವುದೇ ಕಾರಣಕ್ಕೆ ಬಾಹ್ಯ ಮೂಲಗಳಿಂದ ಖರೀದಿಸಿದ ಸಮವಸ್ತ್ರ ಬಟ್ಟೆಯನ್ನು ಸರಬರಾಜು ಮಾಡತಕ್ಕದ್ದಲ್ಲ. ಮತ್ತು ಇಲಾಖೆ ಅಂತಹಾ ಬಟ್ಟೆಗಳನ್ನು ತಿರಸ್ಕರಿಸುವ ಅಧಿಕಾರ ಹೊಂದಿರುತ್ತದೆ.

9. ಇಲಾಖೆ ನಿಗಧಿಪಡಿಸಿದ ಗುಣಮಟ್ಟದ (Specification) ಪ್ರಕಾರವೇ ಸಮವಸ್ತ್ರ ಬಟ್ಟೆಗಳನ್ನು ಸರಬರಾಜು ಮಾಡತಕ್ಕದ್ದು.

10. ಕಳಪೆ ಗುಣಮಟ್ಟದಿಂದ ದೃಢಪಟ್ಟ ಬಟ್ಟೆಗಳ ಮೇಲೆ ಹಾಗೂ ವಿಳಂಬ ಸರಬರಾಜುಮಾಡಿದ ಬಟ್ಟೆಗಳ ಮೌಲ್ಯದ ಮೇಲೆ ಶಿಕ್ಷಣ ಇಲಾಖೆ ವಿಧಿಸಿದ ದಂಡವನ್ನು ಯಾವುದೇ ಕಾರಣಕ್ಕೂ ಮನ್ನಾ ಮಾಡುವಂತೆ ಸಂಸ್ಥೆ ಕೋರತಕ್ಕದ್ದಲ್ಲ, ಈ ಅಂಶವನ್ನು ಕಡ್ಡಾಯವಾಗಿ ಕರಾರಿನಲ್ಲಿ ನಮೂದಿಸಿರತಕ್ಕದ್ದು.

11. ಸಂಸ್ಥೆಗೆ ನಿಗಧಿತ ದಿನಾಂಕದ ಒಳಗಾಗಿ ಬಟ್ಟೆಗಳ ಸರಬರಾಜು ಮಾಡಲು ಸಾಧ್ಯವಾಗದ ಪಕ್ಷದಲ್ಲಿ ಈ ಕಾರ್ಯಾದೇಶವನ್ನು ಪಡೆದುಕೊಂಡ ಒಂದು ವಾರದ ಒಳಗಾಗಿ (ಏಳು ದಿನಗಳ ಒಳಗಾಗಿ) ಈ ಕಛೇರಿಗೆ ತಿಳಿಸತಕ್ಕದ್ದು.

12. ಈ ಆದೇಶ ಪಡೆದ ಒಂದು ವಾರದ ಒಳಗಾಗಿ ಇಲಾಖೆಯೊಂದಿಗೆ ಸೂಕ್ತ ಕರಾರು ಒಪ್ಪಂದ ಮಾಡಿಕೊಳ್ಳತಕ್ಕದ್ದು

13. ಕಾರ್ಯಾದೇಶದಲ್ಲಿ ಹೇಳಿರುವ ಸಮವಸ್ತ್ರ ಬಟ್ಟೆಯ ಪ್ರಮಾಣವನ್ನು 15% ಹೆಚ್ಚು ಅಥವಾ ಕಡಿಮೆ ಮಾಡುವ ಅಧಿಕಾರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಇರುತ್ತದೆ.

"ಸಮವಸ್ತ್ರ ಪೂರೈಕೆಯ ಸಾಮಾನ್ಯ ಷರತ್ತುಗಳು ಮತ್ತು ನಿಬಂಧನೆಗಳು"

1. ಕರಾರು ಒಪ್ಪಂದ:-

(1) ಕರಾರು ಅಂದರೆ ಈ ಆದೇಶದಲ್ಲಿನ ಎಲ್ಲಾ ಅಂಶಗಳಿಗೂ ಮತ್ತು ಈ ಆದೇಶದಲ್ಲಿ ತಿಳಿಸಿರುವ ಎಲ್ಲಾ ವಿವರಣೆ/ಅನುಬಂಧಗಳನ್ನು ಒಳಗೊಂಡಂತೆ ಎಲ್ಲಾ ಷರತ್ತುಗಳಿಗೆ ಖರೀದಿದಾರರು ಹಾಗೂ ಸರಬರಾಜುದಾರರು ಬದ್ಧರಾಗಿ ಏರ್ಪಟ್ಟ ಒಡಂಬಡಿಕೆ

(2) ಈ ಆದೇಶ ಸ್ವೀಕರಿಸಿದ ಏಳು (7) ದಿನಗಳ ಒಳಗಾಗಿ ಕರಾರು ಒಪ್ಪಂದ ಮಾಡಿಕೊಳ್ಳುವುದು.

2. ಕರಾರು ಒಪ್ಪಂದದ ಸಾಮಾನ್ಯ ಷರತ್ತುಗಳು:-

1. ಈ ಕರಾರಿನಡಿ ಸರಬರಾಜುದಾರರು ಖರೀದಿದಾರರಿಂದ ಪಡೆದ ಆದೇಶದಂತೆ ಸೂಕ್ತ ಸಮವಸ್ತ್ರ ಬಟ್ಟೆಗಳನ್ನು ತಯಾರಿಸಿ ಅನುಬಂಧ ರಲ್ಲಿ ತಿಳಿಸಿರುವಂತೆ ಸಂಬಂಧಿಸಿದ ಜಿಲ್ಲೆಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಕಾಲದಲ್ಲಿ ಸರಬರಾಜು ಮಾಡುವ ಕಾರ್ಯವನ್ನು ಸಮರ್ಪಕವಾಗಿ ಪೂರ್ಣಗೊಳಿಸಬೇಕು.

2. ಸಮವಸ್ತ್ರ ಸರಬರಾಜಿಗೆ ಸಂಬಂಧಿಸಿದಂತೆ ಸಂಸ್ಥೆಯು ಇಲಾಖೆಯೊಂದಿಗೆ ಮಾಡಿಕೊಳ್ಳಬೇಕಾದ ಕರಾರು ಒಪ್ಪಂದವನ್ನು ರೂ. 500/- ಗಳ ಛಾಪಾ ಕಾಗದದಲ್ಲಿ ಸಲ್ಲಿಸತಕ್ಕದ್ದು. ಕರಾರಿಗೆ ಸಂಸ್ಥೆಯ ಸಕ್ಷಮ ಪ್ರಾಧಿಕಾರಿಗಳು ಸಹಿ ಮಾಡಿ ತಾಲ್ಲೂಕುವಾರು ಸರಬರಾಜು ವೇಳಾ ಪಟ್ಟಿಯೊಂದಿಗೆ ಸಲ್ಲಿಸತಕ್ಕದ್ದು.

ಸಹಿ ಮಾಡಿದ ಕರಾರು ಒಪ್ಪಂದ ಪತ್ರವನ್ನು ತಾಲ್ಲೂಕುವಾರು ಸರಬರಾಜು ವೇಳಾ ಪಟ್ಟಿಯೊಂದಿಗೆ ದಿನಾಂಕ:03.12.2016 ರೊಳಗಾಗಿ ಈ ಕಛೇರಿಗೆ ಸಲ್ಲಿಸುವುದು.

(ಅ) ಕರಾರಿನ ಮೊತ್ತ :- ಎಂದರೆ ಸರಬರಾಜುದಾರರಿಗೆ ಕರಾರು ಒಪ್ಪಂದದ ಪ್ರಕಾರ ಯೋಗ್ಯ ಮತ್ತು ಸಮಂಜಸ ರೀತಿಯಲ್ಲಿ ಕರಾರಿನಂತೆ ಸರಬರಾಜು ಕಾರ್ಯವನ್ನು ಸಮರ್ಪಕವಾಗಿ ಪೂರ್ಣಗೊಳಿಸಿದ ಪ್ರಮಾಣಕ್ಕೆ ಕರಾರಿನಲ್ಲಿ ಒಪ್ಪಿಗೆಯಾಗಿರುವ ದರದಂತೆ ಪಾವತಿಸಬೇಕಾದ ಮೊತ್ತ.

(ಅ) ಸಮವಸ್ತ್ರಬಟ್ಟೆ ಸರಬರಾಜು:- ಎಂದರೆ ಕರಾರಿನ ಪ್ರಕಾರ ಈ ಆದೇಶದ ಅನುಬಂಧ ರಲ್ಲಿ ವಿವರಿಸಿರುವಂತೆ ತಾಲ್ಲೂಕುವಾರು ನಿಗಧಿತ ಸಂಖ್ಯೆಯಂತೆ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರತಿ ವಿದ್ಯಾರ್ಥಿಗೆ ಒಂದು ಸೆಟ್ ನಂತೆ ಸಮವಸ್ತ್ರ ಬಟ್ಟೆಯನ್ನು ಸಂಬಂಧಿಸಿದ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ನಿಗಧಿತ ಪ್ರಮಾಣದಲ್ಲಿ ಸಕಾಲದಲ್ಲಿ ಸರಬರಾಜು ಮಾಡುವುದು.

(ಆ) ಸೆಟ್ ಎಂದರೆ:- 1 ರಿಂದ 7ನೇ ತರಗತಿ ಗಂಡುಮಕ್ಕಳಿಗೆ ಪ್ರತಿ ವಿದ್ಯಾರ್ಥಿಗೆ ಒಂದು ಶರ್ಟ್ ಮತ್ತು ಒಂದು ನಿಕ್ಕರ್ ಬಟ್ಟೆ, 8 ರಿಂದ 10ನೇ ತರಗತಿ ಗಂಡು ಮಕ್ಕಳಿಗೆ ಒಂದು ಶರ್ಟ್ ಮತ್ತು ಒಂದು ಪ್ಯಾಂಟ್ ಬಟ್ಟೆ, ಹಾಗೂ ತರಗತಿ 1 ರಿಂದ 7ನೇ ತರಗತಿ ಬಾಲಕಿಯರಿಗೆ ಒಂದು ಶರ್ಟ್ ಮತ್ತು ಒಂದು ಸ್ಕರ್ಟ್ (ಲಂಗದ) ಬಟ್ಟೆ.

(ಇ) ಸರಬರಾಜು ವೆಚ್ಚ:- ಎಂದರೆ ಸಂಸ್ಥೆಯವರು ನೀಡಿರುವ ದರವು ಸಮವಸ್ತ್ರ ಬಟ್ಟೆಗಳನ್ನು ಸಂಬಂಧಿಸಿದ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಗಳಿಗೆ ತಲುಪಿಸುವವರೆಗೆ ತಗಲುವ ತಯಾರಿಕಾ ವೆಚ್ಚ, ಸಾಗಾಣಿಕೆ ವೆಚ್ಚ, ಇನ್ಸೂರನ್ಸ್, ಆಕಸ್ಮಿಕ, ಪ್ರಾಸಂಗಿಕ ಮತ್ತು ಇತರೆ ವಿಶಿಷ್ಟ ವೆಚ್ಚಗಳೆಲ್ಲವೂ ಸೇರಿರುತ್ತವೆ.

3. ಉತ್ಪಾದನೆಯ ಮೂಲ:-

(1). ಸರಬರಾಜು ಮಾಡುವ ಬಟ್ಟೆಗಳನ್ನು ಕಡ್ಡಾಯವಾಗಿ ರಾಜ್ಯದ ಕೈಮಗ್ಗ ಘಟಕಗಳಿಂದ ಮಾತ್ರ ಪಡೆದು ಸರಬರಾಜು ಮಡುವುದು. ಇತರೆ ಯಾವುದೇ ಸಂಸ್ಥೆಗಳು/ಖಾಸಗಿ ಸಂಸ್ಥೆಗಳಿಂದ ಖರೀದಿಸಿ ಸರಬರಾಜು ಮಾಡತಕ್ಕದ್ದಲ್ಲ.

4. ಸಮವಸ್ತ್ರ ಬಟ್ಟೆಗಳ ಗುಣಮಟ್ಟ ಪರೀಕ್ಷೆ:-

(1) ಸಮವಸ್ತ್ರಬಟ್ಟೆಗಳ ಗುಣಮಟ್ಟವು ಟೆಕ್ನಿಕಲ್ ಸ್ಪೆಸಿಫಿಕೇಷನ್‌ಗಳಿಗೆ ಪೂರಕವಾಗಿರುವ ಬಗ್ಗೆ ತಾಂತ್ರಿಕ ಪರಿಶೀಲನೆಯನ್ನು ಭಾರತ ಸರ್ಕಾರ ಸ್ವಾಮ್ಯದ ಟೆಕ್ಸ್‌ಟೈಲ್ ಕಮಿಟಿ, ಕೆ.ಹೆಚ್.ಡಿ.ಸಿ. ಬಿಲ್ಡಿಂಗ್, ಮಡಿವಾಳ, ಬೆಂಗಳೂರು-68 ಅಥವಾ ಸಿ.ಎಸ್.ಟಿ.ಆರ್.ಐ, ಬಿಟಿಎಂ ಲೇಔಟ್, ಬೆಂಗಳೂರು ಈ ಸಂಸ್ಥೆಯಿಂದ ನಿರ್ವಹಿಸಲಾಗುವುದು.

(2) ಕರಾರು ಒಪ್ಪಂದದಂತೆ ಸರಬರಾಜು ದಾರರು ತಯಾರಿಸಿರುವ ಬಟ್ಟೆಗಳನ್ನು ಈ ಆದೇಶದೊಂದಿಗೆ ನೀಡಿರುವ ಬಟ್ಟೆಗಳ ತಾಂತ್ರಿಕ ಸ್ಪೆಸಿಫಿಕೇಶನ್ ಅನುಬಂಧ-2 ರಂತೆ ಟೆಕ್ನಿಕಲ್ ಸ್ಪೆಸಿಫಿಕೇಶನ್‌ಗಳಿಗೆ ಅನುಗುಣವಾಗಿ ತಯಾರಿಸಿರುವ ಬಗ್ಗೆ ಸಮವಸ್ತ್ರ ಬಟ್ಟೆಯ ಗುಣಮಟ್ಟವನ್ನು ಖಾತ್ರಿಪಡಿಸಿಕೊಳ್ಳಲು ಖರೀದಿದಾರರಿಗೆ ಯಾವುದೇ ಆರ್ಥಿಕ ಹೊರೆ ಬೀಳದ ರೀತಿಯಲ್ಲಿ ಖರೀದಿದಾರರು ಅಥವಾ ಅವರ ಅಧಿಕೃತ ಪ್ರತಿನಿಧಿ ಬಟ್ಟೆಗಳನ್ನು ಪರೀಕ್ಷಿಸುವ/ ಸ್ಯಾಂಪಲ್‌ಗಳನ್ನು ಸೆಳೆಯುವ ಪೂರ್ಣ ಅಧಿಕಾರ ಹೊಂದಿರುತ್ತಾರೆ.

(3) ಈ ರೀತಿಯ ಪರೀಕ್ಷೆಯನ್ನು ಸರಬರಾಜುದಾರರ ಆವರಣದಲ್ಲಿ/ಸರಬರಾಜಿಗೆ ತಯಾರಾಗಿಟ್ಟಿರುವ ಆವರಣದಲ್ಲಿ ಅಥವಾ ಅಂತಿಮವಾಗಿ ಬಟ್ಟೆಗಳನ್ನು ಸರಬರಾಜು ಮಾಡಿದ ಸ್ಥಳದಲ್ಲಿಯೂಕೂಡ ನಡೆಸಬಹುದಾಗಿದೆ. ಬಟ್ಟೆಗಳ ಪರೀಕ್ಷೆಯನ್ನು ಸರಬರಾಜುದಾರರ ಆವರಣದಲ್ಲಿ ನಡೆಸಿದಲ್ಲಿ ಅದಕ್ಕೆ ಬೇಕಾದ ಎಲ್ಲಾ ಪೂರಕ ಅನುಕೂಲತೆ ಮತ್ತು ಸಹಕಾರವನ್ನು ಸರಬರಾಜುದಾರರು ನೀಡುವುದು.

(4) ಪರೀಕ್ಷಿಸಿದ ಸಮವಸ್ತ್ರ ಬಟ್ಟೆಗಳಲ್ಲಿ ನಿಗಧಿತ ಗುಣಮಟ್ಟದ್ದಲ್ಲ ಎಂದು ಕಂಡು ಬರುವ ಬಟ್ಟೆಗಳನ್ನು ತಿರಸ್ಕರಿಸುವ ಅಧಿಕಾರ ಖರೀದಿದಾರರಿಗೆ ಇರುತ್ತದೆ. ಹೀಗೆ ತಿರಸ್ಕರಿಸಿದ ಪ್ರಮಾಣದ ಬಟ್ಟೆಗಳನ್ನು ಸರಬರಾಜು ದಾರರು ಬದಲಾಯಿಸಿ ನಿಗಧಿತ ಸ್ಪೆಸಿಫಿಕೇಶನ್‌ಗೆ ಒಳಪಟ್ಟ ಸೂಕ್ತ ಬಟ್ಟೆಗಳನ್ನು ಮರುಸರಬರಾಜು ಮಾಡತಕ್ಕದ್ದು, ಮತ್ತು ಇದರಿಂದ ಸರಬರಾಜು ದಾರರಿಗೆ ಯಾವುದೇ ರೀತಿಯ ಹೆಚ್ಚಿನ ವೆಚ್ಚ ಅಥವಾ ನಷ್ಟ ಉಂಟಾದಲ್ಲಿ ಸರಬರಾಜು ದಾರರೇ ಭರಿಸಬೇಕು, ಇಂತಹ ಪ್ರಸಂಗದಿಂದ ಸರಬರಾಜುದಾರರಿಗೆ ಉದ್ಭವಿಸುವ ಯಾವುದೇ ನಷ್ಟಗಳಿಗೆ ಖರೀದಿದಾರರು ಜವಾಬ್ದಾರರಾಗುವುದಿಲ್ಲ.

(5) ಸಂಬಂಧಿಸಿದ ಶಾಲೆಗಳಿಗೆ ಸರಬರಾಜಾದ ಬಟ್ಟೆಗಳಲ್ಲಿ ಯಾವುದೇ ಬಟ್ಟೆಯು ಗುಣಮಟ್ಟ ನಿರ್ದಿಷ್ಟ ಪಡಿಸಿದ ಗುಣಮಟ್ಟದ್ದಲ್ಲ (ನಿಗಧಿತ ಸ್ಪೆಸಿಫಿಕೇಶನ್ ಮೀರಿದ್ದಲ್ಲಿ) ಎಂದು ಕಂಡುಬಂದಲ್ಲಿ ಸಂಬಂಧಿತ ಶಾಲೆಗೆ ಸರಬರಾಜಾದ ನಂತರವೂ ಇಂತಹ ಬಟ್ಟೆಯನ್ನು ತಿರಸ್ಕರಿಸುವ ಪೂರ್ಣ ಅಧಿಕಾರ ಖರೀದಿದಾರರಿಗೆ ಇರುತ್ತದೆ. ಇದನ್ನು ಬಟ್ಟೆಗಳ ಸರಬರಾಜಿಗೆ ಮುನ್ನ ಪರೀಕ್ಷೆಗೆ ಒಳಪಡಿಸಿ ಖರೀದಿದಾರರು ಅಥವಾ ಅವರ ಪ್ರತಿನಿಧಿ ಅಂಗೀಕರಿಸಿದ ಬಟ್ಟೆಗಳೆಂದು ಕಾರಣ ನೀಡಿ ಬಿಟ್ಟುಬಿಡಲು/ತ್ಯಜಿಸಲು ಅವಕಾಶ ಇರುವುದಿಲ್ಲ.

(6) ಸಮವಸ್ತ್ರ ಬಟ್ಟೆಗಳ ತಾಂತ್ರಿಕ ಪರೀಕ್ಷೆಗೆ ತಗಲುವ ವೆಚ್ಚಗಳನ್ನು ಸಂಬಂಧಿಸಿದ ಸರಬರಾಜು ಸಂಸ್ಥೆಯೇ ಭರಿಸತಕ್ಕದ್ದು. ಅಂದರೆ ತಾಂತ್ರಿಕ ಪರೀಕ್ಷೆ ನಡೆಸುವ ಸಂಸ್ಥೆ ತಾಂತ್ರಿಕ ಪರೀಕ್ಷೆಗೆ ವಿಧಿಸುವ ಶುಲ್ಕ ಪಾವತಿ ಹಾಗೂ ಸಮವಸ್ತ್ರಬಟ್ಟೆಗಳನ್ನು ತಾಂತ್ರಿಕ ಪರೀಕ್ಷಾ ಕೇಂದ್ರಕ್ಕೆ ಸಾಗಾಣಿಕೆ ಮಾಡುವ ವ್ಯವಸ್ಥೆಯನ್ನು ಸರಬರಾಜು ಸಂಸ್ಥೆ ಕಲ್ಪಿಸುವುದು.

5. ಬಟ್ಟೆಗಳ ಪರೀಕ್ಷೆಗೆ ಮಾದರಿಗಳನ್ನು ಆಯ್ಕೆ ಮಾಡುವ ಬಗ್ಗೆ :-

(1) ಸಮವಸ್ತ್ರ ಬಟ್ಟೆಗಳನ್ನು ಸಂಬಂಧಿಸಿದ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ಸರಬರಾಜು ಕಾರ್ಯ ಆರಂಭಿಸುವ ಮುನ್ನ ಖರೀದಿದಾರರು ತಿಳಿಸಿದ ಇಲಾಖಾ ಅಧಿಕಾರಿ/ ಸಿಬ್ಬಂದಿ ಅಥವಾ ಟೆಕ್ನಿಕಲ್ ಪ್ಯಾನಲ್ ಸದಸ್ಯರು ಸರಬರಾಜುದಾರರು ಬಟ್ಟೆಗಳನ್ನು ತಯಾರಿಸಿದ/ಶೇಖರಿಸಿದ ಸ್ಥಳಕ್ಕೆ ಭೇಟಿನೀಡಿ ಪ್ರತಿಯೊಂದು ಜಿಲ್ಲೆಗೆ ಐದು ಮಾದರಿಯಂತೆ ಸ್ಯಾಂಪಲ್‌ಗಳನ್ನು ಡ್ರಾ ಮಾಡುತ್ತಾರೆ.

(2) ಡ್ರಾ ಮಾಡುವ ಪ್ರತಿಯೊಂದು ಮಾದರಿ (ಸ್ಯಾಂಪಲ್) ಬಟ್ಟೆಯ ಅಳತೆ ಕನಿಷ್ಠ ಮೂರು (3) ಮೀಟರ್ ಗಳಿಗಿಂತ ಕಡಿಮೆ ಇರಬಾರದು. ಮತ್ತು ಈ ಸ್ಯಾಂಪಲ್‌ಗಳನ್ನು ಗಂಡು ಮತ್ತು ಹೆಣ್ಣುಮಕ್ಕಳಿಗೆ ನೀಡುವ ಶರ್ಟ್ (ಮೇಲಂಗಿ) ಬಟ್ಟೆ, ಪಿ.ವಿ.ಶರ್ಟಿಂಗ್, ಗಂಡುಮಕ್ಕಳ ನಿಕ್ಕರ್/ಪ್ಯಾಂಟ್ ಬಟ್ಟೆ ಪಿ.ಸಿ.ಸೂಟಿಂಗ್ ಮತ್ತು ಹೆಣ್ಣುಮಕ್ಕಳ ಸ್ಕರ್ಟ್ 2/40 ಪಿ.ವಿ.ಬಟ್ಟೆ ಈ ಮೂರೂ ಸಮವಸ್ತ್ರಬಟ್ಟೆಗಳ ಸ್ಯಾಂಪಲ್‌ಗಳನ್ನು ಡ್ರಾಮಾಡಲಾಗುತ್ತದೆ.

4

(3) ಸರಬರಾಜುದಾರರು ಒದಗಿಸಿದ ಪ್ರೊಡಕ್ಷನ್ ಅಂಡ್ ಡೆಲಿವರಿ ಶೆಡ್ಯೂಲ್ ಅನುಸರಿಸಿ ಸಂಸ್ಥೆ ಉತ್ಪನ್ನ ಮಾಡಿದ ವಿವಿಧ ಲಾಟ್‌ಗಳಲ್ಲಿನ ಬಟ್ಟೆಗಳನ್ನು ತಾಂತ್ರಿಕ ಪರೀಕ್ಷೆಗಾಗಿ ರ್‍ಯಾಂಡಮ್ ಸೆಲೆಕ್ಷನ್ ಮಾಡಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಇದಕ್ಕೆ ಸರಬರಾಜುದಾರರು ಸಂಪೂರ್ಣ ಸಹಕಾರ ನೀಡಬೇಕು

(4) ಅಗತ್ಯ ಬಿದ್ದಲ್ಲಿ ಬಟ್ಟೆಗಳ ತಯಾರಿಕಾ ಘಟಕಗಳಿಗೆ ಭೇಟಿನೀಡಿ ಪರಿಶೀಲನೆ/ ಬಟ್ಟೆಗಳ ಗುಣಮಟ್ಟದ ಪರೀಕ್ಷೆನಡೆಸಲು ಟೆಕ್ನಿಕಲ್ ಕಮಿಟಿ ರಚಿಸುವ ಪೂರ್ಣ ಅಧಿಕಾರ ಖರೀದಿದಾರರಿಗೆ ಇರುತ್ತದೆ. ಹೀಗೆ ರಚಿಸಿದ ಕಮಿಟಿ ಸದಸ್ಯರು ಸಮವಸ್ತ್ರ ಬಟ್ಟೆಗಳ ತಯಾರಿಕಾ ಘಟಕಗಳಿಗೆ ಭೇಟಿನೀಡಿದಾಗ ಅವರೊಂದಿಗೆ ಪೂರ್ಣ ಸಹಕಾರ ನೀಡುವ ಜವಾಬ್ದಾರಿ ಸರಬರಾಜುದಾರರದ್ದಾಗಿರುತ್ತದೆ.

(5) ಸರಬರಾಜು ದಾರರು ಬಟ್ಟೆಗಳನ್ನು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಾಗಾಣಿಕೆ ಮಾಡುವ ಮುನ್ನ ಕಾರ್ಯಾದೇಶದಲ್ಲಿ ನಮೂದಿಸಿರುವ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಂಖ್ಯೆಗೆ ಅನುಗುಣವಾಗಿ ಅಷ್ಟು ಸಂಖ್ಯೆಯ ಪೂರಾ ಬಟ್ಟೆಗಳ ಒಂದೊಂದು ಸ್ಯಾಂಪಲ್‌ಗಳನ್ನು ಹೊಂದಿರುವ 20 x 24 ಸೆಂ.ಮೀ. ಅಳತೆಯ ಸ್ಯಾಂಪಲ್ ಸ್ವಾಚೆಟ್‌ಗಳನ್ನು ಈ ಕಛೇರಿಗೆ ಒದಗಿಸುವುದು. ಈ ಸ್ಯಾಂಪಲ್‌ಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸಿ ಸರಬರಾಜಾದ ಬಟ್ಟೆಗಳ ಗುಣಮಟ್ಟ ಹೋಲಿಕೆ ಮಾಡಲು ಸೂಚಿಸಲಾಗುವುದು.

6. ಬಟ್ಟೆಗಳ ಒಪ್ಪಿಗೆ ಪ್ರಮಾಣ ಪತ್ರ :-

(1) ಬಟ್ಟೆಗಳ ಯಶಸ್ವೀ ಗುಣಮಟ್ಟ ಪರೀಕ್ಷೆಯ ನಂತರ ಅನುಬಂಧ-3 ರಂತೆ ತಾಲ್ಲೂಕು ಕೇಂದ್ರಗಳಿಗೆ (ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಗೆ) ಸರಬರಾಜು ಮಾಡಿದ ಬಟ್ಟೆಗಳ ಗುಣಮಟ್ಟವನ್ನು ಖಾತ್ರಿ ಮಾಡಿಕೊಂಡು ಸರಬರಾಜಾದ ಬಟ್ಟೆಯ ಒಪ್ಪಿಗೆ ಪ್ರಮಾಣಪತ್ರವನ್ನು ಸರಬರಾಜುದಾರರು ಮತ್ತು ತಾಲ್ಲೂಕು ಮಟ್ಟದಲ್ಲಿ ಖರೀದಿದಾರರ ಪ್ರತಿನಿಧಿಯಾದ ಸಾ.ಶಿ.ಇ. ಕ್ಷೇತ್ರ ಶಿಕ್ಷಣಾಧಿಕಾರಿ ಕಡ್ಡಾಯವಾಗಿ ದಿನಾಂಕವನ್ನು ನಮೂದಿಸಿ ಸ್ವೀಕೃತಿ ನೀಡಿರತಕ್ಕದ್ದು, ಈ ಪ್ರಮಾಣ ಪತ್ರದಮೇಲೆ ನಮೂದಿಸಲಾದ ದಿನಾಂಕವನ್ನು ಸಮವಸ್ತ್ರಬಟ್ಟೆಯನ್ನು ತಾಲ್ಲೂಕಿನಲ್ಲಿ ಸ್ವೀಕರಿಸಿದ ದಿನಾಂಕವೆಂದು ಪರಿಗಣಿಸಲಾಗುವುದು.

(2) ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದ ಸ್ವೀಕೃತಿಗಳ ಮೇಲೆ ದಿನಾಂಕ ನಮೂದಿಸಿ ಮೊಹರು ಹಾಕಿ ಸಹಿ ಮಾಡಿದ ಸ್ವೀಕೃತಿಗಳನ್ನು ಮಾತ್ರ ಪರಿಗಣಿಸಲಾಗುವುದು ಇದು ಖುದ್ದು ಸರಬರಾಜು ದಾರರ ಜವಾಬ್ದಾರಿ ಆಗಿದ್ದು, ಮೊಹರು/ಸಹಿ/ದಿನಾಂಕ ಹೊಂದಿರದ ಸ್ವೀಕೃತಿಗಳನ್ನು ಸರಬರಾಜುದಾರರ ಜವಾಬ್ದಾರಿಯ ಮೇಲೆ ತಿರಸ್ಕರಿಸಲಾಗುವುದು

7. ಬಟ್ಟೆಗಳ ಪ್ಯಾಕಿಂಗ್ :-

(1) ನಿಗಧಿತ ಸ್ಥಳಗಳಿಗೆ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ) ಸರಬರಾಜು ಮಾಡುವಾಗ ಸಮವಸ್ತ್ರ ಬಟ್ಟೆಗಳನ್ನು ಸೆಟ್ ರೂಪದಲ್ಲಿ ದೃಢವಾದ ಪ್ಯಾಕಿಂಗ್ ಮಾಡಿ ಸರಬರಾಜು ಮಾಡುವುದು.

(2) ಹೀಗೆ ಮಾಡಲಾದ ಪ್ಯಾಕಿಂಗ್ ಸಾಗಾಣಿಕೆಯಲ್ಲಿ (ಟ್ರಾನ್ಸಿಟ್) ಯಾವುದೇ ಕಾರಣಕ್ಕೆ ಹಾನಿ ಅಂದರೆ ಬಂಡಲ್‌ಗಳು ಮಳೆ/ಗಾಳಿ/ ಇನ್ನಿತರ ಎಲ್ಲಾ ಕಠಿಣ ಪರಿಸ್ಥಿತಿಗಳನ್ನು ನಿರಾಯಾಸವಾಗಿ ಎದುರಿಸಿ ಯಾವುದೇ ಹಾನಿ ಆಗದಂತೆ ಸಮವಸ್ತ್ರ ಬಟ್ಟೆಗಳು ಸುಸ್ಥಿತಿಯಲ್ಲಿ ಫಲಾನುಭವಿಗಳಿಗೆ ತಲುಪುವಂತೆ ಪ್ಯಾಕಿಂಗ್ ಮಾಡಿರಬೇಕು.

(3) ಸಮವಸ್ತ್ರಗಳ ಬಂಡಲ್‌ಗಳನ್ನು ತರಗತಿವಾರು ಬಂಡಲ್ ಮಾಡಬೇಕು. ಬಂಡಲ್ ಗಳ ಮೇಲೆ ತರಗತಿ, ಬಾಲಕರ / ಬಾಲಕಿಯರ ಬಟ್ಟೆಗಳ ಅಳತೆಯ ವಿವರ, ಬಂಡಲ್ ಗಳಲ್ಲಿರುವ ಸೆಟ್ ಗಳ ಸಂಖ್ಯೆ ವಿವರಗಳನ್ನು ಪ್ರತಿ ಬಂಡಲ್‌ಗಳ ಮೇಲೆ ಸ್ಪಷ್ಟವಾಗಿ ನಮೂದಿಸಿ ಸಂಸ್ಥೆಯ ಪ್ರತಿನಿಧಿಗಳು ದೃಢೀಕರಿಸಿರಬೇಕು.

(4) ಸಮವಸ್ತ್ರಗಳನ್ನು ಆಯಾ ತಾಲ್ಲೂಕುಗಳ ಮಕ್ಕಳ ಸಂಖ್ಯೆಗನುಗುಣವಾಗಿ ಸೆಟ್ ಗಳ ರೂಪದಲ್ಲಿ ಸರಬರಾಜು ಮಾಡಬೇಕು. ಬಿಡಿ ಬಿಡಿಯಾಗಿ ಷರ್ಟ್, ನಿಕ್ಕರ್, ಸ್ಕರ್ಟ್, ಇತ್ಯಾದಿಗಳ ಬಟ್ಟೆಯನ್ನು ಪ್ರತ್ಯೇಕವಾಗಿ ಸರಬರಾಜು ಮಾಡಬಾರದು. ಸಮವಸ್ತ್ರ ಸೆಟ್‌ಗಳನ್ನು ಸರಬರಾಜು ಮಾಡುವ ಮುಂಚೆ ಸರಬರಾಜುದಾರರು ಸಮವಸ್ತ್ರ ಬಟ್ಟೆಗಳನ್ನು ಅವರೇ ನಿರ್ಧಿಷ್ಟ ಪಡಿಸಿದ ಈ ಕಾರ್ಯಕ್ಕಾಗಿಯೇ ಸೂಕ್ತ ವ್ಯವಸ್ಥೆ ಹೊಂದಿದ ಒಂದು ಪ್ರತ್ಯೇಕ ಕೇಂದ್ರವನ್ನು ತೆರೆದು ಆ ಕೇಂದ್ರದಲ್ಲಿ ಎಲ್ಲಾ ಬಟ್ಟೆಗಳನ್ನು ಕ್ರೋಢೀಕರಿಸಿ ಸೆಟ್ ರೂಪದಲ್ಲಿಯೇ ಪ್ಯಾಕ್ ಮಾಡಿ ಅಲ್ಲಿಂದ ವಿವಿಧ ಜಿಲ್ಲೆ / ತಾಲ್ಲೂಕುಗಳಿಗೆ ಸೆಟ್ ಗಳ ರೂಪದಲ್ಲಿ ಮಾತ್ರ ಸರಬರಾಜು ಮಾಡಲು ಎಲ್ಲಾ ವ್ಯವಸ್ಥೆ ಗಳನ್ನು ಕಲ್ಪಿಸಿಕೊಳ್ಳುವುದು ಸರಬರಾಜು ಸಂಸ್ಥೆಗಳ ಜವಾಬ್ದಾರಿ ಆಗಿರುತ್ತದೆ.

(5) ಬೆಳಗಾವಿ ವಿಭಾಗಕ್ಕೆ ಸಂಬಂಧ ಪಟ್ಟಂತೆ ಬೆಳಗಾವಿ, ದಾರವಾಡ, ಉತ್ತರ ಕನ್ನಡ, ಶಿರ್ಸಿ, ವಿಜಯಪುರ, ಗದಗ, ಹಾವೇರಿ ಮತ್ತು ಚಿಕ್ಕೋಡಿ ಒಟ್ಟು 8 ಜಿಲ್ಲೆಗಳಿಗೆ ಸಂಬಂಧಿಸಿದಂತೆ ವಿತರಿಸಬೇಕಾದ ಶರ್ಟ್ ಬಟ್ಟೆಯನ್ನು ಮೆ. ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ(ಕೆ.ಎಸ್.ಟಿ.ಐ.ಡಿ.ಸಿ) ಸಂಸ್ಥೆಯಿಂದ ಪಡೆದುಕೊಂಡು ತರಗತಿವಾರು ಸೆಟ್ ಗಳನ್ನಾಗಿ ವಿಂಗಡಿಸಿ ಸೂಕ್ತ ಪ್ಯಾಕಿಂಗ್ ಮಾಡಿ ಸಂಬಂಧಿಸಿದ ತಾಲೂಕುಗಳಿಗೆ ರವಾನಿಸುವುದು.

8. ಸಮವಸ್ತ್ರ ಬಟ್ಟೆಗಳಿಗೆ ವಿಮೆ :-

(1) ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ-3 ರಂತೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣ ಅಧಿಕಾರಿಗಳ ಕಛೇರಿಗಳಿಗೆ ಸರಬರಾಜು ಮಾಡುವ ಸಮವಸ್ತ್ರ ಬಟ್ಟೆಗಳನ್ನು ತಯಾರಾದ ಸ್ಥಳದಿಂದ ನಿಗಧಿತ ಸ್ಥಳಗಳಿಗೆ ತಲುಪಿಸುವವರೆಗೆ ಸರಬರಾಜು ಮಾಡುವ ಬಟ್ಟೆಗಳ ಶೇಕಡಾ 110% ಮೌಲ್ಯಕ್ಕೆ ಯುದ್ಧ ಹಾಗೂ ಮುಷ್ಕರಗಳೂ ಸೇರಿದಂತೆ ಎಲ್ಲಾ ವಿಧದ ನಷ್ಟಗಳಿಗೂ ಒಳಪಟ್ಟಂತೆ ಪೂರ್ಣಪ್ರಮಾಣದ ವಿಮೆಯನ್ನು ಸರಬರಾಜುದಾರರು ಮಾಡಿಸಿರಬೇಕು.

416
472

9. ಸಮವಸ್ತ್ರ ಬಟ್ಟೆಗಳ ಸಾಗಾಣಿಕೆ :-

(1) ಸಮವಸ್ತ್ರಬಟ್ಟೆಗಳನ್ನು ಈ ಆದೇಶದ ಅನುಬಂಧ-2 ರಲ್ಲಿ ವಿವರಿಸಿದಂತೆ ಮತ್ತು ಬಟ್ಟೆಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಅನುಬಂಧದಲ್ಲಿನ ಟೆಕ್ನಿಕಲ್ ಸ್ಪೆಸಿಫಿಕೇಶನ್‌ಗೆ ಒಳಪಟ್ಟ ಬಟ್ಟೆಗಳನ್ನು ಮಾತ್ರ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ಪೂರ್ಣ ವಿಮೆಗೆ ಒಳಪಟ್ಟು ಸುಸ್ಥಿತಿಯಲ್ಲಿ ತಲುಪಿಸುವ ಜವಾಬ್ದಾರಿ ಸರಬರಾಜುದಾರರದ್ದಾಗಿರುತ್ತದೆ.

10. ಸರಬರಾಜುದಾರರು ನಿರ್ವಹಿಸಬೇಕಾದ ಪ್ರಾಸಂಗಿಕ ಸೇವೆಗಳು (ಇನ್ಸಿಡೆಂಟಲ್ ಸರ್ವೀಸಸ್):-

(1) ಸಮವಸ್ತ್ರ ಬಟ್ಟೆಗಳ ತಯಾರಕಾ ಘಟಕಗಳ ಸೂಕ್ತ ನಿರ್ವಹಣೆ, ಬಟ್ಟೆಗಳ ವಿಂಗಡಣೆ/ ತಾಲ್ಲೂಕುವಾರು ಸರಬರಾಜಿಗೆ ಬಟ್ಟೆಗಳನ್ನು ಕ್ರಸಂ-7 ರಲ್ಲಿ ವಿವರಿಸಿರುವ ರೀತಿಯಲ್ಲಿ ಸೆಟ್‌ವಾರು ಪ್ಯಾಕಿಂಗ್ ವ್ಯವಸ್ಥೆ, ಸಕಾಲದಲ್ಲಿ ನಿಗಧಿತ ಸಂಖ್ಯೆಯ ಸಮವಸ್ತ್ರ ಬಟ್ಟೆಗಳ ಸೆಟ್‌ಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಲುಪಿಸುವವರೆಗಿನ ಎಲ್ಲಾ ಕಾರ್ಯಗಳ ಮೇಲ್ವಿಚಾರಣೆ ಮತ್ತು ನಿರ್ವಹಣೆ.
(2) ಸರಬರಾಜು ಸಂಸ್ಥೆಯವರು ಬಟ್ಟೆಗಳ ಉತ್ಪಾದನೆ ಮತ್ತು ಸರಬರಾಜು ಪ್ರಗತಿಯ ಬಗ್ಗೆ ಪ್ರತಿ ಶನಿವಾರದಂದು ವರದಿಯನ್ನು ಕಡ್ಡಾಯವಾಗಿ ತಪ್ಪದೇ ಒಬ್ಬರು ಜವಾಬ್ದಾರಿಯುತ ಅಧಿಕಾರಿ/ನೌಕರರ ಮೂಲಕ ಮುಖ್ಯಾಂ ಶಿಕ್ಷಣ ಆಯುಕ್ತರ ಕಛೇರಿಗೆ ಸಲ್ಲಿಸುವುದು.
(3) ಸರಬರಾಜು ಮಾಡಿದ ಬಟ್ಟೆಗಳ ಬಣ್ಣ / ಗುಣಮಟ್ಟದಲ್ಲಿ ಯಾವುದೇ ಬದಲಾವಣೆ/ಕಳಪೆ ಗುಣಮಟ್ಟ ಇರಬಾರದು.
(4) ಸರಬರಾಜುದಾರರು ಈ ಮೇಲಿನ ಪ್ರಾಸಂಗಿಕ ಸೇವೆಗಳಲ್ಲದೆ ತತ್ಸಂಬಂಧ ಖರೀದಿದಾರರಿಗೆ ಅವಶ್ಯವೆನಿಸಿದ ಲಿಖಿತವಾಗಿ ತಿಳಿಸುವ ಇತರೆ ಸೇವೆಗಳನ್ನು ಒದಗಿಸಲು ಬದ್ಧರಾಗಿರತಕ್ಕದ್ದು.

11. ಸರಬರಾಜು ಮಾಡಿದ ಬಟ್ಟೆಗಳ ಗುಣಮಟ್ಟ ಖಾತ್ರಿಯ ಬಗ್ಗೆ:-

(1) ಈ ಆದೇಶದ ಅಡಿ ಸರಬರಾಜುದಾರರು ಸರಬರಾಜು ಮಾಡುವ ಸಮವಸ್ತ್ರ ಬಟ್ಟೆಗಳು ಹೊಸ / ಉಪಯೋಗಿಸದ ಬಟ್ಟೆಗಳಾಗಿದ್ದು, ಅನುಬಂಧ-2 ರಲ್ಲಿನ ಟೆಕ್ನಿಕಲ್ ಸ್ಪೆಸಿಫಿಕೇಶನ್‌ಗೆ ಪೂರಕವಾಗಿರುವ ಬಗ್ಗೆ ಮತ್ತು ಈ ಆದೇಶದ ಅಡಿ ಸರಬರಾಜು ಮಾಡುವ ಎಲ್ಲಾ ಸಮವಸ್ತ್ರ ಬಟ್ಟೆಗಳು ಭೌತಿಕವಾಗಿ / ವಿನ್ಯಾಸದಲ್ಲಿ / ತಯಾರಿಕೆಯಲ್ಲಿ ಯಾವುದೇ ನ್ಯೂನತೆ ಅಥವಾ ಲೋಪದೋಷಗಳಿಂದ ಕೂಡಿರುವುದಿಲ್ಲ ಎಂದು ಸರಬರಾಜುದಾರರು ಖರೀದಿದಾರರಿಗೆ ಖಾತ್ರಿ ಪಡಿಸಬೇಕು.
(2) ಈ ಖಾತ್ರಿ ನಿಯಮದಡಿ ಯಾವುದೇ ಕ್ಲೇಮು ಉದ್ಭವಿಸಿದಲ್ಲಿ ಖರೀದಿದಾರರು ಸರಬರಾಜು ದಾರರಿಗೆ ಬರವಣಿಗೆ ಮೂಲಕ ಪ್ರಕಟ ಪಡಿಸಬೇಕು.
(3) ಇಂತಹ ಸಂದರ್ಭದಲ್ಲಿ ಖರೀದಿದಾರರು ನೋಟೀಸ್‌ನಲ್ಲಿ ತಿಳಿಸಿದ ಅವಧಿಯೊಳಗೆ ಸರಬರಾಜುದಾರರು ನ್ಯೂನತೆ ಹೊಂದಿದ ಸಮವಸ್ತ್ರ ಬಟ್ಟೆಗಳನ್ನು ಹಿಂಪಡೆದು ಸೂಕ್ತ ನ್ಯೂನತೆ ಇಲ್ಲದ ಹೊಸಬಟ್ಟೆಯನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಯಾವುದೇ ಹೆಚ್ಚುವರಿ ವೆಚ್ಚ ಬಯಸದೆ ಸರಬರಾಜು ಮಾಡುವುದು.
(4) ಖರೀದಿದಾರರು ಸೂಚಿಸಿದ ಅವಧಿಯೊಳಗಾಗಿ ನ್ಯೂನತೆ ಇರುವ ಬಟ್ಟೆಗಳನ್ನು ಬದಲಾವಣೆ ಮಾಡಿಕೊಡಲು ಸರಬರಾಜು ದಾರರು ವಿಫಲರಾದಲ್ಲಿ ಪರಿಹಾರಕ್ಕಾಗಿ ಸರಬರಾಜುದಾರರ ಜವಾಬ್ದಾರಿಯಮೇಲೆ ಅಗತ್ಯವೆನಿಸಿದ ಯೋಗ್ಯ ಶಿಸ್ತು ಕ್ರಮ ಕೈಗೊಳ್ಳಲು ಖರೀದಿದಾರರು ಹಕ್ಕುಳ್ಳವರಾಗಿರುತ್ತಾರೆ.

12. ಸರಬರಾಜು ವೆಚ್ಚದ ಪಾವತಿ:-

(1) ಸರಬರಾಜುದಾರರು ಖರೀದಿದಾರರಿಗೆ ಸಮವಸ್ತ್ರ ಸರಬರಾಜು ವೆಚ್ಚದ ಪಾವತಿಯನ್ನು ಲಿಖಿತ ರೂಪದಲ್ಲಿ ಕೋರತಕ್ಕದ್ದು. ಹೀಗೆ ಪಾವತಿ ಕೋರುವಾಗ ಪಾವತಿ ಕೋರಿರುವ ಮೊತ್ತಕ್ಕೆ ಸರಿಹೊಂದುವಂತೆ ಸಮವಸ್ತ್ರಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಲುಪಿಸಿ ಅವರಿಂದ ಸಮವಸ್ತ್ರಗಳನ್ನು ಸುಸ್ಥಿತಿಯಲ್ಲಿ ಪಡೆದ. ಮೊಹರು/ಸಹಿ/ದಿನಾಂಕವನ್ನು ಸ್ಪಷ್ಟವಾಗಿ ನಮೂದಿಸಿದ ಸ್ವೀಕೃತಿ (ಇನ್ವಾಯ್ಸ್) ಗಳನ್ನು ಅವಶ್ಯವಾಗಿ ಲಗತ್ತಿಸಿರತಕ್ಕದ್ದು.
(2) ಹೀಗೆ ಸರಬರಾಜುದಾರರು ಕೋರಿದ ವೆಚ್ಚವನ್ನು ಕೋರಿಕೆ ಸಲ್ಲಿಸಿದ 90 (ತೊಂಭತ್ತು) ದಿನಗಳ ಒಳಗೆ ಪಾವತಿ ಮಾಡಲಾಗುವುದು
(3) ಸಮವಸ್ತ್ರಗಳನ್ನು ಸರಬರಾಜಿಸಿದ ಬಗ್ಗೆ ಸಂಸ್ಥೆಯವರು ಸರಬರಾಜು ವೆಚ್ಚವನ್ನು ಕ್ಲೇಮು ಮಾಡುವಾಗ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದ ಸ್ವೀಕೃತಿ ಗಳೊಂದಿಗೆ ಈ ಕಛೇರಿಗೆ ಸಲ್ಲಿಸಿದ ನಂತರ ಸರ್ಕಾರದಿಂದ ಈ ಯೋಜನೆಗಾಗಿ ಬಿಡುಗಡೆ ಆಗಿರುವ ಅನುದಾನವನ್ನು ಅನುಸರಿಸಿ ವೆಚ್ಚ ಪಾವತಿಸಲು ಇಲಾಖೆಯಿಂದ ಕ್ರಮ ತೆಗೆದುಕೊಳ್ಳಲಾಗುವುದು. ಸರಬರಾಜು ವೆಚ್ಚದ ಪಾವತಿಯು ರಾಜ್ಯ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡುವ ಕ್ರಮಕ್ಕೆ ಒಳಪಟ್ಟಿರುತ್ತದೆ.
(4) ಸರಬರಾಜುದಾರರಿಗೆ ವೆಚ್ಚವನ್ನು ಪಾವತಿಸುವ ಸಂದರ್ಭದಲ್ಲಿ ಸರಬರಾಜುದಾರರು ಮತ್ತು ಖರೀದಿದಾರರೊಂದಿಗೆ ಆಗಿರುವ ಒಪ್ಪಂದದ ರೀತಿಯಲ್ಲಿ ಅಂದರೆ ಈ ಆದೇಶದ ಅನುಬಂಧ ರಲ್ಲಿ ತಿಳಿಸಿರುವಂತೆ ಸರಬರಾಜು ಮಾಡುವ ಬಟ್ಟೆಯ ಪ್ರತಿ ಮೀಟರ್/ಸೆಟ್‌ಗೆ ನಿಗಧಿ ಪಡಿಸಿರುವ ದರದಲ್ಲಿ ಯಾವುದು ಕನಿಷ್ಠವೋ ಅದನ್ನು ಪರಿಗಣಿಸಿ ವೆಚ್ಚವನ್ನು ಪಾವತಿಸಲಾಗುವುದು. ದರಗಳು ನಿರ್ಧಾರಿತ / ನಿಗಧಿಪಡಿಸಿದ ದರಗಳಾಗಿದ್ದು, ಯಾವುದೇ ಕಾರಣಕ್ಕೆ ದರಗಳ ಬದಲಾವಣೆಗೆ ಅವಕಾಶ ಇರುವುದಿಲ್ಲ.
(5) ಸರಬರಾಜುದಾರರಿಗೆ ಸರಬರಾಜು ಮಾಡಿದ ಸಮವಸ್ತ್ರಬಟ್ಟೆಗಳ ವೆಚ್ಚವನ್ನು ಬಟ್ಟೆಗಳ ಸರಬರಾಜನ್ನು ಮಾಡಿ ಸಂಬಂಧಿಸಿದ ಅಧಿಕಾರಿ / ಪ್ರತಿನಿಧಿಯಿಂದ ಪಡೆದ ಸ್ವೀಕೃತಿಯ ಆಧಾರದಮೇಲೆ ಕರಾರಿನಲ್ಲಿ ಒಪ್ಪಂದವಾಗಿರುವ ದರದ ಶೇಕಡ 90% ರಷ್ಟು (ಬಟ್ಟೆಗಳಿಗೆ ನಿಗಧಿತ ಸ್ಪೆಸಿಫಿಕೇಶನ್ ನಲ್ಲಿನ ಯಾವುದೇ ಗುಣ ಅಥವಾ ಪಥ ಬದಲಾವಣೆಗೆ ಹಾಗೂ ವಿಳಂಬ ಸರಬರಾಜಿಗೆ ವಿಧಿಸುವ ದಂಡವನ್ನು ಹೊರತುಪಡಿಸಿ) ಪಾವತಿಸಲಾಗುವುದು.

47

(6) ಉಳಿದ ಶೇಕಡಾ 10% ಮೊತ್ತವನ್ನು ಬಟ್ಟೆಗಳ ಸರಬರಾಜು ಕಾರ್ಯ ಪೂರ್ಣಗೊಂಡು ಗುಣಮಟ್ಟ ಪರಿಶೀಲನಾ ಸಂಸ್ಥೆ ಯಿಂದ
ಗುಣಮಟ್ಟ ಪರೀಕ್ಷಾ ವರದಿ ಪಡೆದ ನಂತರ ನಿಯಮಾನುಸಾರ ದಂಡ ಶುಲ್ಕಗಳನ್ನು ಕಟಾಯಿಸಿ ಪಾವತಿಸಲಾಗುತ್ತದೆ.

(7) ಸರ್ಕಾರದಿಂದ ಬಿಡುಗಡೆ ಆದ ಅನುದಾನವನ್ನು ಅನುಸರಿಸಿ ಮತ್ತು ಲಭ್ಯ ಅನುದಾನದ ಆಧಾರದ ಮೇಲೆ ವೆಚ್ಚಗಳನ್ನು
ಪಾವತಿಸಲಾಗುತ್ತದೆ.

13. ಆದೇಶದ ಬದಲಾವಣೆ:-

(1) ಅರ್ಹನಾದರು ಯಾವುದೇ ಸಂದರ್ಭದಲ್ಲಿ ಸರಬರಾಜುದಾರರಿಗೆ ಲಿಖಿತ ಆದೇಶ ನೀಡುವ ಮೂಲಕ/ ಸಮವಸ್ತ್ರ ಬಟ್ಟೆಗಳಿಗೆ
ಸಂಬಂಧಿಸಿದಂತೆ ಈ ಆದೇಶದ ಸಾಮಾನ್ಯ ವ್ಯಾಪ್ತಿಗೊಳಪಟ್ಟು ಕೆಳಕಂಡ ಒಂದು ಅಥವಾ ಹೆಚ್ಚಿನ ಬದಲಾವಣೆ ತರಲು
ಖರೀದಿದಾರರಿಗೆ ಅಧಿಕಾರ ಇರುತ್ತದೆ.

(ಅ) ಖರೀದಿದಾರರಿಗೆ ನಿಶ್ಚಿತವಾಗಿ ತಯಾರು ಮಾಡಿ ಸರಬರಾಜು ಮಾಡಬೇಕಾದ ಬಟ್ಟೆಯ ರೂಪ/
ಮಾದರಿ / ವಿನ್ಯಾಸ/ ಸ್ಪೆಸಿಫಿಕೇಶನ್.

(ಆ) ಸಮವಸ್ತ್ರ ಬಟ್ಟೆಗಳನ್ನು ಒಯ್ಯುವ/ ಪ್ಯಾಕಿಂಗ್/ ವಿಧಾನ

(ಇ) ಸರಬರಾಜು ಮಾಡಬೇಕಾದ ಬಟ್ಟೆಗಳನ್ನು ತಲುಪಿಸಬೇಕಾದ ಸ್ಥಳ ಅಥವಾ

(ಈ) ಖರೀದಿದಾರರಿಗೆ ಸರಬರಾಜುದಾರರು ಒದಗಿಸಬೇಕಾದ ಸೇವೆಯ ಬಗ್ಗೆ.

(ಉ) ಸರಬರಾಜು ದಾರರಿಗೆ ವಹಿಸಿರುವ ಕಾರ್ಯದ ಒಟ್ಟಾರೆ ಪರಿಮಾಣದಲ್ಲಿ ಶೇಕಡ-15 ಹೆಚ್ಚಳ
ಅಥವಾ ಕಡಿಮೆ ಮಾಡುವ ಅಧಿಕಾರ ಖರೀದಿದಾರರಿಗೆ ಇರುತ್ತದೆ.

(2) ಇಂತಹ ಬದಲಾವಣೆಯಿಂದ ಸರಬರಾಜುದಾರರಿಗೆ ಬಟ್ಟೆಗಳ ಸರಬರಾಜಿನ ವೆಚ್ಚದಲ್ಲಿ ಆಗಬಹುದಾದ ಹೆಚ್ಚು ಅಥವಾ ಕಡಿಮೆ
ದರಗಳ ಬಗ್ಗೆ ಅಥವಾ ಸರಬರಾಜಿನ ಕಾಲಾವಧಿಯಲ್ಲಿ ಆಗಬಹುದಾದ ವ್ಯತ್ಯಯಗಳ ಬಗ್ಗೆ ಈ ಆದೇಶಕ್ಕೆ ಸೂಕ್ತ
ಪರಿಹಾರಪೂರ್ವಕ ಬದಲಾವಣೆಯನ್ನು ಲಿಖಿತವಾಗಿ ನೀಡಲಾಗುವುದು.
ಖರೀದಿದಾರರ ಮತ್ತು ಸರಬರಾಜುದಾರರ ಹೊಂದಾಣಿಕೆ ಬಗ್ಗೆ

(3) ಸರಬರಾಜುದಾರರ ಯಾವುದೇ ಕ್ಲೇಮುಗಳ ಬಗ್ಗೆ ಅಥವಾ ಖರೀದಿದಾರರ ಮತ್ತು ಸರಬರಾಜುದಾರರ ಹೊಂದಾಣಿಕೆ ಬಗ್ಗೆ ಯಾವುದೇ ಆದೇಶ ಹೊರಡಿಸಿದ 30 (ಮೂವತ್ತು)ದಿನಗಳ ಒಳಗಾಗಿ ಪರಿಹಾರ ಕಲ್ಪಿಸಿಕೊಳ್ಳಲು ಅವಕಾಶವಿರುತ್ತದೆ.

14. ಕರಾರು ಒಪ್ಪಂದದ ತಿದ್ದುಪಡಿ:-

(1) ಖರೀದಿದಾರರು ಮತ್ತು ಸರಬರಾಜುದಾರರಿಬ್ಬರೂ ಲಿಖಿತ ಒಪ್ಪಿ ಕರಾರು ಒಪ್ಪಂದದ ತಿದ್ದುಪಡಿಗೆ ಸಹಿಮಾಡದ ಹೊರತು
ಕರಾರಿನಲ್ಲಿನ ಯಾವುದೇ ಷರತ್ತು / ನಿಬಂಧನೆಗಳನ್ನು ಬದಲಾವಣೆ ಮಾಡತಕ್ಕದ್ದಲ್ಲ.

15. ನಿಯುಕ್ತ ಕಾರ್ಯ (Assignment) :-

(1) ಖರೀದಿದಾರರ ಪೂರ್ವ ಲಿಖಿತ ಒಪ್ಪಿಗೆ ಪಡೆಯದ ಹೊರತು ಸರಬರಾಜುದಾರರು ಈ ಕರಾರಿನಡಿ ನಿಯುಕ್ತ ವಾದ ಒಂದು
ಭಾಗ ಅಥವಾ ಪೂರ್ಣವಾಗಿ ಯಾವುದೇ ಕಾರ್ಯವನ್ನು ನಿರ್ವಹಿಸತಕ್ಕದ್ದಲ್ಲ.

16. ಉಪಕರಾರು (ಒಳ ಒಪ್ಪಂದ) (Sub Contract) :-

(1) ಸಮವಸ್ತ್ರಗಳ ಬಟ್ಟೆಯನ್ನು ರಾಜ್ಯದ ಕೈಮಗ್ಗಗಳ ಘಟಕಗಳಿಂದ ಮಾತ್ರ ಪಡೆದು ಸರಬರಾಜು ಮಾಡಬೇಕು. ಇತರ ಯಾವುದೇ
ಸಂಸ್ಥೆಗಳು ಅಥವಾ ಖಾಸಗಿ ಸಂಸ್ಥೆಗಳಿಂದ ಖರೀದಿಸಿ ಸರಬರಾಜು ಮಾಡತಕ್ಕದ್ದಲ್ಲ.

(2) ಸರಬರಾಜುದಾರರು ಈ ಕರಾರಿನಡಿ ಆದೇಶಿಸಿರುವ ಸಮವಸ್ತ್ರಗಳ ಸರಬರಾಜಿನ ಪೂರ್ಣ ಪ್ರಮಾಣದ ಅಥವಾ ಭಾಗಶಃ
ಪ್ರಮಾಣವನ್ನು ಉಪಕರಾರು ಮಾಡತಕ್ಕದ್ದಲ್ಲ.

17. ಕಾಂಟ್ರಾಕ್ಟ್ ನಿರ್ವಹಣೆಯಲ್ಲಿ ಸರಬರಾಜುದಾರರ(ಕಾಂಟ್ರಾಕ್ಟ್ ದಾರರ) ವಿಳಂಬ :-
ಅಂದರೆ ತಯಾರಿಸಿದ ಸಮವಸ್ತ್ರ ಬಟ್ಟೆಗಳನ್ನು

(1) ಈ ಕರಾರಿನಡಿ ಸರಬರಾಜುದಾರರು ನಿರ್ವಹಿಸಬೇಕಾದ ಕಾರ್ಯವನ್ನು ಅಂದರೆ ತಯಾರಿಸಿದ ಸಮವಸ್ತ್ರ ಬಟ್ಟೆಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ನಿಗಧಿ ಪಡಿಸಿರುವ ಅಂತಿಮ ದಿನಾಂಕದ ಒಳಗಾಗಿ ಚಾಚೂ ತಪ್ಪದ
ಸರಬರಾಜು ಕಾರ್ಯ ನಿರ್ವಹಿಸತಕ್ಕದ್ದು.

(2) ಯಾವುದೇ ಒಂದು ಸಂದರ್ಭದಲ್ಲಿ ಈ ಕರಾರಿನಡಿ ನಿರ್ವಹಿಸಲಾಗುವ ಕಾರ್ಯದಲ್ಲಿ ಸಮವಸ್ತ್ರಗಳ ಸರಬರಾಜನ್ನು ನಿಗಧಿತ
ಕಾಲಾವಧಿಯಲ್ಲಿ ಸರಬರಾಜು ಮಾಡಲು ತೊಡಕು ಉಂಟಾದ ಸಂದರ್ಭದಲ್ಲಿ ಸರಬರಾಜುದಾರರು ವಿಳಂಬಕ್ಕೆ ಸೂಕ್ತ ವಿವರಣೆ
ಮತ್ತು ಕಾರಣಗಳನ್ನು ಮತ್ತು ಈ ರೀತಿ ಉಂಟಾದ ತೊಡಕನ್ನು ಸರಿಪಡಿಸಲು ಬೇಕಾದ ಕಾಲಾವಧಿ ಬಗ್ಗೆ ಖರೀದಿದಾರರಿಗೆ
ಲಿಖಿತವಾಗಿ ತಿಳಿಸುವುದು. ಈ ರೀತಿ ಸರಬರಾಜುದಾರರಿಂದ ಸ್ವೀಕೃತ ಲಿಖಿತ ವಿವರಣೆ ಬಗ್ಗೆ ಖರೀದಿದಾರರು ಸಂದರ್ಭವನ್ನು
ಮೌಲ್ಯಮಾಪನ ಮಾಡಿ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಸರಬರಾಜು ದಾರರಿಗೆ ಸೂಕ್ತ ಕಾಲಾವಕಾಶವನ್ನು ದಂಡ ಸಹಿತ ಅಥವಾ
ದಂಡರಹಿತವಾಗಿ ಅನುಮತಿಸುವುದು, ಅಥವಾ ತಿರಸ್ಕರಿಸುವುದು ಖರೀದಿದಾರರ ವಿವೇಚನಾ ಅಧಿಕಾರಕ್ಕೆ ಒಳಪಟ್ಟಿರುತ್ತದೆ.

18. ನಷ್ಟ ಪರಿಹಾರ (Liquidated Damages) :-

(1) ಸರಬರಾಜುದಾರರು ಈ ಆದೇಶಕ್ಕೆ ಒಳಪಟ್ಟಂತೆ ಸಮವಸ್ತ್ರ ಬಟ್ಟೆಗಳ ಸರಬರಾಜನ್ನು ಭಾಗಶಃ ಅಥವಾ ಪೂರ್ಣ ಪ್ರಮಾಣದಲ್ಲಿ ಈ ಆದೇಶದಂತೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ನಿಗಧಿತ ಸಂಖ್ಯೆಯಲ್ಲಿ ಸಮವಸ್ತ್ರ ಸೆಟ್‌ಗಳನ್ನು ತಿಳಿಸಿರುವಂತೆ ನಿಗಧಿತ ಕಾಲಾವಕಾಶದೊಳಗೆ ತಲುಪಿಸಲು ವಿಫಲರಾದಲ್ಲಿ ಈ ಕರಾರಿನಡಿ ಖರೀದಿದಾರರು ಬೇರೆ ಪರಿಹಾರವಿಲ್ಲದೆ ವಿಳಂಬ ಸರಬರಾಜು ಮಾಡಿದ ಸಮವಸ್ತ್ರಬಟ್ಟೆಗಳ ಮೌಲ್ಯದ ಮೇಲೆ ಪ್ರತಿ ವಾರದ ವಿಳಂಬಕ್ಕೆ ವಾರಒಂದಕ್ಕೆ ಮೊದಲ ಎರಡು ವಾರಗಳ ವರಗೆ ಶೇಕಡ 1% ಹಾಗೂ ನಂತರದ ವಿಳಂಬಕ್ಕೆ ಶೇಕಡ 5% ಗರಿಷ್ಠ ಮಿತಿಗೊಳಪಟ್ಟು ಲಿಕ್ವಿಡೇಟೆಡ್ ಡ್ಯಾಮೇಜಸ್‌ಗಾಗಿ ದಂಡ ವಿಧಿಸಲಾಗುತ್ತದೆ.

19. ಕಾಂಟ್ರ್ಯಾಕ್ಟ್ ರದ್ದುಪಡಿಸುವಿಕೆ (Termination for Default) :-

(1) ಸರಬರಾಜುದಾರರು ಕರಾರಿನಲ್ಲಿನ ಯಾವುದೇ ಷರತ್ತು/ ಅಂಶಗಳನ್ನು ಉಲ್ಲಂಘಿಸಿದಲ್ಲಿ ತಪ್ಪಿನ ಬಗ್ಗೆ ಅಥವಾ ಉಲ್ಲಂಘಿಸಿದ ಅಂಶಗಳಬಗ್ಗೆ ಸರಬರಾಜುದಾರರಿಗೆ ಲಿಖಿತ ನೋಟೀಸ್ ನೀಡುವ ಮೂಲಕ ವಹಿಸಿರುವ ಕಾರ್ಯಾದೇಶವನ್ನು ಭಾಗಶಃ ಅಥವಾ ಪೂರ್ಣವಾಗಿ ರದ್ದುಪಡಿಸುವ ಅಧಿಕಾರ ಖರೀದಿದಾರರಿಗೆ ಇರುತ್ತದೆ.

(ಅ) ಸರಬರಾಜುದಾರರು ವಹಿಸಿರುವ ಕಾರ್ಯವನ್ನು ಪೂರ್ಣ ಅಥವಾ ಭಾಗಶಃ ನಿಗಧಿತ ಸಮಯದಲ್ಲಿ ಅಥವಾ ಖರೀದಿದಾರರು ಒಪ್ಪಿ ವಿಸ್ತರಿಸಲಾಗಿರುವ ದಿನಾಂಕದೊಳಗೆ ಪೂರ್ಣಗೊಳಿಸದ ಪಕ್ಷದಲ್ಲಿ.
(ಆ) ಸರಬರಾಜುದಾರರು ಈ ಕರಾರಿನ ಯಾವುದೇ ಅನಿವಾರ್ಯತೆಗಳನ್ನು ನಿರ್ವಹಿಸಲು ವಿಫಲರಾದಲ್ಲಿ.
(ಇ) ಸರಬರಾಜುದಾರರು ಈ ಕರಾರಿನ ನಿರ್ವಹಣೆಯಸಂಬಂಧ ಭ್ರಷ್ಟ ಅಥವಾ ವಂಚನೆ ಪ್ರಕರಣದಲ್ಲಿ ನಿರತರಾಗಿದ್ದರೆಂದು ಖರೀದಿದಾರರು ತೀರ್ಮಾನಿಸಲ್ಪಟ್ಟರೆ.

ಭ್ರಷ್ಟ ಅಥವಾ ವಂಚನೆ ಪ್ರಕರಣ ಎಂದರೆ ಈ ಕರಾರಿನ ಅನುಷ್ಠಾನದ ಪ್ರಕ್ರಿಯೆಯಲ್ಲಿ ಸಾರ್ವಜನಿಕ ಅಧಿಕಾರಿ/ನೌಕರರೊಂದಿಗೆ ಕರಾರಿನ ಬಗ್ಗೆ ಪ್ರಸ್ತಾಪಿಸುವುದು/ ಯಾವುದೇ ಮೌಲ್ಯ ಅಥವಾ ಬೇಡಿಕೆ ಮುಂದಿಡುವುದು.
ವಂಚನೆ ಪ್ರಕರಣ ಎಂದರೆ ಕಾರ್ಯಾದೇಶವನ್ನು ಪಡೆಯುವ ಉದ್ದೇಶಕ್ಕಾಗಿ ವಾಸ್ತವಾಂಶ ಅಥವಾ ವಾಸ್ತವಗಳನ್ನು ತಿರುಚಿದ ದಾಖಲೆಗಳನ್ನು ಸಲ್ಲಿಸುವುದು ಮತ್ತು ಸರಬರಾಜು ಕಾರ್ಯಕ್ಕಾಗಿ ಬಿಡ್ ಸಲ್ಲಿಸುವ ಅಥವಾ ಇತರೆ ಸಂಸ್ಥೆಗಳೊಂದಿಗೆ ಸರಬರಾಜು ವೆಚ್ಚಕ್ಕೆ ಸಂಬಂಧಿಸಿದಂತೆ ಒಳಸಂಚು ರೂಪಿಸುವುದು.

(2) ಮೇಲಿನ ಸಂದರ್ಭಗಳಡಿ ಖರೀದಿದಾರರು ಸರಬರಾಜುದಾರರ ಕಾರ್ಯಾದೇಶವನ್ನು ಭಾಗಶಃ ಅಥವಾ ಪೂರ್ಣವಾಗಿ ರದ್ದುಗೊಳಿಸಿದ ಪಕ್ಷದಲ್ಲಿ ಖರೀದಿ ಮಾಡಬೇಕಾದ ಸಮವಸ್ತ್ರ ಬಟ್ಟೆಗಳನ್ನು ತನಗೆ ಸೂಕ್ತವೆನಿಸಿದ ಕ್ರಮವನ್ನು ಅನುಸರಿಸಿ ಖರೀದಿಮಾಡಲು ಹಕ್ಕುಳ್ಳವರಾಗಿರುತ್ತಾರೆ. ಇಂತಹ ಸಂದರ್ಭದಲ್ಲಿ ತಗಲಬಹುದಾದ ಹೆಚ್ಚುವರಿ ವೆಚ್ಚವನ್ನು ಮೊದಲಿನ (ಕರಾರು ರದ್ದುಪಡಿಸಲಾದ) ಸರಬರಾಜುದಾರರೇ ಭರಿಸಬೇಕಾಗುತ್ತದೆ ಮತ್ತು ರದ್ದು ಮಾಡಲ್ಪಡದ ಭಾಗದ ಸರಬರಾಜನ್ನು ಮುಂದುವರಿಸತಕ್ಕದ್ದಾಗಿರುತ್ತದೆ.

20. ಗುಣಮಟ್ಟದ ಉಲ್ಲಂಘನೆಗಾಗಿ ದಂಡ (Penalty for Quality Deviation) :-

(1) ಸರಬರಾಜು ಮಾಡಲ್ಪಟ್ಟ ಸಮವಸ್ತ್ರ ಬಟ್ಟೆಗಳು ಈ ಕಾರ್ಯಾದೇಶದ ಅನುಬಂಧ-2 ರಲ್ಲಿನ ಟೆಕ್ನಿಕಲ್ ಸ್ಪೆಸಿಫಿಕೇಶನ್ ನಲ್ಲಿ ಹೇಳಿರುವಂತೆ ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಕಡ್ಡಾಯವಾಗಿರುತ್ತದೆ. ಹೀಗೆ ಗುಣಮಟ್ಟ ಕಾಯ್ದುಕೊಂಡಿರುವುದನ್ನು ದೃಢಪಡಿಸಿಕೊಳ್ಳಲು ಖರೀದಿದಾರರು ಸೂಕ್ತ ತಾಂತ್ರಿಕ ಪರೀಕ್ಷೆಗಳನ್ನು ಅನುಸರಿಸಬೇಕಾಗುತ್ತದೆ. ಈ ಕುರಿತು ಪರೀಕ್ಷೆಯ ವಿಧಾನ ಅನುಸರಿಸುವ ಕ್ರಮಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ನಿರ್ಧರಿಸುತ್ತಾರೆ. ಸಮವಸ್ತ್ರಗಳ ಗುಣಮಟ್ಟವು ಟೆಕ್ನಿಕಲ್ ಸ್ಪೆಸಿಫಿಕೇಶನ್ ಗಳಿಗೆ ಪೂರಕವಾಗಿರುವ ಬಗ್ಗೆ ತಾಂತ್ರಿಕ ಪರಿಶೀಲನೆಯನ್ನು ಭಾರತ ಸರ್ಕಾರ ಸ್ವಾಮ್ಯದ ಸಂಸ್ಥೆಗಳಿಂದ ನಿರ್ವಹಿಸಲಾಗುವುದು.

(2) ಸರಬರಾಜು ಮಾಡಿದ ಸಮವಸ್ತ್ರಗಳು ಇಲಾಖೆ ನಿರ್ದಿಷ್ಟ ಪಡಿಸಿರುವ ಸ್ಪೆಸಿಫಿಕೇಶನ್‌ಗಳನ್ನು ಉಲ್ಲಂಘಿಸಿದಲ್ಲಿ ಅಥವಾ ವಿಚಲನೆ ಆಗಿದ್ದಲ್ಲಿ ನಿರ್ದಿಷ್ಟ ಸ್ಪೆಸಿಫಿಕೇಶನ್ ಮೀರಿದ ಅಂಕಗಳಿಗೆ ದಂಡ ವಿಧಿಸುವ ಅಥವಾ ದೋಷಪೂರಿತ ಬಟ್ಟೆಗಳನ್ನು ತಿರಸ್ಕರಿಸುವ ವಿವೇಚನಾಧಿಕಾರ ಇಲಾಖಾ ಮುಖ್ಯಸ್ಥರಿಗೆ ಇರುತ್ತದೆ. ಅಲ್ಲದೆ ಬಟ್ಟೆಗಳ ತಾಂತ್ರಿಕ ಪರೀಕ್ಷೆ ನಡೆಸಿದ ಸಂಸ್ಥೆಯವರು ನೀಡಿರುವ ವರದಿಯ ಆಧಾರದ ಮೇಲೆ ಗುಣಮಟ್ಟವನ್ನು ಉಲ್ಲಂಘಿಸಿದ ಸಮವಸ್ತ್ರ ಬಟ್ಟೆಗಳಿಗೆ ಪ್ರತಿಯೊಂದು ಪ್ಯಾರಾ ಮೀಟರನ್ನು ಗಣನೆಗೆ ತೆಗೆದುಕೊಂಡು ಗುಣಮಟ್ಟ ಉಲ್ಲಂಘಿಸಿದ ಬಟ್ಟೆಗಳ ಸರಬರಾಜು ಮೌಲ್ಯಕ್ಕೆ ಶೇಕಡ 10% ವರೆಗೆ ದಂಡವನ್ನು ವಿಧಿಸಲು ಹಾಗೂ ದಂಡ ವಿಧಿಸುವ ಕ್ರಮವನ್ನು ತೀರ್ಮಾನ ಮಾಡಲು ಸಾ.ಶಿ.ಇ. ಆಯುಕ್ತರಿಗೆ ಅಧಿಕಾರ ಇರುತ್ತದೆ.

(3) ಅಲ್ಲದೆ ಬಟ್ಟೆಗಳ ಪರೀಕ್ಷಾವರದಿಯು ನಿಗಧಿತ ಸ್ಪೆಸಿಫಿಕೇಶನ್ ನಲ್ಲಿನ ಗುಣಗಳನ್ನು ಒಪ್ಪಲು ಸಾಧ್ಯವಿಲ್ಲದ ಮಟ್ಟಿಗೆ ಉಲ್ಲಂಘನೆ ಆಗಿದ್ದಲ್ಲಿ ಅಂತಹ ಸೆಟ್‌ಗಳ ಪೂರ್ಣ ಪ್ರಮಾಣವನ್ನು ತಿರಸ್ಕರಿಸಿ ಬದಲಿಗೆ ಬೇರೆ ಪೂರ್ಣ ಗುಣಮಟ್ಟಕ್ಕೆ ಹೊಂದಾಣಿಕೆ ಆಗುವಂತಹ ಹೊಸ ಬಟ್ಟೆಗಳನ್ನು ಸರಬರಾಜು ಮಾಡಲು ಆದೇಶಿಸುವ ಅಧಿಕಾರ ಖರೀದಿದಾರರಿಗೆ ಇರುತ್ತದೆ.

21. ಖರೀದಿದಾರರ ಸೌಕರ್ಯದ ಮೇರೆಗೆ ಕರಾರಿನ ರದ್ದತಿ:-

(1) ಖರೀದಿದಾರರು ಯಾವುದೇ ಸಂದರ್ಭದಲ್ಲಿ ತಮ್ಮ ಸೌಕರ್ಯದ ಹಿನ್ನೆಲೆಯಲ್ಲಿ ಸರಬರಾಜುದಾರರಿಗೆ ಲಿಖಿತ ನೋಟೀಸ್ ನೀಡಿ ಪೂರ್ಣ ಅಥವಾ ಭಾಗಶಃ ಕರಾರನ್ನು ರದ್ದುಪಡಿಸಬಹುದಾಗಿದೆ. ಹೀಗೆ ರದ್ದುಪಡಿಸುವಾಗ ನೋಟೀಸಿನಲ್ಲಿ ಖರೀದಿದಾರರ ಸೌಕರ್ಯಕ್ಕಾಗಿ ಎಂದು ತಿಳಿಸಿ ಅದಕ್ಕೆ ಕಾರಣಗಳನ್ನು ಸ್ಪಷ್ಟವಾಗಿ ನಮೂದಿಸಬೇಕು, ಮತ್ತು ಕರಾರಿನ ಎಷ್ಟು ಭಾಗವನ್ನು ರದ್ದುಪಡಿಸಿದೆ ಎಂಬುದನ್ನು ಮತ್ತು ಸದರಿ ರದ್ದುಆದೇಶ ಯಾವ ದಿನಾಂಕ ದಿಂದ ಜಾರಿಗೆ ಬರುತ್ತದೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಿರಬೇಕು.

(2) ಇಂತಹ ಸಂದರ್ಭದಲ್ಲಿ ಖರೀದಿದಾರರ ರದ್ದು ಆದೇಶವನ್ನು ಸ್ವೀಕರಿಸಿದ ಸರಬರಾಜುದಾರರು ಈ ಆದೇಶ ಸ್ವೀಕರಿಸಿದ ದಿನಾಂಕದಿಂದ 07 (ಏಳು) ದಿನಗಳ ವರೆಗಿನ ಅವಧಿಯಲ್ಲಿ ಸರಬರಾಜಿಗೆ ತಯಾರಾಗಿರುವ ಬಟ್ಟೆಗಳನ್ನು ಖರೀದಿದಾರರು ಕರಾರಿನಲ್ಲಿ ನಿಗಧಿಯಾಗಿರುವ ದರಗಳಂತೆ ಒಪ್ಪಿಕೊಳ್ಳತಕ್ಕದ್ದು ಮತ್ತು ಉಳಿದ ಸಮವಸ್ತ್ರ ಬಟ್ಟೆಗಳ ಬಗ್ಗೆ ಖರೀದಿದಾರರ ನಿರ್ಣಯವೇ ಅಂತಿಮವಾಗಿರುತ್ತದೆ.

(ಅ) ಇಂತಹ ಸಂದರ್ಭದಲ್ಲಿ ಕರಾರಿನಲ್ಲಿ Delivery Schedule ಪ್ರಕಾರ ನಿಗಧಿಪಡಿಸಿದ ಅವಧಿ, ಒಪ್ಪಿರುವ ಷರತ್ತು ಮತ್ತು ದರಗಳನ್ವಯ ಅಥವಾ

(ಆ) ಜ್ಞಾಪನವನ್ನು ರದ್ದುಗೊಳಿಸಿ Delivery Schedule ಪ್ರಕಾರ ಭಾಗಶಃ ಸರಬರಾಜಾಗಿರುವ ಸಮವಸ್ತ್ರಬಟ್ಟೆಗಳಿಗೆ ನಿಗಧಿತ ವೆಚ್ಚವನ್ನು ಪಾವತಿಸುವುದು.

22. ವಿವಾದಗಳ ಬಗೆಹರಿಸುವಿಕೆ:-

(1) ಈ ಕರಾರಿನಡಿ ಅಥವಾ ಬೇರಾವುದೇ ಕಾರಣಕ್ಕಾಗಲಿ ಖರೀದಿದಾರರು ಮತ್ತು ಸರಬರಾಜುದಾರರ ನಡುವೆ ಯಾವುದೇ ವಿವಾದಗಳು, ಭಿನ್ನಾಭಿಪ್ರಾಯಗಳು, ಅಸಮ್ಮತಿ ಉದ್ಭವಿಸಿದಲ್ಲಿ ಸೌಹಾರ್ದಯುತವಾಗಿ ನೇರವಾದ ಅನೌಪಚಾರಿಕ ಮಾತುಕತೆಗಳ ಮೂಲಕ ಬಗೆಹರಿಸಿಕೊಳ್ಳುವ ಎಲ್ಲಾ ಪ್ರಯತ್ನಗಳನ್ನು ಮಾಡುವುದು.

(2) ಈ ರೀತಿಯಾಗಿ ಪ್ರಯತ್ನಗಳನ್ನು ನಡೆಸಿದ 30 (ಮೂವತ್ತು) ದಿನಗಳ ಒಳಗೆ ಭಿನ್ನಾಭಿಪ್ರಾಯಗಳು ಬಗೆಹರಿಯದಿದ್ದಲ್ಲಿ ಖರೀದಿದಾರರಾಗಲಿ, ಸರಬರಾಜುದಾರರಾಗಲಿ ಮತ್ತೊಬ್ಬರಿಗೆ ನೋಟೀಸ್ ನೀಡುವ ಮೂಲಕ ಸಮಸ್ಯೆಯನ್ನು ಮತ್ತೊಬ್ಬರ ಮಧ್ಯಸ್ಥಿಕೆ ಮೂಲಕ ಬಗೆಹರಿಸುವ ಪ್ರಯತ್ನದ ಬಗ್ಗೆ ಸಹಕರಿಸಬೇಕು. ಹೀಗೆ ಮುಂಚಿತವಾಗಿ ಸೂಚನೆ ನೀಡದೆ ಮಧ್ಯಸ್ಥಿಕೆಯನ್ನು ಪ್ರಾರಂಭಿಸತಕ್ಕದ್ದಲ್ಲ.

(3) ಈ ರೀತಿ ನೋಟೀಸ್ ನೀಡಿದ ನಂತರ ಅಂತಿಮವಾಗಿ ಇಲಾಖಾ ಮುಖ್ಯಸ್ಥರಿಂದ ಅಥವಾ ಇಲಾಖೆಯ ಕಾರ್ಯದರ್ಶಿಯವರ ಮಧ್ಯಸ್ಥಿಕೆ ಪಡೆದು ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳತಕ್ಕದ್ದು, ಈ ರೀತಿ ಮಧ್ಯಸ್ಥಿಕೆಯನ್ನು ಸಮವಸ್ತ್ರ ಸರಬರಾಜಿನ ಪೂರ್ವದಲ್ಲಾಗಲಿ, ಸರಬರಾಜು ಪ್ರಾರಂಭಿಸಿರುವ ಸಮಯದಲ್ಲಾಗಲಿ, ಸರಬರಾಜಿನ ನಂತರವಾಗಲಿ ಪ್ರಾರಂಭಿಸಲು ಅವಕಾಶ ಇರುತ್ತದೆ.

(4) ಇಂತಹ ಪ್ರಕರಣಗಳಲ್ಲಿ ಮಾನ್ಯ ಶಿಕ್ಷಣ ಕಾರ್ಯದರ್ಶಿಯವರ ತೀರ್ಮಾನವೇ ಅಂತಿಮವಾಗಿದ್ದು, ಇವರ ತೀರ್ಮಾನಕ್ಕೆ ಎರಡೂ ಪಕ್ಷಗಳೂ ಬದ್ಧರಾಗಿರತಕ್ಕದ್ದು. ಈ ರೀತಿಯ ಆರ್ಬಿಟ್ರೇಶನ್ ನಡಾವಳಿಗಳಿಗೆ ತಗಲುವ ಎಲ್ಲಾ ವೆಚ್ಚಗಳನ್ನೂ ಆರ್ಬಿಟ್ರೇಶನ್ ತೀರ್ಮಾನದಂತೆ ಪಾವತಿಸತಕ್ಕದ್ದು. ಆದರೆ ಈ ಕಾರ್ಯಕ್ಕಾಗಿ ತಯಾರಿಸಿ ಮಂಡಿಸುವ ದಾಖಲೆಗಳಿಗೆ ತಗಲುವ ವೆಚ್ಚವನ್ನು ಸಂಬಂಧಿಸಿದ ಆಯಾ ವ್ಯಕ್ತಿಗಳೇ ಭರಿಸತಕ್ಕದ್ದು.

(5) ಈ ಮಧ್ಯೆ ವಿವಾದಗಳಿಗೆ ಸಂಬಂಧಿಸಿದಂತೆ ಖರೀದಿದಾರರು ಹಾಗೂ ಸರಬರಾಜು ದಾರರ ನಡುವೆ ಪರಸ್ಪರ ಲಿಖಿತ ಒಪ್ಪಂದ ಏರ್ಪಡದ ಹೊರತು ಸರಬರಾಜುದಾರರು/ಖರೀದಿದಾರರು ಕಾಂಟ್ರ್ಯಾಕ್ಟ್ ನಂತೆ ಕಾರ್ಯವನ್ನು/ ತಮ್ಮ ಜವಾಬ್ದಾರಿಗಳನ್ನು ಮುಂದುವರೆಸತಕ್ಕದ್ದು.

(6) ಮತ್ತು ಖರೀದಿ ದಾರರು ಸರಬರಾಜುದಾರರಿಗೆ ಬಾಕಿ ಇರುವ ವೆಚ್ಚವನ್ನು ಕರಾರಿನಂತೆ ಪಾವತಿಸುವುದು.

50

146

23. ಜವಾಬ್ದಾರಿಯ ಮಿತಿ (Limitation of liability) :-

(1) ಅನುರೂಪವಾಗಿ ಕ್ರಿಮಿನಲ್ ಉದಾಸೀನತೆ ಅಥವಾ ಬೇಕೆಂದೇ ಮಾಡಿದ ತಪ್ಪುಗಳ ಸಂದರ್ಭದಲ್ಲಿ

(2) ಈ ಕರಾರಿನಲ್ಲಿನ ಯಾವುದೇ ಲೋಪದ ಪರಿಣಾಮವಾಗಿ ಉದ್ಭವಿಸಿದ ನಷ್ಟ ಅಥವಾ ಹಾನಿಗೆ ಸರಬರಾಜುದಾರ ಯಾವುದೇ ರೀತಿಯ ನಷ್ಟ ತುಂಬಿಕೊಡಲು ಜವಾಬ್ದಾರನಾಗಿರುವುದಿಲ್ಲ. ಈ ವಿವರಣೆಯು ಸರಬರಾಜುದಾರ ಸರಬರಾಜು ಮಾಡಿದ ಸಮವಸ್ತ್ರ ಬಟ್ಟೆಗಳ ಗುಣಮಟ್ಟಕ್ಕೆ ಮತ್ತು ವಿಳಂಬ ಸರಬರಾಜಿಗೆ ವಿಧಿಸುವ ದಂಡಗಳಿಗೆ ಅನ್ವಯಿಸುವುದಿಲ್ಲ.

(3) ಯಾವುದೇ ಕಾರಣಕ್ಕೆ ಉದ್ಭವಿಸುವ ಸಮಸ್ಯೆಗಳ ಬಗ್ಗೆ ಅಥವಾ ಖರೀದಿದಾರರ ಯಾವುದೇ ಆದೇಶದಿಂದ ಸರಬರಾಜುದಾರರು ಬಾಧಿತರಾದಲ್ಲಿ ಅಂತಹ ಬಾಧಿತ ಆದೇಶ ಹೊರಡಿಸಿದ 15 ದಿನಗಳ ಒಳಗಾಗಿ ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಲ್ಲಿ ಆಕ್ಷೇಪಣೆಯನ್ನು ಸಲ್ಲಿಸತಕ್ಕದ್ದು.

24. ತೆರಿಗೆಗಳು ಮತ್ತು ಕರಗಳು (Taxes and Duties) :-

(1) ಸಮವಸ್ತ್ರಗಳು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ತಲುಪಿಸುವವರೆಗಿನ / ಕರಗಳು / ಲೈಸೆನ್ಸ್ ಫೀ / ಆಕ್ಟ್ರಾಯ್ / ವ್ಯಾಟ್ / ರೋಡ್ ಪರ್ಮಿಟ್ ಮುಂತಾದ ಎಲ್ಲಾ ವೆಚ್ಚಗಳಿಗೂ ಸರಬರಾಜುದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

25. ಬಟ್ಟೆಗಳ ತಾಂತ್ರಿಕ ಗುಣಮಟ್ಟದ ಪರೀಕ್ಷಾ ಶುಲ್ಕದ ವೆಚ್ಚವನ್ನು ಸಂಬಂಧಿಸಿದ ಸರಬರಾಜು ಸಂಸ್ಥೆಯೇ ಭರಿಸತಕ್ಕದ್ದು. ಮತ್ತು ಈ ವೆಚ್ಚವನ್ನು ಸರಬರಾಜು ಸಂಸ್ಥೆ ನೇರವಾಗಿ ತಾಂತ್ರಿಕ ಸಂಸ್ಥೆಗೆ ಪಾವತಿಸತಕ್ಕದ್ದು. ಈ ಬಗ್ಗೆ ಶಿಕ್ಷಣ ಇಲಾಖೆ ಯಾವುದೇ ಜವಾಬ್ದಾರಿ ವಹಿಸುವುದಿಲ್ಲ.

26. ಆದೇಶದಲ್ಲಿ ಸರಬರಾಜಿಗೆ ನಿಗಧಿಪಡಿಸಿರುವ ಸಮವಸ್ತ್ರಗಳ ಪ್ರಮಾಣದಲ್ಲಿ ಶೇಕಡ 15% ವರೆಗೆ ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಅಧಿಕಾರ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಗೆ ಇರುತ್ತದೆ. ಮತ್ತು ಇಂತಹ ಹೆಚ್ಚಳ ಅಥವಾ ಕಡಿಮೆ ಮಾಡಿದ ಕಾರಣಕ್ಕೆ ಸರಬರಾಜು ಸಂಸ್ಥೆಗೆ ಈ ಕರಾರಿನಡಿ ಒಪ್ಪಿಗೆಯಾಗಿರುವ ನಿಗಧಿಪಡಿಸಿರುವ ದರದಲ್ಲಿ ಮಾತ್ರ ಲೆಕ್ಕಾಚಾರ ಮಾಡಿ ವೆಚ್ಚವನ್ನು ಪಾವತಿಸಲಾಗುವುದು.

ಈ ಆದೇಶ ದೊಂದಿಗೆ ಇರುವ ಲಗತ್ತುಗಳು:-

1. ಅನುಬಂಧ-1 : 2017-18ನೇ ಸಾಲಿಗೆ ಸರಬರಾಜು ಮಾಡಬೇಕಾದ ಸಮವಸ್ತ್ರ ಬಟ್ಟೆಗಳ ಬಣ್ಣ, ಅಳತೆ, ಪ್ರತಿ ಮೀಟರ್‌ಗೆ ನಿಗಧಿ ಪಡಿಸಿರುವ ದರಗಳ ವಿವರ.
2. ಅನುಬಂಧ-2 : ಸರಬರಾಜು ಮಾಡಬೇಕಾಗಿರುವ ಸಮವಸ್ತ್ರ ಬಟ್ಟೆಗಳ ತಾಂತ್ರಿಕ ಸ್ಪೆಸಿಫಿಕೇಶನ್
3. ಅನುಬಂಧ-3 : ಸಮವಸ್ತ್ರ ಬಟ್ಟೆ ತಾಲ್ಲೂಕುವಾರು ತರಗತಿವಾರು ಸೆಟ್‌ಗಳ ರೂಪದಲ್ಲಿ ಒದಗಿಸಬೇಕಾದ ಸಂಖ್ಯೆಯ ವಿವರ, ಈ ವಿವರಗಳನ್ನು ಸಂಸ್ಥೆ ಈ ಕಛೇರಿಗೆ ಸಲ್ಲಿಸಬೇಕಾದ ಕರಾರು ಒಪ್ಪಂದ ಪತ್ರವನ್ನು ಸಲ್ಲಿಸಿ ಅನುಬಂಧವನ್ನು ಪಡೆದುಕೊಳ್ಳುವುದು.

(ಸೌಜನ್ಯ, ಭಾ.ಆ.ಸೇ)
ಆಯುಕ್ತರು,

ಕರ್ನಾಟಕ ಕೈಮಗ್ಗ ಅಭಿವೃದ್ಧಿ
ನಿಗಮ ನಿಯಮಿತದ ಪರವಾಗಿ

ಜಂಟಿ ನಿರ್ದೇಶಕರು

ಅನುಬಂಧ-01

2017-18ನೇ ಸಾಲಿಗೆ ಮೆ:ಕೆ.ಹೆಚ್.ಡಿ.ಸಿ ಸಂಸ್ಥೆ ಸರಬರಾಜು ಮಾಡಬೇಕಾದ ಸಮವಸ್ತ್ರ ಬಟ್ಟೆಗಳ ಬಣ್ಣ, ಅಳತೆ, ಪ್ರತಿ ಮೀಟರ್‌ಗೆ ನಿಗಧಿ ಪಡಿಸಿರುವ ದರ

ಕ್ರಸಂ	ಬಟ್ಟೆಯ ವಿವರ	ಬಣ್ಣ	ಪ್ರತಿ ಮೀ.ದರ
1	ಗಂಡು/ಹೆಣ್ಣು ಮಕ್ಕಳ ಮೇಲಂಗಿ ಬಟ್ಟೆ [ಪಾಲಿಯಸ್ಟರ್ ವಿಸ್ಕೋಸ್ ಷರ್ಟಿಂಗ್]	ಲೈಟ್ ಬ್ಲೂ	65.00
2	ಗಂಡು ಮಕ್ಕಳ ನಿಕ್ಕರ್/ ಪ್ಯಾಂಟ್ ಬಟ್ಟೆ (ಪಾಲಿಯಸ್ಟರ್ ಕಾಟನ್ ಸೂಟಿಂಗ್]	ನೇವಿ ಬ್ಲೂ	130.00
3	ಹೆಣ್ಣುಮಕ್ಕಳ ಸ್ಕರ್ಟ್ ಬಟ್ಟೆ (2/40 ಪಿ.ವಿ.ಬಟ್ಟೆ]	ನೇವಿ ಬ್ಲೂ	68.00

Classes	Discription	Measurement in running metres	Width
I & II	Boys-H.Pant	0.50	54"
	Boys - Shirt	1.10	36"
	Girls - Skirt	1.20	36"
	Girls - Shirt	1.10	36"
III & IV	Boys-H.Pant	0.55	54"
	Boys - Shirt	1.20	36"
	Girls - Skirt	1.40	36"
	Girls - Shirt	1.20	36"
V to VII	Boys-H.Pant	0.60	54"
	Boys - Shirt	1.40	36"
V to VII	Girls Skirt	1.75	36"
	Girls Shirt	1.50	36"
VIII to X	Boys - Pant	1.20	54"
	Boys - Shirt	2.00	36"

ಆಯುಕ್ತರು
[illegible] ಸಾರ್ವಜನಿಕ ಶಿಕ್ಷಣ ಇಲಾಖೆ
ನೃಪತುಂಗ ರಸ್ತೆ, ಬೆಂಗಳೂರು - 01

ಕರ್ನಾಟಕ ಕೈಮಗ್ಗ ಅಭಿವೃದ್ಧಿ
ನಿಗಮ ನಿಯಮಿತದ ಪರವಾಗಿ

ಜಂಟಿ ನಿರ್ದೇಶಕರು

ಅನುಬಂಧ-02

TECHNICAL SPECFICATIONS FOR SUPPLY OF UNIFORMS FOR- 2017-18

Sl No	Specification		PC Suiting	PV Shirting	2/40s PV Cloth
1.	Count of Yarns (Approx)				Count of yarn[TCM]
	Warp		20/2 tex (2/30sNe) PC (+/- 10%)	10/2 tex (2/60s Ne) (+/- 10%)	2/40s PV (+/- 10%)
	Weft		20/2 tex (2/30s Ne) PC (+/- 10%)	80 Denier texturised Polyester filament (+/- 10%)	2/40s PV (+/- 10%)
2.	Threads/dm				Threads/inch
	Warp		240 (+/-5%) (60:EPI)	320 (+/- 5%) (EPI:80)	56 (+/- 5%) [IS 1963:1985]
	Weft		190 (+/- 5%) (48:PPI)	300 (+/- 5%) (PPI:76)	50 (+/- 5%) [IS 1963:1985]
3.	Blend Composition Percent	Warp	Polyester=67(+/- 5%)	Polyester=67 (+/- 5%)	Fibre Composition (IS:3416:1988) warp & weft P-67%(+/-5%) V-33% (+/-5%)
			Cotton=33(+/- 5%)	Viscose=33 (+/- 5%)	
		Weft	Polyester=67(+/- 5%)	Polyester	
			Cotton=33(+/- 5%)		
4.	Weight - Mass (Gms/mtr Sqr)		190 (+/- 5%)	100 Gsm (+/- 5%)	Weight /P.Sqr meter (TCM) 135 (+/- 5%)
5.	Breaking load on 5.0x20 cm strips, min				(Kgs) Min 20 cm2 reveled strip
	Warp way		88 kg	41 kg	60 kg (IS 1969:1985)
	weft way		63 kg	33 kg	60 kg
6.	Width Cm, Min		138 (+/- 1 cm)	90 (36 inches) (+/- 1 cm)	(IS) 90 (36 inches) (+/- 1 cm)
7.	Shrinkage (% Max)				Dimensional Changes (MAx)
	Warp way		2	2	(IS 2977) 2.0
	Weft way		2	2	2.0
8.	colour fAstness to:				
	➢ Light		AATCC 16-3.5 or better in 20 hours IS-5 or better	AATCC 16-3.5 or better in 20 hours IS-5 or better	(Min) [IS:2545] AATCC - 16 4 or better
	➢ Washing		4 or better	4 or better	[IS-764] CIC At 60°C - 4 or better St on adj Fab - 3 or better
	➢ Perspiration		4 or better	4 or better	CIC (IS 971) 4 or better St on Adj FAb - 3 or better
	➢ Rubbing		3 or better	4 or better	(IS 766) Dry - 4 or better Wet - 3 or better
9.	Pilling (After 5 hours of test)		IS 4 or better ASTM-D3512-3.5 or better	IS 4 or better ASTM-D3512-3.5 or better	ASTMD-3512-3/4 or better
10.	Weave		Plain	Plain	Plain
11.	Dye and colour		Disperse Vat Dye	Disperse Vat Dye	Disperse & reactive
12.	colour and Shade		Navy blue as per sample	Medium blue as per sample	Navy blue as per sample

E:\Uniform-2016-17\KHDC ORDER.Docx

ಕರ್ನಾಟಕ ಕೈಮಗ್ಗ ಅಭಿವೃದ್ಧಿ
ನಿಗಮ ನಿಯಮಿತದ ಪರವಾಗಿ

ಜಂಟಿ ನಿರ್ದೇಶಕರು

53

ಸೂಚಿಕೆ

ಕ್ರ.ಸಂ.	ಅನುಬಂಧ (3) (ಅ)
1.	ಅನುಬಂಧ-3 ಅ 2017-18ನೇ ಸಾಲಿನ ಸರಬರಾಜು ಆದೇಶ ಅನುಬಂಧ-3 ಆ 2018-19ನೇ ಸಾಲಿನ ಸರಬರಾಜು ಆದೇಶ ಅನುಬಂಧ-3 ಇ 2019-20 ನೇ ಸಾಲಿನ ಸರಬರಾಜು ಆದೇಶ ಅನುಬಂಧ-3 ಈ 2019-20ನೇ ಸಾಲಿನ ಪ್ರವಾಹ ಸಂತ್ರಸ್ತ ಪ್ರದೇಶಗಳಿಗೆ ಸರಬರಾಜು ಆದೇಶ
2	ಅನುಬಂಧ-4 ಅ ಅನುಬಂಧ (4) 2017-18ನೇ ಸಾಲಿನ ಘಟಕವಾರು ಸರಬರಾಜು ಆದೇಶ ಮತ್ತು ಹಣಪಾವತಿ ವಿವರ ಅನುಬಂಧ-4 ಆ 2018-19ನೇ ಸಾಲಿನ ಘಟಕವಾರು ಸರಬರಾಜು ಆದೇಶ ಮತ್ತು ಹಣಪಾವತಿ ವಿವರ ಅನುಬಂಧ-4 ಇ 2019-20ನೇ ಸಾಲಿನ ಘಟಕವಾರು ಸರಬರಾಜು ಆದೇಶ ಮತ್ತು ಹಣಪಾವತಿ ವಿವರ

ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಟಿ.ಐ.ಡಿ.ಸಿ. ಬೆಳಗಾವಿ

54

ಅನುಬಂಧ - ೩ (೬)

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

ಸಿಪಿಇ(2)/ಸ.ವ.ಸ-10(2)/2016-17

ದಿನಾಂಕ: 06.05.2017

ಇವರಿಗೆ

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ,
ಒಕ್ಕಲಿಗರ ಭವನ, ಹಡ್ಸನ್ ವೃತ್ತ
ಬೆಂಗಳೂರು.

Karnataka State Textile Infrastructure Development Corporation Ltd., Bengaluru - 560 027.
08 MAY 2017
INWARD No. ....

ವಿಷಯ: 2017-18ನೇ ಸಾಲಿಗೆ ವಿದ್ಯಾವಿಕಾಸ ಯೋಜನೆಯಡಿಯಲ್ಲಿ ಬೆಳಗಾವಿ ವಿಭಾಗದ ಸರ್ಕಾರಿ ಶಾಲೆಗಳಲ್ಲಿನ 1 ರಿಂದ 10ನೇ ತರಗತಿಯ ಗಂಡು ಮಕ್ಕಳು ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ ಶರ್ಟ್ ಸಮವಸ್ತ್ರ ಬಟ್ಟೆ ಸರಬರಾಜು ಮಾಡವ ಬಗ್ಗೆ.

ಉಲ್ಲೇಖ:
1) ಈ ಕಛೇರಿಯ ಕಾರ್ಯಾದೇಶ ಪತ್ರ ಸಂಖ್ಯೆ: ಸಿಪಿಇ(2)/ಸ.ವ.ಸ-10(2)/2016-17 ದಿನಾಂಕ:29/11/2016.
2) ಕೆ.ಹೆಚ್.ಡಿ.ಸಿ ಸಂಸ್ಥೆಯ ಪತ್ರ ಸಂಖ್ಯೆ ಕಕೈಅನಿ:ವ್ಯನಿ:ವಿವಿಯೋ:2016-17 ದಿನಾಂಕ:04-03-2017
3) ಸರ್ಕಾರಿ ಆದೇಶ ಸಂಖ್ಯೆ: ಇಡಿ 02 ಯೋಯೋಕ_2016(ಭಾಗ-03) ಬೆಂಗಳೂರು. ದಿನಾಂಕ: 31-03-2017
4) ಈ ಕಛೇರಿ ಪತ್ರ ಸಂಖ್ಯೆ: ಸಿಪಿಇ(2)/ಸ.ವ.ಸ-10(2)/2016-17, ದಿನಾಂಕ:19-04-217
5) ತಮ್ಮ ಕಛೇರಿ ಪತ್ರ ಸಂಖ್ಯೆ:-ಜನಿ/ವಿವಿಯೋ/ಸವಸ/2017-18/42 ದಿನಾಂಕ:26-04-2017
6) **ಮಾನ್ಯ ಶಿಕ್ಷಣ ಸಚಿವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ** ರವರ ಆದೇಶ, ಟಿಪ್ಪಣಿ ಹಾಳೆ-ಪುಟ ಸಂಖ್ಯೆ-19,ಕಂಡಿಕೆ ಸಂಖ್ಯೆ-39,ಕಡತ ಸಿ.ಪಿ.ಇ(2)/ವಿವಿಯೋ/ಸ.ವ.ಸ 10(2)/2016-17

2017-18ನೇ ಸಾಲಿಗೆ ವಿದ್ಯಾವಿಕಾಸ ಯೋಜನೆಯಡಿಯಲ್ಲಿ ರಾಜ್ಯದ ಬೆಳಗಾವಿ ವಿಭಾಗದ ಎಂಟು ಜಿಲ್ಲೆಗಳ (ಬೆಳಗಾವಿ, **ಚಿಕ್ಕೋಡಿ, ಶಿರಸಿ, ಧಾರವಾಡ, ಉತ್ತರ ಕನ್ನಡ, ವಿಜಯಪುರ, ಗದಗ ಮತ್ತು ಹಾವೇರಿ ಶೈಕ್ಷಣಿಕ ಜಿಲ್ಲೆಗಳು**) ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 01 ರಿಂದ 10ನೇ ತರಗತಿಯ ಗಂಡು ಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ ಶರ್ಟ್ ಸಮವಸ್ತ್ರ ಬಟ್ಟೆಯನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ 14.62ಲಕ್ಷ ಮೀಟರ್ ಶರ್ಟಿಂಗ್ ಸಮವಸ್ತ್ರ ಬಟ್ಟೆಯನ್ನು ಸರಬರಾಜು ಮಾಡಲು ಉಲ್ಲೇಖ-1ರ ಕಾರ್ಯಾದೇಶದಲ್ಲಿ ತಿಳಿಸಲಾಗಿರುತ್ತದೆ ಹಾಗೂ ದಿನಾಂಕ 03.12.2016ರ ಒಳಗಾಗಿ " ಸಹಿ ಮಾಡಿದ ಕರಾರು ಒಪ್ಪಂದ ಪತ್ರವನ್ನು ಸರಬರಾಜು ವೇಳಾ ಪಟ್ಟಿಯೊಂದಿಗೆ" ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿತ್ತು.

ಉಲ್ಲೇಖಿತ (2)ರ ಪತ್ರದಲ್ಲಿ ಕೆ.ಹೆಚ್.ಡಿ.ಸಿ ಸಂಸ್ಥೆಯು ಈ ಬಗ್ಗೆ ತಮಗೆ ಕಾರ್ಯಾದೇಶದಲ್ಲಿ ಹೇಳಿರುವಂತೆ ಸಮವಸ್ತ್ರ ಸರಬರಾಜು ವಿಳಂಬವಾಗದಂತೆ ಕೂಡಲೇ ಸಮವಸ್ತ್ರ ಬಟ್ಟೆ ಪೂರೈಸಲು ಕ್ರಮ ಕೈಗೊಳ್ಳಲು ತಿಳಿಸಿತ್ತಾದರೂ ನಿಮ್ಮಿಂದ ಇದುವರೆವಿಗೂ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ.

ನಿಮಗೆ ದೂರವಾಣಿ ಮೂಲಕ ಸಾಕಷ್ಟು ಬಾರಿ ಈ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿದರೂ ಕೂಡ ಇದುವರೆಗೂ ಕರಾರು ಒಪ್ಪಂದ ಪತ್ರವಾಗಲಿ ಅಥವಾ ಸಮವಸ್ತ್ರ ಸರಬರಾಜಿನ ಬಗ್ಗೆ ಕೈಗೊಂಡ ಕ್ರಮಗಳನ್ನಾಗಲೀ ತಿಳಿಸಿರುವುದಿಲ್ಲ, ಇದು

(55)

ದಿನಾಂಕ:29.11.2016ರಂದು ನೀಡಿದ ಕಾರ್ಯಾದೇಶದಲ್ಲಿ ನಮೂದಿಸಿರುವ ಷರತ್ತಿನ ಉಲ್ಲಂಘನೆಯಾಗಿರುತ್ತದೆ. ಇದರಿಂದ ಸಮವಸ್ತ್ರ ಪೂರೈಕೆ ಪ್ರಕ್ರಿಯೆಯು ವಿಳಂಬವಾಗಿದ್ದು ಇಲಾಖೆಯು ಮುಜುಗರಕ್ಕೀಡಾಗಬೇಕಾಗಿದೆ.

ನೀವು ಕೊನೆಯದಾಗಿ ಉಲ್ಲೇಖಿತ (5)ರ ಪತ್ರದಲ್ಲಿ 5 ಲಕ್ಷ ಮೀಟರ್ ಬಟ್ಟೆಯನ್ನು ದಿನಾಂಕ 15-05-2017ರ ಒಳಗಾಗಿ ಹಾಗೂ ಉಳಿದ ಸಮವಸ್ತ್ರ ಬಟ್ಟೆಯನ್ನು ಮೇ ಅಂತ್ಯದೊಳಗಾಗಿ ಸರಬರಾಜು ಮಾಡಲಾಗುವುದೆಂದು ಅಸ್ಪಷ್ಟವಾಗಿ ತಿಳಿಸಿರುತ್ತೀರಿ.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಉಲ್ಲೇಖ (6)ರಲ್ಲಿ ಕೆ.ಎಸ್.ಟಿ.ಐ.ಡಿ.ಸಿ ಸಂಸ್ಥೆಯವರಿಗೆ ಸರಬರಾಜನ್ನು 5 ಲಕ್ಷ ಮೀಟರ್ ಗಳಿಗೆ ಸೀಮಿತಗೊಳಿಸಲಾಗಿದೆ.

ಆದೇಶ:-

2017-18ನೇ ಸಾಲಿಗೆ ಬೆಳಗಾವಿ ವಿಭಾಗದ ಸಮವಸ್ತ್ರ ಸರಬರಾಜಿಗೆ ತಮಗೆ ಉಲ್ಲೇಖಿತ (1)ರ ಕಾರ್ಯಾದೇಶದಲ್ಲಿ ನೀಡಿದ 14.62ಲಕ್ಷ ಮೀಟರ್ ಶರ್ಟಿಂಗ್ ಬಟ್ಟೆಯನ್ನು ರದ್ದುಪಡಿಸಿ, ಬೆಳಗಾವಿ ವಿಭಾಗದ ನಾಲ್ಕು ಜಿಲ್ಲೆಗಳಾದ ಧಾರವಾಡ, ಉತ್ತರ ಕನ್ನಡ, ಶಿರ್ಸಿ ಹಾಗೂ ಹಾವೇರಿ ಜಿಲ್ಲೆಗಳಿಗೆ ಸಾಕಾಗುವಷ್ಟು 4,99,361.00 ಮೀಟರ್ ಶರ್ಟಿಂಗ್ ಬಟ್ಟೆ ಸರಬರಾಜಿಗೆ ಸೀಮಿತಗೊಳಿಸಲಾಗಿದೆ.

ಈ ಬಗ್ಗೆ ಕೂಡಲೇ ಗಮನಹರಿಸಿ ಸದರಿ 4,99,361.00 ಮೀಟರ್ ಶರ್ಟಿಂಗ್ ಬಟ್ಟೆಯನ್ನು ದಿನಾಂಕ:15-05-2017ರ ಒಳಗಾಗಿ ವಿ.ವಿ.ಗೋಡೌನ್, ಶೆಡ್ ನಂ:54/ಎ. ಪೀಣ್ಯ 2ನೇ ಹಂತ, 2ನೇ ಮುಖ್ಯ ರಸ್ತೆ, ಬೆಂಗಳೂರು ಇಲ್ಲಿಗೆ ಸರಬರಾಜು ಮಾಡತಕ್ಕದ್ದು.

ಶರ್ಟಿಂಗ್ ಬಟ್ಟೆಯ ಒಟ್ಟು ಪರಿಮಾಣ	4,99,361.00 ಮೀಟರ್
ಆದೇಶದ ಒಟ್ಟು ಮೌಲ್ಯ	ರೂ.2,09,73,162.00/-

(ಸೌಜನ್ಯ ಭಾ.ಆ.ಸೇ)
ಆಯುಕ್ತರು

ಪ್ರತಿ:-

1. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ,ನಂ:86, ರೈಲ್ವೇ ಪ್ಯಾರಲಲ್ ರಸ್ತೆ, ಶುಭೋದಯ ಕಾಂಪ್ಲೆಕ್ಸ್, ಕುಮಾರ ಪಾರ್ಕ ಪಶ್ಚಿಮ, ಬೆಂಗಳೂರು-560020
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಕರ್ನಾಟಕ ಸರ್ಕಾರದ ಸಚಿವಾಲಯ ಬಹುಮಹಡಿ ಕಟ್ಟಡ, ಡಾ:ಅಂಬೇಡ್ಕರ್ ವೀಧಿ, ಬೆಂಗಳೂರು - 560 001

56

3

ಅನುಬಂಧ -

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

ಸಿಪಿಇ(2)/ಸ.ವ.ಸ ಕಾರ್ಯಾದೇಶ/ಕೆ.ಎಸ್.ಟಿ.ಐ.ಡಿ.ಸಿ-31/2017-18 ದಿನಾಂಕ:18.05.2018.

ಇವರಿಗೆ
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ,
ಒಕ್ಕಲಿಗರ ಭವನ, ಹಡ್ಸನ್ ವೃತ್ತ
ಬೆಂಗಳೂರು.

19 MAY 2018
INWARD No. ...

: ಕಾರ್ಯಾದೇಶ :

ವಿಷಯ: 2018-19ನೇ ಸಾಲಿಗೆ ವಿದ್ಯಾವಿಕಾಸ ಯೋಜನೆಯಡಿಯಲ್ಲಿ ಬೆಳಗಾವಿ ವಿಭಾಗದ ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿ, ಚಿಕ್ಕೋಡಿ, ಧಾರವಾಡ ಮತ್ತು ಗದಗ ಜಿಲ್ಲೆಗಳ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯ ಗಂಡು ಮಕ್ಕಳು ಹಾಗು 1 ರಿಂದ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹೆಣ್ಣು ಮಕ್ಕಳಿಗೆ ಉಚಿತ ಸಮವಸ್ತ್ರ ಬಟ್ಟೆ ಸರಬರಾಜು ಮಾಡಲು ಕಾರ್ಯಾದೇಶ.

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ: ಇಡಿ 206 ಯೋಯೋಕ 2017 ಬೆಂಗಳೂರು, ದಿನಾಂಕ:08/03/2018

2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಮತ್ತು ಸಮಿತಿ ಅದ್ಯಕ್ಷರು ಇವರ ಅದ್ಯಕ್ಷತೆಯಲ್ಲಿ ನಡೆದ ಸಭಾ ನಡಾವಳಿಯ ದಿನಾಂಕ:16/03/2018

-- * --

ಉಲ್ಲೇಖಿತ (1) ಸರ್ಕಾರಿ ಆದೇಶದಲ್ಲಿ 2018-19ನೇ ಸಾಲಿಗೆ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 01 ರಿಂದ 10ನೇ ತರಗತಿಯಲ್ಲಿನ ಗಂಡು ಮಕ್ಕಳು ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ ಒಂದು ಜೊತೆ ಉಚಿತ ಸಮವಸ್ತ್ರ ಬಟ್ಟೆಯನ್ನು ರಾಜ್ಯಸರ್ಕಾರದ ಉದ್ದಿಮೆಯಾದ ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ (ಕೆಎಸ್‌ಟಿಐಡಿಸಿ) ವತಿಯಿಂದ ಅಂದಾಜು 20ಲಕ್ಷ ಮೀಟರ್(ಪ್ರತಿ ವರ್ಷ) ಸರಬರಾಜು ಮಾಡಲು ಸರ್ಕಾರದ ಆದೇಶವಾಗಿರುತ್ತದೆ. ಈ ಹಿನ್ನಲೆಯಲ್ಲಿ 2018-19ನೇ ಸಾಲಿಗೆ ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧಗಳಲ್ಲಿ ತಿಳಿಸಿರುವಂತೆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ರಾಜ್ಯದ ಬೆಳಗಾವಿ ವಿಭಾಗದ 5 ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿ, ಚಿಕ್ಕೋಡಿ, ಧಾರವಾಡ ಮತ್ತು ಗದಗ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳಿಗೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಪ್ರತಿ ವಿದ್ಯಾರ್ಥಿಗೆ ಒಂದು ಸೆಟ್‌ನಂತೆ ಸಮವಸ್ತ್ರ ಬಟ್ಟೆಯನ್ನು ಕಡ್ಡಾಯವಾಗಿದಿನಾಂಕ:31.05.2018ರ ಒಳಗಾಗಿಪೂರೈಕೆ ಮಾಡಲು ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳಲು ನಿಮಗೆ ತಿಳಿಸಿದೆ.

ಪೂರೈಕೆ ಮಾಡಬೇಕಾದ ಬಟ್ಟೆಯ ಅಳತೆ ಮತ್ತು ಬಣ್ಣ ಗಳ ಬಗ್ಗೆ ಅನುಬಂಧ-1 ರಲ್ಲಿ ವಿವರಿಸಿದೆ. ಸದರಿ ನಿಗಮವು ಕರ್ನಾಟಕ ರಾಜ್ಯದಲ್ಲಿರುವ ತನ್ನ ವ್ಯಾಪ್ತಿಯ ಘಟಕಗಳಿಂದ ಮಾತ್ರ ಬಟ್ಟೆಗಳನ್ನು ಪಡೆದು ಸರಬರಾಜು ಮಾಡತಕ್ಕದ್ದು. ಹಾಗೂ ಬೇರೆ ಮೂಲಗಳಿಂದ / ಸಂಸ್ಥೆಗಳಿಂದ ಖರೀದಿಸಿ ಸರಬರಾಜು ಮಾಡತಕ್ಕದ್ದಲ್ಲ ಹಾಗೂ ಸರ್ಕಾರದ ಆದೇಶದಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳಿಗೆ ಬದ್ಧರಾಗಿ ಸರಬರಾಜುಕಾರ್ಯ ನಿರ್ವಹಿಸುವಂತೆ ತಿಳಿಸಿದೆ.

ಷರತ್ತುಗಳು:-

1. ಸಮವಸ್ತ್ರ ಬಟ್ಟೆಗಳನ್ನು ಯಾವುದೇ ಕಾರಣಕ್ಕೆ ವಿಳಂಬ ಮಾಡದೆ ಕಡ್ಡಾಯವಾಗಿ ದಿನಾಂಕ:31.05.2018ರ ಒಳಗಾಗಿಸಂಬಂಧಿಸಿದ ತಾಲ್ಲೂಕು ಕೇಂದ್ರಗಳಿಗೆ ಸೆಟ್‌ಗಳ ರೂಪದಲ್ಲಿಸರಬರಾಜು ಪೂರ್ಣಗೊಳಿಸತಕ್ಕದ್ದು.
2. ಕೆ.ಎಸ್.ಟಿ.ಐ.ಡಿ.ಸಿ ಸಂಸ್ಥೆ ವತಿಯಿಂದ ಶರ್ಟಿಂಗ್ 11,13,745.00ಮೀಟರ್, ಸೂಟಿಂಗ್ 2,91,687.00 ಮೀಟರ್ ಹಾಗು ಸ್ಕರ್ಟಿಂಗ್ 5,90,723.00ಮೀಟರ್ ಒಟ್ಟು 19,96,155.00 ಮೀಟರ್(ಹತ್ತೊಂಭತ್ತು ಲಕ್ಷ ತೊಂಭತ್ತಾರು ಸಾವಿರದ ಒಂದು ನೂರ ಐವತ್ತ ಐದು ಮೀಟರ್‌ಗಳು ಮಾತ್ರ) ಸಮವಸ್ತ್ರ ಬಟ್ಟೆ

19/5/2018

57

ಸರಬರಾಜಿಗೆ ಅನುಮತಿಸಿದೆ. ಬಟ್ಟೆಯ ದರವನ್ನು ಉಲ್ಲೇಖಿತ (2)ರ ನಡಾವಳಿಯಂತೆ ಪ್ರಸ್ತುತ ಸಾಲಿನ ಟೆಂಡರ್ ದರದ ಮೇಲೆ ಶೇ.27ರಷ್ಟು ಹೆಚ್ಚಳ ಅಂದರೆ ಶರ್ಟಿಂಗ್-ರೂ.42.18 ಸೂಟಿಂಗ್-ರೂ.105.30 ಮತ್ತು ಸ್ಕರ್ಟಿಂಗ್-ರೂ.55.26 ಹಾಗೂ ಹೆಚ್ಚುವರಿಯಾಗಿ ನಿಯಮಾನುಸಾರ ಅನ್ವಯವಾಗುವ ಜಿ.ಎಸ್.ಟಿ ನೀಡಲಾಗುವುದು.

3. ಇದರಲ್ಲಿ ಬೆಳಗಾವಿ ವಿಭಾಗದ 5 ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿ, ಚಿಕ್ಕೋಡಿ, ಧಾರವಾಡ ಮತ್ತು ಗದಗ ಜಿಲ್ಲೆಗಳ 34 ತಾಲ್ಲೂಕುಗಳಿಗೆ ಅನುಬಂಧ-03ರಲ್ಲಿ ತೋರಿಸಿರುವಂತೆ ತರಗತಿವಾರು ಮಕ್ಕಳ ಸಂಖ್ಯೆಗೆ ಅನುಗುಣವಾಗಿ 1 ರಿಂದ 7ನೇ ತರಗತಿ ಗಂಡು ಮಕ್ಕಳಿಗೆ ಒಂದು ಜೊತೆ ಶರ್ಟ್ ಮತ್ತು ನಿಕ್ಕರ್, 8 ರಿಂದ 10ನೇ ತರಗತಿ ಗಂಡು ಮಕ್ಕಳಿಗೆ ಶರ್ಟ್ ಮತ್ತು ಪ್ಯಾಂಟ್ ಹಾಗೂ 1 ರಿಂದ 7ನೇ ತರಗತಿಹೆಣ್ಣು ಮಕ್ಕಳಿಗೆ ಒಂದು ಜೊತೆ ಶರ್ಟ್ ಮತ್ತು ಸ್ಕರ್ಟ್ ಬಟ್ಟೆಯನ್ನು ಸರಬರಾಜು ಮಾಡುವುದು.
4. ವಿಳಂಬ ಸರಬರಾಜಿಗೆ ಯಾವುದೇ ರೀತಿಯ ವಿನಾಯಿತಿ ನೀಡದೆ ನಿಗಧಿತ ಪ್ರಮಾಣದಲ್ಲಿ ದಂಡ ವಿಧಿಸಲು ಶಿಕ್ಷಣ ಇಲಾಖೆಯು ಬದ್ಧವಾಗಿರುತ್ತದೆ.
5. ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ಸಂಸ್ಥೆಯು ಕಡ್ಡಾಯವಾಗಿ ರಾಜ್ಯದಲ್ಲಿನ ವಿದ್ಯುತ್ ನೇಕಾರರಿಂದಲೇ ನೇಯ್ದ ಬಟ್ಟೆಗಳನ್ನು ಸರಬರಾಜು ಮಾಡತಕ್ಕದ್ದು.
6. ಯಾವುದೇ ಕಾರಣಕ್ಕೂ ಬಾಹ್ಯ ಮೂಲಗಳಿಂದ ಖರೀದಿಸಿದ ಸಮವಸ್ತ್ರ ಬಟ್ಟೆಯನ್ನು ಸರಬರಾಜು ಮಾಡತಕ್ಕದ್ದಲ್ಲ. ಮತ್ತು ಇಲಾಖೆ ಅಂತಹಾ ಬಟ್ಟೆಗಳನ್ನು ತಿರಸ್ಕರಿಸುವ ಅಧಿಕಾರ ಹೊಂದಿರುತ್ತದೆ.
7. ಇಲಾಖೆ ನಿಗಧಿಪಡಿಸಿದ ಗುಣಮಟ್ಟದ **(Specification)** ಪ್ರಕಾರವೇ ಸಮವಸ್ತ್ರ ಬಟ್ಟೆಗಳನ್ನು ಸರಬರಾಜು ಮಾಡತಕ್ಕದ್ದು.
8. ಕಳಪೆ ಗುಣಮಟ್ಟದ್ದೆಂದು ದೃಢಪಟ್ಟ ಬಟ್ಟೆಗಳ ಮೇಲೆ ಹಾಗೂ ವಿಳಂಬ ಸರಬರಾಜುಮಾಡಿದ ಬಟ್ಟೆಗಳ ಮೌಲ್ಯದ ಮೇಲೆ ಶಿಕ್ಷಣ ಇಲಾಖೆ ವಿಧಿಸಿದ ದಂಡವನ್ನು ಯಾವುದೇ ಕಾರಣಕ್ಕೂ ಮನ್ನಾ ಮಾಡುವಂತೆ ಸಂಸ್ಥೆ ಕೋರತಕ್ಕದ್ದಲ್ಲ, ಈ ಅಂಶವನ್ನು ಕಡ್ಡಾಯವಾಗಿ ಕರಾರಿನಲ್ಲಿ ನಮೂದಿಸಿರತಕ್ಕದ್ದು.
9. ಸಂಸ್ಥೆಗೆ ನಿಗಧಿತ ದಿನಾಂಕದ ಒಳಗಾಗಿ ಬಟ್ಟೆಗಳ ಸರಬರಾಜು ಮಾಡಲು ಸಾಧ್ಯವಾಗದ ಪಕ್ಷದಲ್ಲಿ ಈ ಕಾರ್ಯಾದೇಶವನ್ನು ಪಡೆದುಕೊಂಡ ಒಂದು ವಾರದ ಒಳಗಾಗಿ (ಏಳು ದಿನಗಳ ಒಳಗಾಗಿ) ಈ ಕಛೇರಿಗೆ ತಿಳಿಸತಕ್ಕದ್ದು.
10. ಈ ಆದೇಶ ಪಡೆದ ಒಂದು ವಾರದ ಒಳಗಾಗಿ ಇಲಾಖೆಯೊಂದಿಗೆ ಸೂಕ್ತ ಕರಾರು ಒಪ್ಪಂದ ಮಾಡಿಕೊಳ್ಳತಕ್ಕದ್ದು.
11. ವಿದ್ಯಾರ್ಥಿಗಳ ವಯೋಮಾನ ಹಾಗೂ ತರಗತಿಗೆ ನಿಗಧಿಪಡಿಸಿದ ಅಳತೆಯಂತೆ ಸಮವಸ್ತ್ರ ಬಟ್ಟೆಯನ್ನು ಕಡ್ಡಾಯವಾಗಿ ಸರಬರಾಜು ಮಾಡುವುದು. ಒಂದುವೇಳೆ ಅಳತೆ ಹಾಗೂ ಪ್ರಮಾಣದಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಸರಬರಾಜು ಮಾಡಿದ 15 ರಿಂದ 30 ದಿನಗಳ ಒಳಗಾಗಿ ವ್ಯತ್ಯಾಸದ ಸಮವಸ್ತ್ರಗಳನ್ನು ಮರುಸರಬರಾಜು ಮಾಡತಕ್ಕದ್ದು.
12. ಕಾರ್ಯಾದೇಶದಲ್ಲಿ ಹೇಳಿರುವ ಸಮವಸ್ತ್ರ ಬಟ್ಟೆಯ ಪ್ರಮಾಣವನ್ನು 15% ಹೆಚ್ಚು ಅಥವಾ ಕಡಿಮೆ ಮಾಡುವ ಅಧಿಕಾರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಇರುತ್ತದೆ.

"ಸಮವಸ್ತ್ರ ಪೂರೈಕೆಯ ಸಾಮಾನ್ಯ ಷರತ್ತುಗಳು ಮತ್ತು ನಿಬಂಧನೆಗಳು"

1. ಕರಾರು ಒಪ್ಪಂದ:-

(1) ಕರಾರು ಅಂದರೆ ಈ ಆದೇಶದಲ್ಲಿನ ಎಲ್ಲಾ ಅಂಶಗಳಿಗೂ ಮತ್ತು ಈ ಆದೇಶದಲ್ಲಿ ತಿಳಿಸಿರುವ ಎಲ್ಲಾ ವಿವರಣೆ/ಅನುಬಂಧಗಳನ್ನು ಒಳಗೊಂಡಂತೆ ಎಲ್ಲಾ ಷರತ್ತುಗಳಿಗೆ ಖರೀದಿದಾರರು ಹಾಗೂ ಸರಬರಾಜುದಾರರು ಬದ್ಧರಾಗಿ ಏರ್ಪಟ್ಟ ಒಡಂಬಡಿಕೆ

(2) ಈ ಆದೇಶ ಸ್ವೀಕರಿಸಿದ ಏಳು (7) ದಿನಗಳ ಒಳಗಾಗಿ ಕರಾರು ಒಪ್ಪಂದ ಮಾಡಿಕೊಳ್ಳುವುದು.

2. ಕರಾರು ಒಪ್ಪಂದದ ಸಾಮಾನ್ಯ ಷರತ್ತುಗಳು:-

1. ಈ ಕರಾರಿನಡಿ ಸರಬರಾಜುದಾರರು ಖರೀದಿದಾರರಿಂದ ಪಡೆದ ಆದೇಶದಂತೆ ಸೂಕ್ತ ಸಮವಸ್ತ್ರ ಬಟ್ಟೆಗಳನ್ನು ತಯಾರಿಸಿ ಅನುಬಂಧ-03ರಲ್ಲಿ ತಿಳಿಸಿರುವಂತೆ ಸಂಬಂಧಿಸಿದ ಜಿಲ್ಲೆಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಕಾಲದಲ್ಲಿ ಸರಬರಾಜು ಮಾಡುವ ಕಾರ್ಯವನ್ನು ಸಮರ್ಪಕವಾಗಿ ಪೂರ್ಣಗೊಳಿಸಬೇಕು.

58

2. ಸಮವಸ್ತ್ರ ಸರಬರಾಜಿಗೆ ಸಂಬಂಧಿಸಿದಂತೆ ಸಂಸ್ಥೆಯು ಇಲಾಖೆಯೊಂದಿಗೆ ಮಾಡಿಕೊಳ್ಳಬೇಕಾದ ಕರಾರು ಒಪ್ಪಂದವನ್ನು ರೂ. 500/- ಗಳ ಛಾಪಾ ಕಾಗದದಲ್ಲಿ ಸಲ್ಲಿಸತಕ್ಕದ್ದು. ಕರಾರಿಗೆ ಸಂಸ್ಥೆಯ ಸಕ್ಷಮ ಪ್ರಾಧಿಕಾರಿಗಳು ಸಹಿ ಮಾಡಿ ತಾಲ್ಲೂಕುವಾರು ಸರಬರಾಜು ವೇಳಾ ಪಟ್ಟಿಯೊಂದಿಗೆ ಸಲ್ಲಿಸತಕ್ಕದ್ದು.

ಸರಬರಾಜುದಾರರು ಕರಾರು ಒಪ್ಪಂದ ಪತ್ರವನ್ನು ತಾಲ್ಲೂಕುವಾರು ಸರಬರಾಜು ವೇಳಾ ಪಟ್ಟಿಯೊಂದಿಗೆ ದಿನಾಂಕ:.25.05.2018ರೊಳಗಾಗಿ ನಿರ್ದೇಶಕರು, ಪ್ರಾಥಮಿಕ ಶಿಕ್ಷಣ ರವರ ಕಛೇರಿಗೆ ಸಲ್ಲಿಸುವುದು.

(ಅ) ಕರಾರಿನ ಮೊತ್ತ :- ಎಂದರೆ ಸರಬರಾಜುದಾರರಿಗೆ ಕರಾರು ಒಪ್ಪಂದದ ಪ್ರಕಾರ ಯೋಗ್ಯ ಮತ್ತು ಸಮಂಜಸ ರೀತಿಯಲ್ಲಿ ಕರಾರಿನಂತೆ ಸರಬರಾಜು ಕಾರ್ಯವನ್ನು ಸಮರ್ಪಕವಾಗಿ ಪೂರ್ಣಗೊಳಿಸಿದ ಪ್ರಮಾಣಕ್ಕೆ ಕರಾರಿನಲ್ಲಿ ಒಪ್ಪಿಗೆಯಾಗಿರುವ ದರದಂತೆ ಪಾವತಿಸಬೇಕಾದ ಮೊತ್ತ.

(ಆ) ಸಮವಸ್ತ್ರಬಟ್ಟೆ ಸರಬರಾಜು:- ಎಂದರೆ ಕರಾರಿನ ಪ್ರಕಾರ ಈ ಆದೇಶದ ಅನುಬಂಧ-03ರಲ್ಲಿ ವಿವರಿಸಿರುವಂತೆ ತಾಲ್ಲೂಕುವಾರು ನಿಗಧಿತ ಸಂಖ್ಯೆಯಂತೆ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರತಿ ವಿದ್ಯಾರ್ಥಿಗೆ ಒಂದು ಸೆಟ್ ನಂತೆ ಸಮವಸ್ತ್ರ ಬಟ್ಟೆಯನ್ನು ಸಂಬಂಧಿಸಿದ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ನಿಗಧಿತ ಪ್ರಮಾಣದಲ್ಲಿ ಸಕಾಲದಲ್ಲಿ ಸರಬರಾಜು ಮಾಡುವುದು.

(ಇ) ಸೆಟ್ ಎಂದರೆ:- 1 ರಿಂದ 7ನೇ ತರಗತಿ ಗಂಡುಮಕ್ಕಳಿಗೆ ಪ್ರತಿ ವಿದ್ಯಾರ್ಥಿಗೆ ಒಂದು ಶರ್ಟ್ ಮತ್ತು ಒಂದು ನಿಕ್ಕರ್ ಬಟ್ಟೆ, 8 ರಿಂದ 10ನೇ ತರಗತಿ ಗಂಡು ಮಕ್ಕಳಿಗೆ ಒಂದು ಶರ್ಟ್ ಮತ್ತು ಒಂದು ಪ್ಯಾಂಟ್ ಬಟ್ಟೆ, ಹಾಗೂ ತರಗತಿ 1 ರಿಂದ 7ನೇ ತರಗತಿ ಬಾಲಕಿಯರಿಗೆ ಒಂದು ಶರ್ಟ್ ಮತ್ತು ಒಂದು ಸ್ಕರ್ಟ್ (ಲಂಗದ) ಬಟ್ಟೆ.

(ಈ) ಸರಬರಾಜು ವೆಚ್ಚ:- ಎಂದರೆ ಸಂಸ್ಥೆಯವರು ನೀಡಿರುವ ದರವು ಸಮವಸ್ತ್ರ ಬಟ್ಟೆಗಳನ್ನು ಸಂಬಂಧಿಸಿದ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಗಳಿಗೆ ತಲುಪಿಸುವವರೆಗೆ ತಗಲುವ ತಯಾರಿಕಾ ವೆಚ್ಚ, ಸಾಗಾಣಿಕೆ ವೆಚ್ಚ, ಇನ್ಸುರೆನ್ಸ್, ಆಕಸ್ಮಿಕ, ಪ್ರಾಸಂಗಿಕ ಮತ್ತು ಇತರೆ ವಿಶಿಷ್ಟ ವೆಚ್ಚಗಳೆಲ್ಲವೂ ಸೇರಿರುತ್ತವೆ.

3. ಉತ್ಪಾದನೆಯ ಮೂಲ:-

13. (1). ಸರಬರಾಜು ಮಾಡುವ ಬಟ್ಟೆಗಳನ್ನು ಕಡ್ಡಾಯವಾಗಿ ರಾಜ್ಯದಲ್ಲಿನ ವಿದ್ಯುತ್ ನೇಕಾರರಿಂದಲೇ ನೇಯ್ದ ಬಟ್ಟೆಗಳನ್ನು ಸರಬರಾಜು ಮಾಡತಕ್ಕದ್ದು, ಇತರೆ ಯಾವುದೇ ಸಂಸ್ಥೆಗಳು/ಖಾಸಗಿ ಸಂಸ್ಥೆಗಳಿಂದ ಖರೀದಿಸಿ ಸರಬರಾಜು ಮಾಡತಕ್ಕದ್ದಲ್ಲ.

4. ಸಮವಸ್ತ್ರ ಬಟ್ಟೆಗಳ ಗುಣಮಟ್ಟ ಪರೀಕ್ಷೆ:-

(1) ಸಮವಸ್ತ್ರಬಟ್ಟೆಗಳ ಗುಣಮಟ್ಟವು ಟೆಕ್ನಿಕಲ್ ಸ್ಪೆಸಿಫಿಕೇಷನ್‌ಗಳಿಗೆ ಪೂರಕವಾಗಿರುವ ಬಗ್ಗೆ ತಾಂತ್ರಿಕ ಪರಿಶೀಲನೆಯನ್ನು ಭಾರತ ಸರ್ಕಾರ ಸ್ವಾಮ್ಯದ Textike Committee, Ministry of Textiles, Govt of India/Cental Silk Technological Research Institue, Madiwala, Bangalor /Indian Institute Of Handloom Technology,Selem/Central Sericulture Research and Training Institute, Mysore ಈ ಸಂಸ್ಥೆಯಿಂದ ನಿರ್ವಹಿಸಲಾಗುವುದು.

(2) ಕರಾರು ಒಪ್ಪಂದದಂತೆ ಸರಬರಾಜುದಾರರು ತಯಾರಿಸಿರುವ ಬಟ್ಟೆಗಳನ್ನು ಈ ಆದೇಶದೊಂದಿಗೆ ನೀಡಿರುವ ಬಟ್ಟೆಗಳ ತಾಂತ್ರಿಕ ಸ್ಪೆಸಿಫಿಕೇಶನ್ ಅನುಬಂಧ-2ರಂತೆ ಟೆಕ್ನಿಕಲ್ ಸ್ಪೆಸಿಫಿಕೇಶನ್‌ಗಳಿಗೆ ಅನುಗುಣವಾಗಿ ತಯಾರಿಸಿರುವ ಬಗ್ಗೆ ಸಮವಸ್ತ್ರ ಬಟ್ಟೆಯ ಗುಣಮಟ್ಟವನ್ನು ಖಾತ್ರಿಪಡಿಸಿಕೊಳ್ಳಲು ಖರೀದಿದಾರರಿಗೆ ಯಾವುದೇ ಆರ್ಥಿಕ ಹೊರೆ ಬೀಳದ ರೀತಿಯಲ್ಲಿ ಖರೀದಿದಾರರು ಅಥವಾ ಅವರ ಅಧಿಕೃತ ಪ್ರತಿನಿಧಿ ಬಟ್ಟೆಗಳನ್ನು ಪರೀಕ್ಷಿಸುವ ಸ್ಯಾಂಪಲ್‌ಗಳನ್ನು ಸೆಳೆಯುವ ಪೂರ್ಣ ಅಧಿಕಾರ ಹೊಂದಿರುತ್ತಾರೆ.

59

61

(3) ಈ ರೀತಿಯ ಪರೀಕ್ಷೆಯನ್ನು ಸರಬರಾಜುದಾರರ ಆವರಣದಲ್ಲಿ/ಸರಬರಾಜಿಗೆ ತಯಾರಾಗಿಟ್ಟಿರುವ ಆವರಣದಲ್ಲಿ ಅಥವಾ ಅಂತಿಮವಾಗಿ ಬಟ್ಟೆಗಳನ್ನು ಸರಬರಾಜು ಮಾಡಿದ ಸ್ಥಳದಲ್ಲಿಯೂ ಸಹ ನಡೆಸಬಹುದಾಗಿದೆ. ಬಟ್ಟೆಗಳ ಪರೀಕ್ಷೆಯನ್ನು ಸರಬರಾಜುದಾರರ ಆವರಣದಲ್ಲಿ ನಡೆಸಿದಲ್ಲಿ ಅದಕ್ಕೆ ತಕ್ಕ ಎಲ್ಲಾ ಪೂರಕ ಅನುಕೂಲತೆ ಮತ್ತು ಸಹಕಾರವನ್ನು ಸರಬರಾಜುದಾರರು ನೀಡುವುದು.

(4) ಪರೀಕ್ಷಿಸಿದ ಸಮವಸ್ತ್ರ ಬಟ್ಟೆಗಳಲ್ಲಿ ನಿಗಧಿತ ಗುಣಮಟ್ಟದ್ದಲ್ಲ ಎಂದು ಕಂಡು ಬರುವ ಬಟ್ಟೆಗಳನ್ನು ತಿರಸ್ಕರಿಸುವ ಅಧಿಕಾರ ಖರೀದಿದಾರರಿಗೆ ಇರುತ್ತದೆ. ಹೀಗೆ ತಿರಸ್ಕರಿಸಿದ ಪ್ರಮಾಣದ ಬಟ್ಟೆಗಳನ್ನು ಸರಬರಾಜುದಾರರು ಬದಲಾಯಿಸಿ ನಿಗಧಿತ ಸ್ಪೆಸಿಫಿಕೇಶನ್‌ಗೆ ಒಳಪಟ್ಟ ಸೂಕ್ತ ಬಟ್ಟೆಗಳನ್ನು ಮರುಸರಬರಾಜು ಮಾಡತಕ್ಕದ್ದು, ಮತ್ತು ಇದರಿಂದ ಸರಬರಾಜುದಾರರಿಗೆ ಯಾವುದೇ ರೀತಿಯ ಹೆಚ್ಚಿನ ವೆಚ್ಚ ಅಥವಾ ನಷ್ಟ ಉಂಟಾದಲ್ಲಿ ಸರಬರಾಜು ದಾರರೇ ಭರಿಸಬೇಕು, ಇಂತಹ ಪ್ರಸಂಗದಿಂದ ಸರಬರಾಜುದಾರರಿಗೆ ಉದ್ಭವಿಸುವ ಯಾವುದೇ ನಷ್ಟಗಳಿಗೆ ಖರೀದಿದಾರರು ಜವಾಬ್ದಾರರಾಗುವುದಿಲ್ಲ.

(5) ಸಂಬಂಧಿಸಿದ ಶಾಲೆಗಳಿಗೆ ಸರಬರಾಜಾದ ಬಟ್ಟೆಗಳಲ್ಲಿ ಯಾವುದೇ ಬಟ್ಟೆಯ ಗುಣಮಟ್ಟ ನಿರ್ಧಿಷ್ಟ ಪಡಿಸಿದ ಗುಣಮಟ್ಟದ್ದಲ್ಲ (ನಿಗಧಿತ ಸ್ಪೆಸಿಫಿಕೇಶನ್ ಮೀರಿದ್ದಲ್ಲಿ) ಎಂದು ಕಂಡುಬಂದಲ್ಲಿ ಸಂಬಂಧಿತ ಶಾಲೆಗೆ ಸರಬರಾಜಾದ ನಂತರವೂ ಇಂತಹ ಬಟ್ಟೆಯನ್ನು ತಿರಸ್ಕರಿಸುವ ಪೂರ್ಣ ಅಧಿಕಾರ ಖರೀದಿದಾರರಿಗೆ ಇರುತ್ತದೆ. ಇದನ್ನು ಬಟ್ಟೆಗಳ ಸರಬರಾಜಿಗೆ ಮುನ್ನ ಪರೀಕ್ಷೆಗೆ ಒಳಪಡಿಸಿ ಖರೀದಿದಾರರು ಅಥವಾ ಅವರ ಪ್ರತಿನಿಧಿ ಅಂಗೀಕರಿಸಿದ ಬಟ್ಟೆಗಳೆಂದು ಕಾರಣ ನೀಡಿ ಬಿಟ್ಟುಬಿಡಲು/ತ್ಯಜಿಸಲು ಅವಕಾಶ ಇರುವುದಿಲ್ಲ.

5. ಬಟ್ಟೆಗಳ ಪರೀಕ್ಷೆಗೆ ಮಾದರಿಗಳನ್ನು ಆಯ್ಕೆ ಮಾಡುವ ಬಗ್ಗೆ :-

(1) ಸಮವಸ್ತ್ರ ಬಟ್ಟೆಗಳನ್ನು ಸಂಬಂಧಿಸಿದ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ಸರಬರಾಜು ಕಾರ್ಯ ಆರಂಭಿಸುವ ಮುನ್ನ ಖರೀದಿದಾರರು ತಿಳಿಸಿದ ಇಲಾಖಾ ಅಧಿಕಾರಿ/ ಸಿಬ್ಬಂದಿ ಅಥವಾ ಟೆಕ್ನಿಕಲ್ ಪ್ಯಾನಲ್ ಸದಸ್ಯರು ಸರಬರಾಜುದಾರರು ಬಟ್ಟೆಗಳನ್ನು ತಯಾರಿಸಿದ/ಶೇಖರಿಸಿದ ಸ್ಥಳಕ್ಕೆ ಭೇಟಿನೀಡಿ ಪ್ರತಿ ತರಹದ(ಶರ್ಟಿಂಗ್, ಸೂಟಿಂಗ್ ಮತ್ತು ಸ್ಕರ್ಟಿಂಗ್) ಸಮವಸ್ತ್ರಗಳಲ್ಲಿ 25000ಮೀಟರ್‌ಗೆ ಒಂದು ಸ್ಯಾಂಪಲ್‌ನಂತೆ ಸ್ಯಾಂಪಲ್‌ಗಳನ್ನು ಡ್ರಾ ಮಾಡುತ್ತಾರೆ.("ಸರಬರಾಜು ಮುನ್ನ ಸ್ಯಾಂಪಲ್ ಡ್ರಾ")

(2) ಡ್ರಾ ಮಾಡುವ ಪ್ರತಿಯೊಂದು ಮಾದರಿ (ಸ್ಯಾಂಪಲ್) ಬಟ್ಟೆಯ ಅಳತೆ ಕನಿಷ್ಠ ಮೂರು (3) ಮೀಟರ್ ಗಳಿಗಿಂತ ಕಡಿಮೆ ಇರಬಾರದು, ಮತ್ತು ಈ ಸ್ಯಾಂಪಲ್‌ಗಳನ್ನು ಗಂಡು ಮತ್ತು ಹೆಣ್ಣುಮಕ್ಕಳಿಗೆ ನೀಡುವ ಶರ್ಟ್ (ಮೇಲಂಗಿ) ಬಟ್ಟೆ, ಪಿ.ವಿ.ಶರ್ಟಿಂಗ್, ಗಂಡುಮಕ್ಕಳ ನಿಕ್ಕರ್/ಪ್ಯಾಂಟ್ ಬಟ್ಟೆ ಪಿ.ಸಿ.ಸೂಟಿಂಗ್ ಮತ್ತು ಹೆಣ್ಣುಮಕ್ಕಳ ಸ್ಕರ್ಟ್ 2/40 ಪಿ.ವಿ.ಬಟ್ಟೆ ಈ ಮೂರೂ ಸಮವಸ್ತ್ರಬಟ್ಟೆಗಳ ಸ್ಯಾಂಪಲ್‌ಗಳನ್ನು ಡ್ರಾಮಾಡಲಾಗುತ್ತದೆ.

(3) ಸರಬರಾಜುದಾರರು ಒದಗಿಸಿದ ಪ್ರೊಡಕ್ಷನ್ ಅಂಡ್ ಡೆಲಿವರಿ ಶೆಡ್ಯೂಲ್ ಅನುಸರಿಸಿ ಸಂಸ್ಥೆ ಉತ್ಪನ್ನ ಮಾಡಿದ ವಿವಿಧ ಲಾಟ್‌ಗಳಲ್ಲಿನ ಬಟ್ಟೆಗಳನ್ನು ತಾಂತ್ರಿಕ ಪರೀಕ್ಷೆಗಾಗಿ ರ್‍ಯಾಂಡಮ್ ಸೆಲೆಕ್ಷನ್ ಮಾಡಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ.ಇದಕ್ಕೆ ಸರಬರಾಜುದಾರರು ಸಂಪೂರ್ಣ ಸಹಕಾರ ನೀಡಬೇಕು

(4) ಅಗತ್ಯ ಬಿದ್ದಲ್ಲಿ ಬಟ್ಟೆಗಳ ತಯಾರಿಕಾ ಘಟಕಗಳಿಗೆ ಭೇಟಿನೀಡಿ ಪರಿಶೀಲನೆ/ ಬಟ್ಟೆಗಳ ಗುಣಮಟ್ಟದ ಪರೀಕ್ಷೆನಡೆಸಲು ಟೆಕ್ನಿಕಲ್ ಕಮಿಟಿ ರಚಿಸುವ ಪೂರ್ಣ ಅಧಿಕಾರ ಖರೀದಿದಾರರಿಗೆ ಇರುತ್ತದೆ. ಹೀಗೆ ರಚಿಸಿದ ಕಮಿಟಿ ಸದಸ್ಯರು ಸಮವಸ್ತ್ರ ಬಟ್ಟೆಗಳ ತಯಾರಿಕಾ ಘಟಕಗಳಿಗೆ ಭೇಟಿನೀಡಿದಾಗ ಅವರೊಂದಿಗೆ ಪೂರ್ಣ ಸಹಕಾರ ನೀಡುವ ಜವಾಬ್ದಾರಿ ಸರಬರಾಜುದಾರರದ್ದಾಗಿರುತ್ತದೆ.

(5) ಸರಬರಾಜುದಾರರು ಬಟ್ಟೆಗಳನ್ನು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಾಗಾಣಿಕೆ ಮಾಡುವ ಮುನ್ನ ಕಾರ್ಯಾದೇಶದಲ್ಲಿ ನಮೂದಿಸಿರುವ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಂಖ್ಯೆಗೆ ಅನುಗುಣವಾಗಿ ಅಷ್ಟು ಸಂಖ್ಯೆಯ ಮೂರೂ ಬಟ್ಟೆಗಳ ಒಂದೊಂದು ಸ್ಯಾಂಪಲ್‌ಗಳನ್ನು ಹೊಂದಿರುವ 20 x 24 ಸೆಂ.ಮೀ. ಅಳತೆಯ ಸ್ಯಾಂಪಲ್ ಸ್ಯಾಚೆಟ್‌ಗಳನ್ನು ಈ ಕಛೇರಿಗೆ ಒದಗಿಸುವುದು. ಈ

60

7

ಸ್ಯಾಂಪಲ್‌ಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸಿ ಸರಬರಾಜಾದ ಬಟ್ಟೆಗಳ ಗುಣಮಟ್ಟ ಹೋಲಿಕೆ ಮಾಡಲು ಸೂಚಿಸಲಾಗುವುದು.

(6) ಹೀಗೆ ಸರಬರಾಜು ಮಾಡಿದ ಬಟ್ಟೆಗಳಲ್ಲಿ ಪ್ರತಿ ತಾಲ್ಲೂಕಿನಿಂದಪ್ರತಿ ತರಹದ ಸಮವಸ್ತ್ರದ(ಶರ್ಟಿಂಗ್, ಸೂಟಿಂಗ್ ಮತ್ತು ಸ್ಕರ್ಟಿಂಗ್) ಒಂದೊಂದು ಸ್ಯಾಂಪಲ್ ಡ್ರಾ ಮಾಡಿ ಗುಣಮಟ್ಟ ಖಚಿತಪಡಿಸಿಕೊಳ್ಳಲಾಗುವುದು.("ಸರಬರಾಜಿನ ನಂತರ ಸ್ಯಾಂಪಲ್ ಡ್ರಾ")

6. ಬಟ್ಟೆಗಳ ಒಪ್ಪಿಗೆ ಪ್ರಮಾಣ ಪತ್ರ :-

(1) ಬಟ್ಟೆಗಳ ಯಶಸ್ವೀ ಗುಣಮಟ್ಟ ಪರೀಕ್ಷೆಯ ನಂತರ ಅನುಬಂಧ-3 ರಂತೆ ತಾಲ್ಲೂಕು ಕೇಂದ್ರಗಳಿಗೆ (ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಗೆ) ಸರಬರಾಜು ಮಾಡಿದ ಬಟ್ಟೆಗಳ ಗುಣಮಟ್ಟವನ್ನು ಖಾತ್ರಿ ಮಾಡಿಕೊಂಡು ಸರಬರಾಜಾದ ಬಟ್ಟೆಯ ಒಪ್ಪಿಗೆ ಪ್ರಮಾಣಪತ್ರವನ್ನು ಸರಬರಾಜುದಾರರು ಮತ್ತು ತಾಲ್ಲೂಕು ಮಟ್ಟದಲ್ಲಿ ಖರೀದಿದಾರರ ಪ್ರತಿನಿಧಿಯಾದ ಸಾ.ಶಿ.ಇ. ಕ್ಷೇತ್ರ ಶಿಕ್ಷಣಾಧಿಕಾರಿ ಕಡ್ಡಾಯವಾಗಿ ದಿನಾಂಕವನ್ನು ನಮೂದಿಸಿ ಸ್ವೀಕೃತಿ ನೀಡಿರತಕ್ಕದ್ದು, ಈ ಪ್ರಮಾಣ ಪತ್ರದಮೇಲೆ ನಮೂದಿಸಲಾದ ದಿನಾಂಕವನ್ನು ಸಮವಸ್ತ್ರಬಟ್ಟೆಯನ್ನು ತಾಲ್ಲೂಕಿನಲ್ಲಿ ಸ್ವೀಕರಿಸಿದ ದಿನಾಂಕವೆಂದು ಪರಿಗಣಿಸಲಾಗುವುದು.

(2) **ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದ ಸ್ವೀಕೃತಿಗಳ ಮೇಲೆ ದಿನಾಂಕ ನಮೂದಿಸಿ ಮೊಹರು ಹಾಕಿ ಸಹಿ ಮಾಡಿದ ಸ್ವೀಕೃತಿಗಳನ್ನು ಮಾತ್ರ ಪರಿಗಣಿಸಲಾಗುವುದು ಇದು ಖುದ್ದು ಸರಬರಾಜುದಾರರ ಜವಾಬ್ದಾರಿ ಆಗಿದ್ದು, ಮೊಹರು/ಸಹಿ/ದಿನಾಂಕ ಹೊಂದಿರದ ಸ್ವೀಕೃತಿಗಳನ್ನು ಸರಬರಾಜುದಾರರ ಜವಾಬ್ದಾರಿಯ ಮೇಲೆ ತಿರಸ್ಕರಿಸಲಾಗುವುದು.**

7. ಬಟ್ಟೆಗಳ ಪ್ಯಾಕಿಂಗ್ :-

(1) ನಿಗಧಿತ ಸ್ಥಳಗಳಿಗೆ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ) ಸರಬರಾಜು ಮಾಡುವಾಗ ಸಮವಸ್ತ್ರ ಬಟ್ಟೆಗಳನ್ನು ಸೆಟ್ ರೂಪದಲ್ಲಿ ದೃಢವಾದ ಪ್ಯಾಕಿಂಗ್ ಮಾಡಿ ಸರಬರಾಜು ಮಾಡುವುದು.

(2) ಹೀಗೆ ಮಾಡಲಾದ ಪ್ಯಾಕಿಂಗ್ ಸಾಗಾಣಿಕೆಯಲ್ಲಿ (ಟ್ರಾನ್ಸಿಟ್) ಯಾವುದೇ ಕಾರಣಕ್ಕೆ ಹಾನಿ ಅಂದರೆ ಬಂಡಲ್‌ಗಳು ಮಳೆ/ಗಾಳಿ/ ಇನ್ನಿತರ ಎಲ್ಲಾ ಕಠಿಣ ಪರಿಸ್ಥಿತಿಗಳನ್ನು ನಿರಾಯಾಸವಾಗಿ ಎದುರಿಸಿ ಯಾವುದೇ ಹಾನಿ ಆಗದಂತೆ ಸಮವಸ್ತ್ರ ಬಟ್ಟೆಗಳು ಸುಸ್ಥಿತಿಯಲ್ಲಿ ಫಲಾನುಭವಿಗಳಿಗೆ ತಲುಪುವಂತೆ ಪ್ಯಾಕಿಂಗ್ ಮಾಡಿರಬೇಕು.

(3) ಸಮವಸ್ತ್ರಗಳ ಬಂಡಲ್ಸ್‌ಗಳನ್ನು ತರಗತಿವಾರು ಬಂಡಲ್ಸ್ ಮಾಡಬೇಕು. ಬಂಡಲ್ ಗಳ ಮೇಲೆ ತರಗತಿ, ಬಾಲಕರ / ಬಾಲಕಿಯರ ಬಟ್ಟೆಗಳ ಅಳತೆಯ ವಿವರ, ಬಂಡಲ್ ಗಳಲ್ಲಿರುವ ಸೆಟ್ ಗಳ ಸಂಖ್ಯೆ ವಿವರಗಳನ್ನು ಪ್ರತಿ ಬಂಡಲ್‌ಗಳ ಮೇಲೆ ಸ್ಪಷ್ಟವಾಗಿ ನಮೂದಿಸಿ ಸಂಸ್ಥೆಯ ಪ್ರತಿನಿಧಿಗಳು ದೃಢೀಕರಿಸಿರಬೇಕು.

(4) ಸಮವಸ್ತ್ರಗಳನ್ನು ಆಯಾ ತಾಲ್ಲೂಕುಗಳ ಮಕ್ಕಳ ಸಂಖ್ಯೆಗನುಗುಣವಾಗಿ ಸೆಟ್ ಗಳ ರೂಪದಲ್ಲಿ ಸರಬರಾಜು ಮಾಡಬೇಕು. ಬಿಡಿ ಬಿಡಿಯಾಗಿ ಷರ್ಟ್, ನಿಕ್ಕರ್, ಸ್ಕರ್ಟ್, ಇತ್ಯಾದಿಗಳ ಬಟ್ಟೆಯನ್ನು ಪ್ರತ್ಯೇಕವಾಗಿ ಸರಬರಾಜು ಮಾಡಬಾರದು. ಸಮವಸ್ತ್ರ ಸೆಟ್‌ಗಳನ್ನು ಸರಬರಾಜು ಮಾಡುವ ಮುಂಚೆ ಸರಬರಾಜುದಾರರು ಸಮವಸ್ತ್ರ ಬಟ್ಟೆಗಳನ್ನು ಅವರೇ ನಿರ್ದಿಷ್ಟ ಪಡಿಸಿದ ಈ ಕಾರ್ಯಕ್ಕಾಗಿಯೇ ಸೂಕ್ತ ವ್ಯವಸ್ಥೆ ಹೊಂದಿದ ಒಂದು ಪ್ರತ್ಯೇಕ ಕೇಂದ್ರವನ್ನು ತೆರೆದು ಆ ಕೇಂದ್ರದಲ್ಲಿ ಎಲ್ಲಾ ಬಟ್ಟೆಗಳನ್ನು ಕ್ರೋಢೀಕರಿಸಿ ಸೆಟ್ಸ್ ರೂಪದಲ್ಲಿಯೇ ಪ್ಯಾಕ್ ಮಾಡಿ ಅಲ್ಲಿಂದ ವಿವಿಧ ಜಿಲ್ಲೆ / ತಾಲ್ಲೂಕುಗಳಿಗೆ ಸೆಟ್ ಗಳ ರೂಪದಲ್ಲಿ ಮಾತ್ರ ಸರಬರಾಜು ಮಾಡಲು ಎಲ್ಲಾ ವ್ಯವಸ್ಥೆ ಗಳನ್ನು ಕಲ್ಪಿಸಿಕೊಳ್ಳುವುದು ಸರಬರಾಜು ಸಂಸ್ಥೆಗಳ ಜವಾಬ್ದಾರಿ ಆಗಿರುತ್ತದೆ.

8. ಸಮವಸ್ತ್ರ ಬಟ್ಟೆಗಳಿಗೆ ವಿಮೆ :-

(1) ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ-3 ರಂತೆ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ಸರಬರಾಜು ಮಾಡುವ ಸಮವಸ್ತ್ರ ಬಟ್ಟೆಗಳನ್ನು ತಯಾರಾದ ಸ್ಥಳದಿಂದ ನಿಗಧಿತ ಸ್ಥಳಗಳಿಗೆ ತಲುಪಿಸುವವರೆಗೆ ಸರಬರಾಜು ಮಾಡುವ ಬಟ್ಟೆಗಳ ಶೇಕಡಾ 110% ಮೌಲ್ಯಕ್ಕೆ ಯುದ್ಧ ಹಾಗೂ ಮುಷ್ಕರಗಳೂ ಸೇರಿದಂತೆ ಎಲ್ಲಾ ವಿಧದ ನಷ್ಟಗಳಿಗೂ ಒಳಪಟ್ಟಂತೆ ಪೂರ್ಣಪ್ರಮಾಣದ ವಿಮೆಯನ್ನು ಸರಬರಾಜುದಾರರು ಮಾಡಿಸಿರ ಬೇಕು.

9. ಸಮವಸ್ತ್ರ ಬಟ್ಟೆಗಳ ಸಾಗಾಣಿಕೆ :-

(1) ಸಮವಸ್ತ್ರಬಟ್ಟೆಗಳನ್ನು ಈ ಆದೇಶದ ಅನುಬಂಧ-2 ರಲ್ಲಿ ವಿವರಿಸಿದಂತೆ ಮತ್ತು ಬಟ್ಟೆಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಅನುಬಂಧದಲ್ಲಿನ ಟೆಕ್ನಿಕಲ್ ಸ್ಪೆಸಿಫಿಕೇಶನ್‌ಗೆ ಒಳಪಟ್ಟ ಬಟ್ಟೆಗಳನ್ನು ಮಾತ್ರ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ಪೂರ್ಣ ವಿಮೆಗೆ ಒಳಪಟ್ಟು ಸುಸ್ಥಿತಿಯಲ್ಲಿ ತಲುಪಿಸುವ ಜವಾಬ್ದಾರಿ ಸರಬರಾಜುದಾರರದ್ದಾಗಿರುತ್ತದೆ.

10. ಸರಬರಾಜುದಾರರು ನಿರ್ವಹಿಸಬೇಕಾದ ಪ್ರಾಸಂಗಿಕ ಸೇವೆಗಳು (ಇನ್ಸಿಡೆಂಟಲ್ ಸರ್ವೀಸಸ್):-

(1) ಸಮವಸ್ತ್ರ ಬಟ್ಟೆಗಳ ತಯಾರಕಾ ಘಟಕಗಳ ಸೂಕ್ತ ನಿರ್ವಹಣೆ, ಬಟ್ಟೆಗಳ ವಿಂಗಡಣೆ/ ತಾಲ್ಲೂಕುವಾರು ಸರಬರಾಜಿಗೆ ಬಟ್ಟೆಗಳನ್ನು ಕ್ರಸಂ-7 ರಲ್ಲಿ ವಿವರಿಸಿರುವ ರೀತಿಯಲ್ಲಿ ಸೆಟ್‌ವಾರು ಪ್ಯಾಕಿಂಗ್ ವ್ಯವಸ್ಥೆ, ಸಕಾಲದಲ್ಲಿ ನಿಗಧಿತ ಸಂಖ್ಯೆಯ ಸಮವಸ್ತ್ರ ಬಟ್ಟೆಗಳ ಸೆಟ್‌ಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಲುಪಿಸುವವರೆಗಿನ ಎಲ್ಲಾ ಕಾರ್ಯಗಳ ಮೇಲ್ವಿಚಾರಣೆ ಮತ್ತು ನಿರ್ವಹಣೆ.

(2) ಸರಬರಾಜು ಸಂಸ್ಥೆಯವರು ಬಟ್ಟೆಗಳ ಉತ್ಪಾದನೆ ಮತ್ತು ಸರಬರಾಜು ಪ್ರಗತಿಯ ಬಗ್ಗೆ ಪ್ರತಿ ಶನಿವಾರದಂದು ವರದಿಯನ್ನು ಕಡ್ಡಾಯವಾಗಿ ತಪ್ಪದೇ ಒಬ್ಬರು ಜವಾಬ್ದಾರಿಯುತ ಅಧಿಕಾರಿ/ನೌಕರರ ಮೂಲಕ ಮುದ್ದಾಂ ಶಿಕ್ಷಣ ಆಯುಕ್ತರ ಕಛೇರಿಗೆ ಸಲ್ಲಿಸುವುದು.

(3) ಸರಬರಾಜು ಮಾಡಿದ ಬಟ್ಟೆಗಳ ಬಣ್ಣ / ಗುಣಮಟ್ಟದಲ್ಲಿ ಯಾವುದೇ ಬದಲಾವಣೆ/ಕಳಪೆ ಗುಣಮಟ್ಟ ಇರಬಾರದು.

(4) ಸರಬರಾಜುದಾರರು ಈ ಮೇಲಿನ ಪ್ರಾಸಂಗಿಕ ಸೇವೆಗಳಲ್ಲದೆ ತತ್ಸಂಬಂಧ ಖರೀದಿದಾರರಿಗೆ ಅವಶ್ಯವೆನಿಸಿದ ಲಿಖಿತವಾಗಿ ತಿಳಿಸುವ ಇತರೆ ಸೇವೆಗಳನ್ನು ಒದಗಿಸಲು ಬದ್ಧರಾಗಿರತಕ್ಕದ್ದು.

11. ಸರಬರಾಜು ಮಾಡಿದ ಬಟ್ಟೆಗಳ ಗುಣಮಟ್ಟ ಖಾತ್ರಿಯ ಬಗ್ಗೆ:-

(1) ಈ ಆದೇಶದ ಅಡಿ ಸರಬರಾಜುದಾರರು ಸರಬರಾಜು ಮಾಡುವ ಸಮವಸ್ತ್ರ ಬಟ್ಟೆಗಳು ಹೊಸ / ಉಪಯೋಗಿಸದ ಬಟ್ಟೆಗಳಾಗಿದ್ದು, ಅನುಬಂಧ-2 ರಲ್ಲಿನ ಟೆಕ್ನಿಕಲ್ ಸ್ಪೆಸಿಫಿಕೇಶನ್‌ಗೆ ಪೂರಕವಾಗಿರುವ ಬಗ್ಗೆ ಮತ್ತು ಈ ಆದೇಶದ ಅಡಿ ಸರಬರಾಜು ಮಾಡುವ ಎಲ್ಲಾ ಸಮವಸ್ತ್ರ ಬಟ್ಟೆಗಳು ಭೌತಿಕವಾಗಿ / ವಿನ್ಯಾಸದಲ್ಲಿ / ತಯಾರಿಕೆಯಲ್ಲಿ ಯಾವುದೇ ನ್ಯೂನತೆ ಅಥವಾ ಲೋಪದೋಷಗಳಿಂದ ಕೂಡಿರುವುದಿಲ್ಲ ಎಂದು ಸರಬರಾಜುದಾರರು ಖರೀದಿದಾರರಿಗೆ ಖಾತ್ರಿ ಪಡಿಸಬೇಕು.

(2) ಈ ಖಾತ್ರಿ ನಿಯಮದಡಿ ಯಾವುದೇ ಕ್ಲೇಮು ಉದ್ಭವಿಸಿದಲ್ಲಿ ಖರೀದಿದಾರರು ಸರಬರಾಜುದಾರರಿಗೆ ಬರವಣಿಗೆ ಮೂಲಕ ಪ್ರಕಟ ಪಡಿಸಬೇಕು.

(3) ಇಂತಹ ಸಂದರ್ಭದಲ್ಲಿ ಖರೀದಿದಾರರು ನೋಟೀಸ್‌ನಲ್ಲಿ ತಿಳಿಸಿದ ಅವಧಿಯೊಳಗೆ ಸರಬರಾಜುದಾರರುನ್ಯೂನತೆ ಹೊಂದಿದ ಸಮವಸ್ತ್ರ ಬಟ್ಟೆಗಳನ್ನು ಹಿಂಪಡೆದು ನ್ಯೂನತೆ ಇಲ್ಲದ ಹೊಸಬಟ್ಟೆಯನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಯಾವುದೇ ಹೆಚ್ಚುವರಿ ವೆಚ್ಚ ಬಯಸದೆ 15 ದಿನದೊಳಗಾಗಿ ಸರಬರಾಜು ಮಾಡುವುದು.

62

9

(4) ಖರೀದಿದಾರರು ಸೂಚಿಸಿದ ಅವಧಿಯೊಳಗಾಗಿ ನ್ಯೂನತೆ ಇರುವ ಬಟ್ಟೆಗಳನ್ನು ಬದಲಾವಣೆ ಮಾಡಿಕೊಡಲು ಸರಬರಾಜು ದಾರರು ವಿಫಲರಾದಲ್ಲಿ ಪರಿಹಾರಕ್ಕಾಗಿ ಸರಬರಾಜುದಾರರ ಜವಾಬ್ದಾರಿಯಮೇಲೆ ಅಗತ್ಯವೆನಿಸಿದ ಯೋಗ್ಯ ಶಿಸ್ತು ಕ್ರಮ ಕೈಗೊಳ್ಳಲು ಖರೀದಿದಾರರು ಹಕ್ಕುಳ್ಳವರಾಗಿರುತ್ತಾರೆ.

12. **ಸರಬರಾಜು ವೆಚ್ಚದ ಪಾವತಿ:-**

(1) ಸರಬರಾಜುದಾರರು ಖರೀದಿದಾರರಿಗೆ ಸಮವಸ್ತ್ರ ಸರಬರಾಜು ವೆಚ್ಚದ ಪಾವತಿಯನ್ನು ಲಿಖಿತ ರೂಪದಲ್ಲಿ ಕೋರತಕ್ಕದ್ದು, ಹೀಗೆ ಪಾವತಿ ಕೋರುವಾಗ ಪಾವತಿ ಕೋರಿರುವ ಮೊತ್ತಕ್ಕೆ ಸರಿಹೊಂದುವಂತೆ ಸಮವಸ್ತ್ರಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಲುಪಿಸಿ ಅವರಿಂದ ಸಮವಸ್ತ್ರಗಳನ್ನು ಸುಸ್ಥಿತಿಯಲ್ಲಿ ಪಡೆದ ಬಗ್ಗೆ ಮೊಹರು/ಸಹಿ/ದಿನಾಂಕವನ್ನು ಸ್ಪಷ್ಟವಾಗಿ ನಮೂದಿಸಿದ ಸ್ವೀಕೃತಿ (ಇನ್ವಾಯ್ಸ್) ಗಳನ್ನು ಅವಶ್ಯವಾಗಿ ಲಗತ್ತಿಸಿರತಕ್ಕದ್ದು,

(2) ಹೀಗೆ ಸರಬರಾಜುದಾರರು ಕೋರಿದ ವೆಚ್ಚವನ್ನು ಕೋರಿಕೆ ಸಲ್ಲಿಸಿದ 90 (ತೊಂಭತ್ತು) ದಿನಗಳ ಒಳಗೆ ಪಾವತಿ ಮಾಡಲಾಗುವುದು

(3) ಸಮವಸ್ತ್ರಗಳನ್ನು ಸರಬರಾಜಿನ ಬಗ್ಗೆ ಸಂಸ್ಥೆಯವರು ಸರಬರಾಜು ವೆಚ್ಚವನ್ನು ಕ್ಲೇಮು ಮಾಡುವಾಗ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದ ಸ್ವೀಕೃತಿಗಳೊಂದಿಗೆ ಈ ಕಛೇರಿಗೆ ಸಲ್ಲಿಸಿದ ನಂತರ ಸರ್ಕಾರದಿಂದ ಈ ಯೋಜನೆಗಾಗಿ ಬಿಡುಗಡೆ ಆಗಿರುವ ಅನುದಾನವನ್ನು ಅನುಸರಿಸಿ ವೆಚ್ಚ ಪಾವತಿಸಲು ಇಲಾಖೆಯಿಂದ ಕ್ರಮ ತೆಗೆದುಕೊಳ್ಳಲಾಗುವುದು. ಸರಬರಾಜು ವೆಚ್ಚದ ಪಾವತಿಯು ರಾಜ್ಯ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡುವ ಕ್ರಮಕ್ಕೆ ಒಳಪಟ್ಟಿರುತ್ತದೆ.

(4) ಸರಬರಾಜುದಾರರಿಗೆ ವೆಚ್ಚವನ್ನು ಪಾವತಿಸುವ ಸಂದರ್ಭದಲ್ಲಿ ಸರಬರಾಜುದಾರರು ಮತ್ತು ಖರೀದಿದಾರರೊಂದಿಗೆ ಆಗಿರುವ ಒಪ್ಪಂದದ ರೀತಿಯಲ್ಲಿ ಅಂದರೆ ಈ ಆದೇಶದ ಅನುಬಂಧ-01 ರಲ್ಲಿ ತಿಳಿಸಿರುವಂತೆ ಸರಬರಾಜು ಮಾಡುವ ಬಟ್ಟೆಯ ಪ್ರತಿ ಮೀಟರ್/ಸೆಟ್‌ಗೆ ನಿಗಧಿ ಪಡಿಸಿರುವ ದರದಲ್ಲಿ ಯಾವುದು ಕನಿಷ್ಠವೋ ಅದನ್ನು ಪರಿಗಣಿಸಿ ವೆಚ್ಚವನ್ನು ಪಾವತಿಸಲಾಗುವುದು. ದರಗಳು ನಿರ್ಧಾರಿತ / ನಿಗಧಿಪಡಿಸಿದ ದರಗಳಾಗಿದ್ದು, ಯಾವುದೇ ಕಾರಣಕ್ಕೆ ದರಗಳ ಬದಲಾವಣೆಗೆ ಅವಕಾಶ ಇರುವುದಿಲ್ಲ.

(5) ಸರಬರಾಜುದಾರರಿಗೆ ಸರಬರಾಜು ಮಾಡಿದ ಸಮವಸ್ತ್ರಬಟ್ಟೆಗಳ ವೆಚ್ಚವನ್ನು ಬಟ್ಟೆಗಳ ಸರಬರಾಜನ್ನು ಮಾಡಿ ಸಂಬಂಧಿಸಿದ ಅಧಿಕಾರಿ / ಪ್ರತಿನಿಧಿಯಿಂದ ಪಡೆದ ಸ್ವೀಕೃತಿಯ ಆಧಾರದಮೇಲೆ ಕರಾರಿನಲ್ಲಿ ಒಪ್ಪಂದವಾಗಿರುವ ದರದ ಶೇಕಡ 90% ರಷ್ಟು (ಬಟ್ಟೆಗಳಿಗೆ ನಿಗಧಿತ ಸ್ಪೆಸಿಫಿಕೇಶನ್ ನಲ್ಲಿನ ಯಾವುದೇ ಗುಣ ಅಥವಾ ಪಥ ಬದಲಾವಣೆಗೆ ಹಾಗೂ ವಿಳಂಬ ಸರಬರಾಜಿಗೆ ವಿಧಿಸುವ ದಂಡವನ್ನು ಹೊರತುಪಡಿಸಿ) ಪಾವತಿಸಲಾಗುವುದು.

(6) ಉಳಿದ ಶೇಕಡಾ 10% ಮೊತ್ತವನ್ನು ಬಟ್ಟೆಗಳ ಸರಬರಾಜು ಕಾರ್ಯ ಪೂರ್ಣಗೊಂಡು ಗುಣಮಟ್ಟ ಪರಿಶೀಲನಾ ಸಂಸ್ಥೆ ಯಿಂದ ಗುಣಮಟ್ಟ ಪರೀಕ್ಷಾ ವರದಿ ಪಡೆದ ನಂತರ ನಿಯಮಾನುಸಾರ ದಂಡ ಶುಲ್ಕಗಳನ್ನು ಕಟಾಯಿಸಿ ಪಾವತಿಸಲಾಗುತ್ತದೆ.

(7) ಸರ್ಕಾರದಿಂದ ಬಿಡುಗಡೆ ಆದ ಅನುದಾನವನ್ನು ಅನುಸರಿಸಿ ಮತ್ತು ಲಭ್ಯ ಅನುದಾನದ ಆಧಾರದ ಮೇಲೆ ವೆಚ್ಚಗಳನ್ನು ಪಾವತಿಸಲಾಗುತ್ತದೆ.

13. **ಆದೇಶದ ಬದಲಾವಣೆ:-**

(1) ಅರ್ಜಿದಾರರು ಯಾವುದೇ ಸಂದರ್ಭದಲ್ಲಿ ಸರಬರಾಜುದಾರರಿಗೆ ಲಿಖಿತ ಆದೇಶ ನೀಡುವ ಮೂಲಕ/ ಸಮವಸ್ತ್ರ ಬಟ್ಟೆಗಳಿಗೆ ಸಂಬಂಧಿಸಿದಂತೆ ಈ ಆದೇಶದ ಸಾಮಾನ್ಯ ವ್ಯಾಪ್ತಿಗೊಳಪಟ್ಟು ಕೆಳಕಂಡ ಒಂದು ಅಥವಾ ಹೆಚ್ಚಿನ ಬದಲಾವಣೆ ತರಲು ಖರೀದಿದಾರರಿಗೆ ಅಧಿಕಾರ ಇರುತ್ತದೆ.

(ಅ) ಖರೀದಿದಾರರಿಗೆ ನಿಶ್ಚಿತವಾಗಿ ತಯಾರು ಮಾಡಿ ಸರಬರಾಜು ಮಾಡಬೇಕಾದ ಬಟ್ಟೆಯ ರೂಪ/ಮಾದರಿ / ವಿನ್ಯಾಸ/ ಸ್ಪೆಸಿಫಿಕೇಶನ್.

(ಆ) ಸಮವಸ್ತ್ರ ಬಟ್ಟೆಗಳನ್ನು ಒಯ್ಯುವ/ ಪ್ಯಾಕಿಂಗ್/ ವಿಧಾನ

(ಇ) ಸರಬರಾಜು ಮಾಡಬೇಕಾದ ಬಟ್ಟೆಗಳನ್ನು ತಲುಪಿಸಬೇಕಾದ ಸ್ಥಳ ಅಥವಾ

63

(ಈ) ಖರೀದಿದಾರರಿಗೆ ಸರಬರಾಜುದಾರರು ಒದಗಿಸಬೇಕಾದ ಸೇವೆಯ ಬಗ್ಗೆ.

(ಉ) ಸರಬರಾಜುದಾರರಿಗೆ ವಹಿಸಿರುವ ಕಾರ್ಯದ ಒಟ್ಟಾರೆ ಪರಿಮಾಣದಲ್ಲಿ ಶೇಕಡ-15 ಹೆಚ್ಚಳ ಅಥವಾ ಕಡಿಮೆ ಮಾಡುವ ಅಧಿಕಾರ ಖರೀದಿದಾರರಿಗೆ ಇರುತ್ತದೆ.

(2) ಇಂತಹ ಬದಲಾವಣೆಯಿಂದ ಸರಬರಾಜುದಾರರಿಗೆ ಬಟ್ಟೆಗಳ ಸರಬರಾಜಿನ ವೆಚ್ಚದಲ್ಲಿ ಆಗಬಹುದಾದ ಹೆಚ್ಚು ಅಥವಾ ಕಡಿಮೆ ದರಗಳ ಬಗ್ಗೆ ಅಥವಾ ಸರಬರಾಜಿನ ಕಾಲಾವಧಿಯಲ್ಲಿ ಆಗಬಹುದಾದ ವ್ಯತ್ಯಯಗಳ ಬಗ್ಗೆ ಈ ಆದೇಶಕ್ಕೆ ಸೂಕ್ತ ಪರಿಹಾರಪೂರ್ವಕ ಬದಲಾವಣೆಯನ್ನು ಲಿಖಿತವಾಗಿ ನೀಡಲಾಗುವುದು,

(3) ಸರಬರಾಜುದಾರರ ಯಾವುದೇ ಕ್ಲೇಮುಗಳ ಬಗ್ಗೆ ಅಥವಾ ಖರೀದಿದಾರರ ಮತ್ತು ಸರಬರಾಜುದಾರರ ಹೊಂದಾಣಿಕೆ ಬಗ್ಗೆ ಯಾವುದೇ ಆದೇಶ ಹೊರಡಿಸಿದ 30 (ಮೂವತ್ತು)ದಿನಗಳ ಒಳಗಾಗಿ ಪರಿಹಾರ ಕಲ್ಪಿಸಿಕೊಳ್ಳಲು ಅವಕಾಶವಿರುತ್ತದೆ.

14. **ಕರಾರು ಒಪ್ಪಂದದ ತಿದ್ದುಪಡಿ:-**

(1) ಖರೀದಿದಾರರು ಮತ್ತು ಸರಬರಾಜುದಾರರಿಬ್ಬರೂ ಲಿಖಿತ ಒಪ್ಪಿ ಕರಾರು ಒಪ್ಪಂದದ ತಿದ್ದುಪಡಿಗೆ ಸಹಿಮಾಡದ ಹೊರತು ಕರಾರಿನಲ್ಲಿನ ಯಾವುದೇ ಷರತ್ತು / ನಿಬಂಧನೆಗಳನ್ನು ಬದಲಾವಣೆ ಮಾಡತಕ್ಕದ್ದಲ್ಲ.

15. **ನಿಯಮಿತ ಕಾರ್ಯ (Assignment) :-**

(1) ಖರೀದಿದಾರರ ಪೂರ್ವ ಲಿಖಿತ ಒಪ್ಪಿಗೆ ಪಡೆಯದ ಹೊರತು ಸರಬರಾಜುದಾರರು ಈ ಕರಾರಿನಡಿ ನಿಯಮಿತವಾದ ಒಂದು ಭಾಗ ಅಥವಾ ಪೂರ್ಣವಾಗಿ ಯಾವುದೇ ಕಾರ್ಯವನ್ನು ನಿರ್ವಹಿಸತಕ್ಕದ್ದಲ್ಲ.

16. **ಉಪಕರಾರು (ಒಳ ಒಪ್ಪಂದ) (Sub Contract) :-**

(1) ಸಮವಸ್ತ್ರಗಳ ಬಟ್ಟೆಯನ್ನು ರಾಜ್ಯದ ಕೈಮಗ್ಗಗಳ ಘಟಕಗಳಿಂದ ಮಾತ್ರ ಪಡೆದು ಸರಬರಾಜು ಮಾಡಬೇಕು. ಇತರೆ ಯಾವುದೇ ಸಂಸ್ಥೆಗಳು ಅಥವಾ ಖಾಸಗಿ ಸಂಸ್ಥೆಗಳಿಂದ ಖರೀದಿಸಿ ಸರಬರಾಜು ಮಾಡತಕ್ಕದ್ದಲ್ಲ.

(2) ಸರಬರಾಜುದಾರರು ಈ ಕರಾರಿನಡಿ ಆದೇಶಿಸಿರುವ ಸಮವಸ್ತ್ರಗಳ ಸರಬರಾಜಿನ ಪೂರ್ಣ ಪ್ರಮಾಣದ ಅಥವಾ ಭಾಗಶಃ ಪ್ರಮಾಣವನ್ನು ಉಪಕರಾರು ಮಾಡತಕ್ಕದ್ದಲ್ಲ.

17. **ಕಾಂಟ್ರ್ಯಾಕ್ಟ್ ನಿರ್ವಹಣೆಯಲ್ಲಿ ಸರಬರಾಜುದಾರರ(ಕಾಂಟ್ರ್ಯಾಕ್ಟ್ ದಾರರ) ವಿಳಂಬ :-**

(1) ಈ ಕರಾರಿನಡಿ ಸರಬರಾಜುದಾರರು ನಿರ್ವಹಿಸಬೇಕಾದ ಕಾರ್ಯವನ್ನು ಅಂದರೆ ತಯಾರಿಸಿದ ಸಮವಸ್ತ್ರ ಬಟ್ಟೆಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ನಿಗಧಿ ಪಡಿಸಿರುವ ಅಂತಿಮ ದಿನಾಂಕದ ಒಳಗಾಗಿ ಚಾಚೂ ತಪ್ಪದೆ ಸರಬರಾಜು ಕಾರ್ಯ ನಿರ್ವಹಿಸತಕ್ಕದ್ದು,

(2) ಯಾವುದೇ ಒಂದು ಸಂದರ್ಭದಲ್ಲಿ ಈ ಕರಾರಿನಡಿ ನಿರ್ವಹಿಸಲಾಗುವ ಕಾರ್ಯದಲ್ಲಿ ಸಮವಸ್ತ್ರಗಳ ಸರಬರಾಜನ್ನು ನಿಗಧಿತ ಕಾಲಾವಧಿಯಲ್ಲಿ ಸರಬರಾಜು ಮಾಡಲು ತೊಡಕು ಉಂಟಾದ ಸಂದರ್ಭದಲ್ಲಿ ಸರಬರಾಜುದಾರರು ವಿಳಂಬಕ್ಕೆ ಸೂಕ್ತ ವಿವರಣೆ ಮತ್ತು ಕಾರಣಗಳನ್ನು ಮತ್ತು ಈ ರೀತಿ ಉಂಟಾದ ತೊಡಕನ್ನು ಸರಿಪಡಿಸಲು ಬೇಕಾದ ಕಾಲಾವಧಿ ಬಗ್ಗೆ ಖರೀದಿದಾರರಿಗೆ ಲಿಖಿತವಾಗಿ ತಿಳಿಸುವುದು. ಈ ರೀತಿ ಸರಬರಾಜುದಾರರಿಂದ ಸ್ವೀಕೃತ ಲಿಖಿತ ವಿವರಣೆ ಬಗ್ಗೆ ಖರೀದಿದಾರರು ಸಂದರ್ಭವನ್ನು ಮೌಲ್ಯಮಾಪನ ಮಾಡಿ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಸರಬರಾಜು ದಾರರಿಗೆ ಸೂಕ್ತ ಕಾಲಾವಕಾಶವನ್ನು ದಂಡ ಸಹಿತ ಅಥವಾ ದಂಡರಹಿತವಾಗಿ ಅನುಮತಿಸುವುದು, ಅಥವಾ ತಿರಸ್ಕರಿಸುವುದು ಖರೀದಿದಾರರ ವಿವೇಚನಾ ಅಧಿಕಾರಕ್ಕೆ ಒಳಪಟ್ಟಿರುತ್ತದೆ.

64

16

18. ನಷ್ಟ ಪರಿಹಾರ (Liquidated Damages) :-

(1) ಸರಬರಾಜುದಾರರು ಈ ಆದೇಶಕ್ಕೆ ಒಳಪಟ್ಟಂತೆ ಸಮವಸ್ತ್ರ ಬಟ್ಟೆಗಳ ಸರಬರಾಜನ್ನು ಭಾಗಶಃ ಅಥವಾ ಪೂರ್ಣ ಪ್ರಮಾಣದಲ್ಲಿ ಈ ಆದೇಶದಂತೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ನಿಗಧಿತ ಸಂಖ್ಯೆಯಲ್ಲಿ ಸಮವಸ್ತ್ರ ಸೆಟ್‌ಗಳನ್ನು ತಿಳಿಸಿರುವಂತೆ ನಿಗಧಿತ ಕಾಲಾವಕಾಶದೊಳಗೆ ತಲುಪಿಸಲು ವಿಫಲರಾದಲ್ಲಿ ಈ ಕರಾರಿನಡಿ ಖರೀದಿದಾರರು ಬೇರೆ ಪರಿಹಾರವಿಲ್ಲದೆ ವಿಳಂಬ ಸರಬರಾಜು ಮಾಡಿದ ಸಮವಸ್ತ್ರಬಟ್ಟೆಗಳ ಮೌಲ್ಯದ ಮೇಲೆ ಪ್ರತಿ ವಾರದ ವಿಳಂಬಕ್ಕೆ ವಾರ ಒಂದಕ್ಕೆ 1% ರಂತೆ ಮೊದಲ ತಿಂಗಳಿಗೆ ಹಾಗೂ ನಂತರದ ವಿಳಂಬಕ್ಕೆ ಪ್ರತಿ ವಾರದ ವಿಳಂಬಕ್ಕೆ ಶೇಕಡ 2% ದಂಡವನ್ನು ವಿಳಂಬದ ಪ್ರಮಾಣದ ಬಟ್ಟೆಗೆ ಲಿಕ್ವಿಡೇಟೆಡ್ ಡ್ಯಾಮೇಜಸ್‌ಗಾಗಿ ದಂಡ ವಿಧಿಸಲಾಗುತ್ತದೆ.

19. ಕಾಂಟ್ರ್ಯಾಕ್ಟ್ ರದ್ದುಪಡಿಸುವಿಕೆ (Termination for Default) :-

(1) ಸರಬರಾಜುದಾರರು ಕರಾರಿನಲ್ಲಿನ ಯಾವುದೇ ಷರತ್ತು/ ಅಂಶಗಳನ್ನು ಉಲ್ಲಂಘಿಸಿದಲ್ಲಿ ತಪ್ಪಿನ ಬಗ್ಗೆ ಅಥವಾ ಉಲ್ಲಂಘಿಸಿದ ಅಂಶಗಳಬಗ್ಗೆ ಸರಬರಾಜುದಾರರಿಗೆ ಲಿಖಿತ ನೋಟೀಸ್ ನೀಡುವ ಮೂಲಕ ವಹಿಸಿರುವ ಕಾರ್ಯಾದೇಶವನ್ನು ಭಾಗಶಃ ಅಥವಾ ಪೂರ್ಣವಾಗಿ ರದ್ದುಪಡಿಸುವ ಅಧಿಕಾರ ಖರೀದಿದಾರರಿಗೆ ಇರುತ್ತದೆ.

(ಅ) ಸರಬರಾಜುದಾರರು ವಹಿಸಿರುವ ಕಾರ್ಯವನ್ನು ಪೂರ್ಣ ಅಥವಾ ಭಾಗಶಃ ನಿಗಧಿತ ಸಮಯದಲ್ಲಿ ಅಥವಾ ಖರೀದಿದಾರರು ಒಪ್ಪಿ ವಿಸ್ತರಿಸಲಾಗಿರುವ ದಿನಾಂಕದೊಳಗೆ ಪೂರ್ಣಗೊಳಿಸದ ಪಕ್ಷದಲ್ಲಿ.

(ಆ) ಸರಬರಾಜುದಾರರು ಈ ಕರಾರಿನ ಯಾವುದೇ ಅನಿವಾರ್ಯತೆಗಳನ್ನು ನಿರ್ವಹಿಸಲು ವಿಫಲರಾದಲ್ಲಿ.

(ಇ) ಸರಬರಾಜುದಾರರು ಈ ಕರಾರಿನ ನಿರ್ವಹಣೆಯಸಂಬಂಧ ಭ್ರಷ್ಟ ಅಥವಾ ವಂಚನೆ ಪ್ರಕರಣದಲ್ಲಿ ನಿರತರಾಗಿದ್ದರೆಂದು ಖರೀದಿದಾರರು ತೀರ್ಮಾನಿಸಲ್ಪಟ್ಟರೆ.

ಭ್ರಷ್ಟ ಅಥವಾ ವಂಚನೆ ಪ್ರಕರಣ ಎಂದರೆ ಈ ಕರಾರಿನ ಅನುಷ್ಠಾನದ ಪ್ರಕ್ರಿಯೆಯಲ್ಲಿ ಸಾರ್ವಜನಿಕ ಅಧಿಕಾರಿ/ನೌಕರರೊಂದಿಗೆ ಕರಾರಿನ ಬಗ್ಗೆ ಪ್ರಸ್ತಾಪಿಸುವುದು/ ಯಾವುದೇ ಮೌಲ್ಯ ಅಥವಾ ಬೇಡಿಕೆ ಮುಂದಿಡುವುದು.

ವಂಚನೆ ಪ್ರಕರಣ ಎಂದರೆ ಕಾರ್ಯಾದೇಶವನ್ನು ಪಡೆಯುವ ಉದ್ದೇಶಕ್ಕಾಗಿ ವಾಸ್ತವಾಂಶ ಅಥವಾ ವಾಸ್ತವಗಳನ್ನು ತಿರುಚಿದ ದಾಖಲೆಗಳನ್ನು ಸಲ್ಲಿಸುವುದು ಮತ್ತು ಸರಬರಾಜು ಕಾರ್ಯಕ್ಕಾಗಿ ಬಿಡ್ ಸಲ್ಲಿಸುವ ಅಥವಾ ಇತರೆ ಸಂಸ್ಥೆಗಳೊಂದಿಗೆ ಸರಬರಾಜು ವೆಚ್ಚಕ್ಕೆ ಸಂಬಂಧಿಸಿದಂತೆ ಒಳಸಂಚು ರೂಪಿಸುವುದು.

(2) ಮೇಲಿನ ಸಂದರ್ಭಗಳಡಿ ಖರೀದಿದಾರರು ಸರಬರಾಜುದಾರರ ಕಾರ್ಯಾದೇಶವನ್ನು ಭಾಗಶಃ ಅಥವಾ ಪೂರ್ಣವಾಗಿ ರದ್ದುಗೊಳಿಸಿದ ಪಕ್ಷದಲ್ಲಿ ಖರೀದಿ ಮಾಡಬೇಕಾದ ಸಮವಸ್ತ್ರ ಬಟ್ಟೆಗಳನ್ನು ತನಗೆ ಸೂಕ್ತವೆನಿಸಿದ ಕ್ರಮವನ್ನು ಅನುಸರಿಸಿ ಖರೀದಿಮಾಡಲು ಹಕ್ಕುಳ್ಳವರಾಗಿರುತ್ತಾರೆ. ಇಂತಹ ಸಂದರ್ಭದಲ್ಲಿ ತಗಲಬಹುದಾದ ಹೆಚ್ಚುವರಿ ವೆಚ್ಚವನ್ನು ಮೊದಲಿನ (ಕರಾರು ರದ್ದುಪಡಿಸಲಾದ) ಸರಬರಾಜುದಾರರೇ ಭರಿಸಬೇಕಾಗುತ್ತದೆ ಮತ್ತು ರದ್ದು ಮಾಡಲ್ಪಡದ ಭಾಗದ ಸರಬರಾಜನ್ನು ಮುಂದುವರಿಸತಕ್ಕದ್ದಾಗಿರುತ್ತದೆ.

20. ಗುಣಮಟ್ಟದ ಉಲ್ಲಂಘನೆಗಾಗಿ ದಂಡ (Penalty for Quality Deviation) :-

(1) ಸರಬರಾಜು ಮಾಡಲ್ಪಟ್ಟ ಸಮವಸ್ತ್ರ ಬಟ್ಟೆಗಳು ಈ ಕಾರ್ಯಾದೇಶದ ಅನುಬಂಧ-2 ರಲ್ಲಿನ ಟೆಕ್ನಿಕಲ್ ಸ್ಪೆಸಿಫಿಕೇಶನ್ ನಲ್ಲಿ ಹೇಳಿರುವಂತೆ ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಕಡ್ಡಾಯವಾಗಿರುತ್ತದೆ. ಹೀಗೆ ಗುಣಮಟ್ಟ ಕಾಯ್ದುಕೊಂಡಿರುವುದನ್ನು ದೃಢಪಡಿಸಿಕೊಳ್ಳಲು ಖರೀದಿದಾರರು ಸೂಕ್ತ ತಾಂತ್ರಿಕ ಪರೀಕ್ಷೆಗಳನ್ನು ಅನುಸರಿಸಬೇಕಾಗುತ್ತದೆ, ಈ ಕುರಿತು

65

12

ಪರೀಕ್ಷೆಯ ವಿಧಾನ ಅನುಸರಿಸುವ ಕ್ರಮಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ನಿರ್ಧರಿಸುತ್ತಾರೆ. ಸಮವಸ್ತ್ರಗಳ ಗುಣಮಟ್ಟವು ಟೆಕ್ನಿಕಲ್ ಸ್ಪೆಸಿಫಿಕೇಶನ್‌ಗಳಿಗೆ ಪೂರಕವಾಗಿರುವ ಬಗ್ಗೆ ತಾಂತ್ರಿಕ ಪರಿಶೀಲನೆಯನ್ನು ಭಾರತ ಸರ್ಕಾರ ಸ್ವಾಮ್ಯದ ಸಂಸ್ಥೆಗಳಿಂದ ನಿರ್ವಹಿಸಲಾಗುವುದು.

(2) ಸರಬರಾಜು ಮಾಡಿದ ಸಮವಸ್ತ್ರಗಳು ಇಲಾಖೆ ನಿರ್ಧಿಷ್ಟ ಪಡಿಸಿರುವ ಸ್ಪೆಸಿಫಿಕೇಶನ್‌ಗಳನ್ನು ಉಲ್ಲಂಘಿಸಿದಲ್ಲಿ ಅಥವಾ ವಿಚಲನೆ ಆಗಿದ್ದಲ್ಲಿ ನಿರ್ಧಿಷ್ಟ ಸ್ಪೆಸಿಫಿಕೇಶನ್ ಮೀರಿದ ಅಂಕಗಳಿಗೆ ದಂಡ ವಿಧಿಸುವ ಅಥವಾ ದೋಷಪೂರಿತ ಬಟ್ಟೆಗಳನ್ನು ತಿರಸ್ಕರಿಸುವ ವಿವೇಚನಾಧಿಕಾರ ಆಯುಕ್ತರು, ಸಾ.ಶಿ.ಇ ಇವರಿಗೆ ಇರುತ್ತದೆ. ಅಲ್ಲದೆ ಬಟ್ಟೆಗಳ ತಾಂತ್ರಿಕ ಪರೀಕ್ಷೆ ನಡೆಸಿದ ಸಂಸ್ಥೆಯವರು ನೀಡಿರುವ ವರದಿಯ ಆಧಾರದ ಮೇಲೆ ಗುಣಮಟ್ಟವನ್ನು ಉಲ್ಲಂಘಿಸಿದ ಸಮವಸ್ತ್ರ ಬಟ್ಟೆಗಳಿಗೆ ಪ್ರತಿಯೊಂದು ಪ್ಯಾರಾ ಮೀಟರನ್ನು ಗಣನೆಗೆ ತೆಗೆದುಕೊಂಡು ಗುಣಮಟ್ಟ ಉಲ್ಲಂಘಿಸಿದ ಬಟ್ಟೆಗಳ ಸರಬರಾಜು ಮೌಲ್ಯಕ್ಕೆ ಶೇಕಡ 2% ದಣಡವನ್ನು ಗುಣಮಟ್ಟ ಕಡಿಮೆ ಇರುವ ಪ್ಯಾರಾಮೀಟರ್‌ಗೆ ಸಂಬಂಧಿಸಿದ 25000ಮೀಟರ್ ಲಾಟ್‌ನ ಮೌಲ್ಯಕ್ಕೆ(ಸರಬರಾಜು ಪೂರ್ವ ಗುಣಮಟ್ಟ ವರದಿ) ಹಾಗೂ ಗುಣಮಟ್ಟ ಕಡಿಮೆ ಇರುವ ಸ್ಯಾಂಪಲ್‌ನ ಪ್ರತಿ ತಾಲ್ಲೂಕಿನ ಸರಬರಾಜು ಮೌಲ್ಯಕ್ಕೆ (ಸರಬರಾಜಿನ ನಂತರದ ಗುಣಮಟ್ಟ ವರದಿ) ವಿಧಿಸಲು ಹಾಗೂ ದಂಡ ವಿಧಿಸುವ ಕ್ರಮವನ್ನು ತೀರ್ಮಾನ ಮಾಡಲು ಸಾ.ಶಿ.ಇ. ಆಯುಕ್ತರಿಗೆ ಅಧಿಕಾರ ಇರುತ್ತದೆ.

(3) ಅಲ್ಲದೆ ಬಟ್ಟೆಗಳ ಪರೀಕ್ಷಾವರದಿಯು ನಿಗಧಿತ ಸ್ಪೆಸಿಫಿಕೇಶನ್ ನಲ್ಲಿನ ಗುಣಗಳನ್ನು ಒಪ್ಪಲು ಸಾಧ್ಯವಿಲ್ಲದ ಮಟ್ಟಿಗೆ ಉಲ್ಲಂಘನೆ ಆಗಿದ್ದಲ್ಲಿ ಅಂತಹ ಸೆಟ್‌ಗಳ ಪೂರ್ಣ ಪ್ರಮಾಣವನ್ನು ತಿರಸ್ಕರಿಸಿ ಬದಲಿಗೆ ಬೇರೆ ಪೂರ್ಣ ಗುಣಮಟ್ಟಕ್ಕೆ ಹೊಂದಾಣಿಕೆ ಆಗುವಂತಹ ಹೊಸ ಬಟ್ಟೆಗಳನ್ನು ಸರಬರಾಜು ಮಾಡಲು ಆದೇಶಿಸುವ ಅಧಿಕಾರ ಖರೀದಿದಾರರಿಗೆ ಇರುತ್ತದೆ.

21. ಖರೀದಿದಾರರ ಸೌಕರ್ಯದ ಮೇರೆಗೆ ಕರಾರಿನ ರದ್ದತಿ:-

(1) ಖರೀದಿದಾರರು ಯಾವುದೇ ಸಂದರ್ಭದಲ್ಲಿ ತಮ್ಮ ಸೌಕರ್ಯದ ಹಿನ್ನೆಲೆಯಲ್ಲಿ ಸರಬರಾಜುದಾರರಿಗೆ ಲಿಖಿತ ನೋಟೀಸ್ ನೀಡಿ ಪೂರ್ಣ ಅಥವಾ ಭಾಗಶಃ ಕರಾರನ್ನು ರದ್ದುಪಡಿಸಬಹುದಾಗಿದೆ. ಹೀಗೆ ರದ್ದುಪಡಿಸುವಾಗ ನೋಟೀಸಿನಲ್ಲಿ ಖರೀದಿದಾರರ ಸೌಕರ್ಯಕ್ಕಾಗಿ ಎಂದು ತಿಳಿಸಿ ಅದಕ್ಕೆ ಕಾರಣಗಳನ್ನು ಸ್ಪಷ್ಟವಾಗಿ ನಮೂದಿಸಬೇಕು, ಮತ್ತು ಕರಾರಿನ ಎಷ್ಟು ಭಾಗವನ್ನು ರದ್ದುಪಡಿಸಿದೆ ಎಂಬುದನ್ನು ಮತ್ತು ಸದರಿ ರದ್ದುಆದೇಶ ಯಾವ ದಿನಾಂಕ ದಿಂದ ಜಾರಿಗೆ ಬರುತ್ತದೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಿರಬೇಕು.

(2) ಇಂತಹ ಸಂದರ್ಭದಲ್ಲಿ ಖರೀದಿದಾರರ ರದ್ದು ಆದೇಶವನ್ನು ಸ್ವೀಕರಿಸಿದ ಸರಬರಾಜುದಾರರು ಈ ಆದೇಶ ಸ್ವೀಕರಿಸಿದ ದಿನಾಂಕದಿಂದ 07 (ಏಳು) ದಿನಗಳ ವರೆಗಿನ ಅವಧಿಯಲ್ಲಿ ಸರಬರಾಜಿಗೆ ತಯಾರಾಗಿರುವ ಬಟ್ಟೆಗಳನ್ನು ಖರೀದಿದಾರರು ಕರಾರಿನಲ್ಲಿ ನಿಗಧಿಯಾಗಿರುವ ದರಗಳಂತೆ ಒಪ್ಪಿಕೊಳ್ಳತಕ್ಕದ್ದು ಮತ್ತು ಉಳಿದ ಸಮವಸ್ತ್ರ ಬಟ್ಟೆಗಳ ಬಗ್ಗೆ ಖರೀದಿದಾರರ ನಿರ್ಣಯವೇ ಅಂತಿಮವಾಗಿರುತ್ತದೆ.

(ಅ) ಇಂತಹ ಸಂದರ್ಭದಲ್ಲಿ ಕರಾರಿನಲ್ಲಿ Delivery Schedule ಪ್ರಕಾರ ನಿಗಧಿಪಡಿಸಿದ ಅವಧಿ, ಒಪ್ಪಿರುವ
ಷರತ್ತು ಮತ್ತು ದರಗಳನ್ವಯ ಅಥವಾ

(ಆ) ಜ್ಞಾಪನವನ್ನು ರದ್ದುಗೊಳಿಸಿ Delivery Schedule ಪ್ರಕಾರ ಭಾಗಶಃ ಸರಬರಾಜಾಗಿರುವ ಸಮವಸ್ತ್ರಬಟ್ಟೆಗಳಿಗೆ ನಿಗಧಿತ ವೆಚ್ಚವನ್ನು ಪಾವತಿಸುವುದು.

(66)

(13)

22. ವಿವಾದಗಳ ಬಗೆಹರಿಸುವಿಕೆ:-

(1) ಈ ಕರಾರಿನಡಿ ಅಥವಾ ಬೇರಾವುದೇ ಕಾರಣಕ್ಕಾಗಲಿ ಖರೀದಿದಾರರು ಮತ್ತು ಸರಬರಾಜುದಾರರ ನಡುವೆ ಯಾವುದೇ ವಿವಾದಗಳು, ಭಿನ್ನಾಭಿಪ್ರಾಯಗಳು, ಅಸಮ್ಮತಿ ಉದ್ಭವಿಸಿದಲ್ಲಿ ಸೌಹಾರ್ದಯುತವಾಗಿ ನೇರವಾದ ಅನೌಪಚಾರಿಕ ಮಾತುಕತೆಗಳ ಮೂಲಕ ಬಗೆಹರಿಸಿಕೊಳ್ಳುವ ಎಲ್ಲಾ ಪ್ರಯತ್ನಗಳನ್ನು ಮಾಡುವುದು.

(2) ಈ ರೀತಿಯಾಗಿ ಪ್ರಯತ್ನಗಳನ್ನು ನಡೆಸಿದ 30 (ಮೂವತ್ತು) ದಿನಗಳ ಒಳಗೆ ಭಿನ್ನಾಭಿಪ್ರಾಯಗಳು ಬಗೆಹರಿಯದಿದ್ದಲ್ಲಿ ಖರೀದಿದಾರರಾಗಲಿ, ಸರಬರಾಜುದಾರರಾಗಲಿ ಮತ್ತೊಬ್ಬರಿಗೆ ನೋಟೀಸ್ ನೀಡುವ ಮೂಲಕ ಸಮಸ್ಯೆಯನ್ನು ಮತ್ತೊಬ್ಬರ ಮಧ್ಯಸ್ಥಿಕೆ ಮೂಲಕ ಬಗೆಹರಿಸುವ ಪ್ರಯತ್ನದ ಬಗ್ಗೆ ಸಹಕರಿಸಬೇಕು. ಹೀಗೆ ಮುಂಚಿತವಾಗಿ ಸೂಚನೆ ನೀಡದೆ ಮಧ್ಯಸ್ಥಿಕೆಯನ್ನು ಪ್ರಾರಂಭಿಸತಕ್ಕದ್ದಲ್ಲ.

(3) ಈ ರೀತಿ ನೋಟೀಸ್ ನೀಡಿದ ನಂತರ ಅಂತಿಮವಾಗಿ ಇಲಾಖಾ ಮುಖ್ಯಸ್ಥರಿಂದ ಅಥವಾ ಇಲಾಖೆಯ ಕಾರ್ಯದರ್ಶಿಯವರ ಮಧ್ಯಸ್ತಿಕೆ ಪಡೆದು ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳತಕ್ಕದ್ದು, ಈ ರೀತಿ ಮಧ್ಯಸ್ಥಿಕೆಯನ್ನು ಸಮವಸ್ತ್ರ ಸರಬರಾಜಿನ ಪೂರ್ವದಲ್ಲಾಗಲಿ, ಸರಬರಾಜು ಪ್ರಾರಂಭಿಸಿರುವ ಸಮಯದಲ್ಲಾಗಲಿ, ಸರಬರಾಜಿನ ನಂತರವಾಗಲಿ ಪ್ರಾರಂಭಿಸಲು ಅವಕಾಶ ಇರುತ್ತದೆ.

(4) ಇಂತಹ ಪ್ರಕರಣಗಳಲ್ಲಿ ಮಾನ್ಯ ಶಿಕ್ಷಣ ಕಾರ್ಯದರ್ಶಿಯವರ ತೀರ್ಮಾನವೇ ಅಂತಿಮವಾಗಿದ್ದು, ಇವರ ತೀರ್ಮಾನಕ್ಕೆ ಎರಡೂ ಪಕ್ಷಗಳೂ ಬದ್ಧರಾಗಿರತಕ್ಕದ್ದು. ಈ ರೀತಿಯ ಆರ್ಬಿಟ್ರೇಶನ್ ನಡಾವಳಿಗಳಿಗೆ ತಗಲುವ ಎಲ್ಲಾ ವೆಚ್ಚಗಳನ್ನೂ ಆರ್ಬಿಟ್ರೇಶನ್ ತೀರ್ಮಾನದಂತೆ ಪಾವತಿಸತಕ್ಕದ್ದು. ಆದರೆ ಈ ಕಾರ್ಯಕ್ಕಾಗಿ ತಯಾರಿಸಿ ಮಂಡಿಸುವ ದಾಖಲೆಗಳಿಗೆ ತಗಲುವ ವೆಚ್ಚವನ್ನು ಸಂಬಂಧಿಸಿದ ಆಯಾ ವ್ಯಕ್ತಿಗಳೇ ಭರಿಸತಕ್ಕದ್ದು.

(5) ಈ ಮಧ್ಯೆ ವಿವಾದಗಳಿಗೆ ಸಂಬಂಧಿಸಿದಂತೆ ಖರೀದಿದಾರರು ಹಾಗೂ ಸರಬರಾಜು ದಾರರ ನಡುವೆ ಪರಸ್ಪರ ಲಿಖಿತ ಒಪ್ಪಂದ ಏರ್ಪಡದ ಹೊರತು ಸರಬರಾಜುದಾರರು/ಖರೀದಿದಾರರು ಕಾಂಟ್ರ್ಯಾಕ್ಟ್ ನಂತೆ ಕಾರ್ಯವನ್ನು/ ತಮ್ಮ ಜವಾಬ್ದಾರಿಗಳನ್ನು ಮುಂದುವರೆಸತಕ್ಕದ್ದು.

(6) ಮತ್ತು ಖರೀದಿ ದಾರರು ಸರಬರಾಜುದಾರರಿಗೆ ಬಾಕಿ ಇರುವ ವೆಚ್ಚವನ್ನು ಕರಾರಿನಂತೆ ಪಾವತಿಸುವುದು.

23. ಜವಾಬ್ದಾರಿಯ ಮಿತಿ (Limitation of liability) :-

(1) ಅನುರೂಪವಾಗಿ ಕ್ರಿಮಿನಲ್ ಉದಾಸೀನತೆ ಅಥವಾ ಬೇಕೆಂದೇ ಮಾಡಿದ ತಪ್ಪುಗಳ ಸಂದರ್ಭದಲ್ಲಿ

(2) ಈ ಕರಾರಿನಲ್ಲಿನ ಯಾವುದೇ ಲೋಪದ ಪರಿಣಾಮವಾಗಿ ಉದ್ಭವಿಸಿದ ನಷ್ಟ ಅಥವಾ ಹಾನಿಗೆ ಸರಬರಾಜುದಾರ ಯಾವುದೇ ರೀತಿಯ ನಷ್ಟ ತುಂಬಿಕೊಡಲು ಜವಾಬ್ದಾರನಾಗಿರುವುದಿಲ್ಲ. ಈ ವಿವರಣೆಯು ಸರಬರಾಜುದಾರ ಸರಬರಾಜು ಮಾಡಿದ ಸಮವಸ್ತ್ರ ಬಟ್ಟೆಗಳ ಗುಣಮಟ್ಟಕ್ಕೆ ಮತ್ತು ವಿಳಂಬ ಸರಬರಾಜಿಗೆ ವಿಧಿಸುವ ದಂಡಗಳಿಗೆ ಅನ್ವಯಿಸುವುದಿಲ್ಲ.

(3) ಯಾವುದೇ ಕಾರಣಕ್ಕೆ ಉದ್ಭವಿಸುವ ಸಮಸ್ಯೆಗಳ ಬಗ್ಗೆ ಅಥವಾ ಖರೀದಿದಾರರ ಯಾವುದೇ ಆದೇಶದಿಂದ ಸರಬರಾಜುದಾರರು ಬಾಧಿತರಾದಲ್ಲಿ ಅಂತಹ ಬಾಧಿತ ಆದೇಶ ಹೊರಡಿಸಿದ 15 ದಿನಗಳ ಒಳಗಾಗಿ ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಲ್ಲಿ ಆಕ್ಷೇಪಣೆಯನ್ನು ಸಲ್ಲಿಸತಕ್ಕದ್ದು.

24. ತೆರಿಗೆಗಳು ಮತ್ತು ಕರಗಳು (Taxes and Duties) :-

(1) ಸಮವಸ್ತ್ರಗಳು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ತಲುಪಿಸುವವರೆಗಿನ ಕರಗಳು / ಲೈಸೆನ್ಸ್ ಫೀ / ಆಕ್ಟ್ರಾಯ್ / ವ್ಯಾಟ್ / ರೋಡ್ ಪರ್ಮಿಟ್ ಮುಂತಾದ ಎಲ್ಲಾ ವೆಚ್ಚಗಳಿಗೂ ಸರಬರಾಜುದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ. ಉಲ್ಲೇಖಿತ (2)ರ ನಡಾವಳಿಯಂತೆ ಸಂಸ್ಥೆಗೆ ಜಿ.ಎಸ್.ಟಿ ಮೊತ್ತವನ್ನು ಪಾವತಿಮಾಡಲಾಗುವುದು.

25. ಬಟ್ಟೆಗಳ ತಾಂತ್ರಿಕ ಗುಣಮಟ್ಟದ ಪರೀಕ್ಷಾ ಶುಲ್ಕದ ವೆಚ್ಚವನ್ನು ಸರಬರಾಜುದಾರರೇ ಭರಿಸತಕ್ಕದ್ದು.

26. ಆದೇಶದಲ್ಲಿ ಸರಬರಾಜಿಗೆ ನಿಗದಿಪಡಿಸಿರುವ ಸಮವಸ್ತ್ರಗಳ ಪ್ರಮಾಣದಲ್ಲಿ ಶೇಕಡ 15% ವರೆಗೆ ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಅಧಿಕಾರ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಗೆ ಇರುತ್ತದೆ. ಮತ್ತು ಇಂತಹ ಹೆಚ್ಚಳ ಅಥವಾ ಕಡಿಮೆ ಮಾಡಿದ ಕಾರಣಕ್ಕೆ ಸರಬರಾಜು ಸಂಸ್ಥೆಗೆ ಈ ಕರಾರಿನಡಿ ಒಪ್ಪಿಗೆಯಾಗಿರುವ ನಿಗದಿಪಡಿಸಿರುವ ದರದಲ್ಲಿ ಮಾತ್ರ ಲೆಕ್ಕಾಚಾರ ಮಾಡಿ ವೆಚ್ಚವನ್ನು ಪಾವತಿಸಲಾಗುವುದು.

ಈ ಆದೇಶ ದೊಂದಿಗೆ ಇರುವ ಲಗತ್ತುಗಳು:-

1. ಅನುಬಂಧ-1 : 2018-19ನೇ ಸಾಲಿಗೆ ಸರಬರಾಜು ಮಾಡಬೇಕಾದ ಸಮವಸ್ತ್ರ ಬಟ್ಟೆಗಳ ಬಣ್ಣ, ಅಳತೆ, ಪ್ರತಿ ಮೀಟರ್‌ಗೆ ನಿಗಧಿ ಪಡಿಸಿರುವ ದರ ಮತ್ತು ಬಟ್ಟೆಗಳ ಪ್ರಮಾಣಗಳ ವಿವರ.
2. ಅನುಬಂಧ-2 : ಸರಬರಾಜು ಮಾಡಬೇಕಾಗಿರುವ ಸಮವಸ್ತ್ರ ಬಟ್ಟೆಗಳ ತಾಂತ್ರಿಕ ಸ್ಪೆಸಿಫಿಕೇಶನ್
3. ಅನುಬಂಧ-3 : ಸಮವಸ್ತ್ರ ಬಟ್ಟೆ ತಾಲ್ಲೂಕುವಾರು ತರಗತಿವಾರು ಸೆಟ್‌ಗಳ ರೂಪದಲ್ಲಿ ಒದಗಿಸಬೇಕಾದ ಸಂಖ್ಯೆಯ ವಿವರ.
4. ಅನುಬಂಧ-4 : ಕರಾರು ಒಪ್ಪಂದದ ಮಾದರಿ (ರೂ.500/-ರ ಛಾಪಾ ಕಾಗದದ ಮೇಲೆ ನಮೂದಿಸಿ ಸಹಿ ಮಾಡಿ ನಿಗಧಿತ ದಿನಾಂಕದೊಳಗೆ ಸಲ್ಲಿಸಬೇಕು)

[ಡಾ॥ಎಂ.ಟಿ.ರೇಜು, ಭಾ.ಆ.ಸೇ]
ಆಯುಕ್ತರು,

68

15

ಅನುಬಂಧ-01

2018-19ನೇ ಸಾಲಿಗೆ ಮೆ:ಕೆ.ಎಸ್.ಟಿ.ಐ.ಡಿ.ಸಿ ಸಂಸ್ಥೆ ಸರಬರಾಜು ಮಾಡಬೇಕಾದ ಸಮವಸ್ತ್ರ ಬಟ್ಟೆಗಳ ಬಣ್ಣ, ಅಳತೆ, ಪ್ರಮಾಣದ ವಿವರ

ಕ್ರ.ಸಂ	ಬಟ್ಟೆಯ ವಿವರ	ಬಣ್ಣ
1	ಗಂಡು/ಹೆಣ್ಣು ಮಕ್ಕಳ ಮೇಲಂಗಿ ಬಟ್ಟೆ [ಪಾಲಿಯೆಸ್ಟರ್ ವಿಸ್ಕೋಸ್ ಷರ್ಟಿಂಗ್]	ಲೈಟ್ ಬ್ಲೂ
2	ಗಂಡು ಮಕ್ಕಳ ನಿಕ್ಕರ್/ ಪ್ಯಾಂಟ್ ಬಟ್ಟೆ (ಪಾಲಿಯೆಸ್ಟರ್ ಕಾಟನ್ ಸೂಟಿಂಗ್]	ನೇವಿ ಬ್ಲೂ
3	ಹೆಣ್ಣುಮಕ್ಕಳ ಸ್ಕರ್ಟ್ ಬಟ್ಟೆ (2/40 ಪಿ.ವಿ.ಬಟ್ಟೆ]	ನೇವಿ ಬ್ಲೂ

ಕ್ರ.ಸಂ	ವಿಭಾಗ	ಸರಬರಾಜು ಸಂಸ್ಥೆಯ ಹೆಸರು	ಫಲಾನುಭವಿಗಳ ಸಂಖ್ಯೆ [ಪ್ರತಿ ವಿದ್ಯಾರ್ಥಿಗೆ 1 ಸೆಟ್‌ನಂತೆ]
			ಒಟ್ಟು
1	ಬೆಳಗಾವಿ ವಿಭಾಗ(ಬಾಗಲಕೋಟೆ, ಬೆಳಗಾವಿ, ಚಿಕ್ಕೋಡಿ, ಧಾರವಾಡ ಮತ್ತು ಗದಗ)	ಕೆ.ಎಸ್.ಟಿ.ಐ.ಡಿ.ಸಿ, ಬೆಂಗಳೂರು	8,21,512

ಬಟ್ಟೆಯ ವಿವರ	ಬಳಕೆಯಾಗುವ ಬಟ್ಟೆ ಮೀಟರ್‌ಗಳಲ್ಲಿ	ಪ್ರತಿ ಮೀಟರ್‌ಗೆ ದರ	ಒಟ್ಟು ಮೌಲ್ಯ
ಮೀಡಿಯಂ ಬ್ಲ್ಯೂ ಪಾಲಿಯಸ್ಟರ್ ವಿಸ್ಕೋಸ್ ಷರ್ಟಿಂಗ್ [ಮೇಲಂಗಿ ಬಟ್ಟೆ] 1ರಿಂದ10ನೇ ತರಗತಿಯ ವರೆಗಿನ ಬಾಲಕರು ಮತ್ತು ಬಾಲಕಿಯರುಗಳಿಗೆ	11,13,745	42.18	4,69,77,764.00
ನೇವಿ ಬ್ಲ್ಯೂ ಪಾಲಿಯಸ್ಟರ್ ಕಾಟನ್ ಸೂಟಿಂಗ್ [ನಿಕ್ಕರ್/ಪ್ಯಾಂಟ್ ಬಟ್ಟೆ] 1 ರಿಂದ 10ನೇ ತರಗತಿಯ ಬಾಲಕರುಗಳಿಗೆ.	2,91,687	105.30	3,07,14,641.00
ನೇವಿಬ್ಲೂ 2/40 ಪಿ.ವಿ ಸ್ಕರ್ಟ್ ಬಟ್ಟೆ] 1 ರಿಂದ 10ನೇ ತರಗತಿಯ ಬಾಲಕಿಯರುಗಳಿಗೆ.	5,90,723	55.26	3,26,43,353.00
ಒಟ್ಟು	**19,96,155**		**11,03,35,758.00**

ಒಟ್ಟು ಆದೇಶದ ಮೊತ್ತ: ರೂ. **11,03,35,758.00** (ಹನ್ನೊಂದು ಕೋಟಿ ಮೂರು ಲಕ್ಷದ ಮೂವತ್ತೈದು ಸಾವಿರದ ಏಳುನೂರ ಐವತ್ತೆಂಟು ಮಾತ್ರ) ಸದರಿ ಮೊತ್ತಕ್ಕೆ ನಿಯಮಾನುಸಾರ ಜಿ.ಎಸ್.ಟಿ ಪಾವತಿ ಮಾಡಲಾಗುವುದು.

ಆಯುಕ್ತರು, ಸಾ.ಶಿ.ಇ

69

<u>Class-wise Measurment</u>

Classes	Discription	Measurement in running metres	Width
I & II	Boys-H.Pant	0.50	54"
	Boys - Shirt	1.10	36"
	Girls - Skirt	1.20	36"
	Girls - Shirt	1.10	36"
III & IV	Boys-H.Pant	0.55	54"
	Boys - Shirt	1.20	36"
	Girls - Skirt	1.40	36"
	Girls - Shirt	1.20	36"
V to VII	Boys-H.Pant	0.60	54"
	Boys - Shirt	1.40	36"
V to VII	Girls Skirt	1.75	36"
	Girls Shirt	1.50	36"
VIII to X	Boys - Pant	1.20	54"
	Boys - Shirt	2.00	36"

ಆಯುಕ್ತರು, ಸಾ.ಶಿ.ಇ

ಅನುಬಂಧ-02

TECHNICAL SPECFICATIONS FOR SUPPLY OF UNIFORMS FOR- 2018-19

Sl No	Specification	PC Suiting	PV Shirting	2/40s PV Cloth
1.		Count of Yarns (Approx)		Count of yarn[TCM]
	Warp	20/2 tex (2/30sNe) PC (+/- 10%)	10/2 tex (2/60s Ne) (+/- 10%)	2/40s PV (+/- 10%)
	Weft	20/2 tex (2/30s Ne) PC (+/- 10%)	80 Denier texturised Polyester filament (+/- 10%)	2/40s PV (+/- 10%)
2.		Threads/dm		Threads/inch
	Warp	240 (+/-5%) (60:EPI)	320 (+/- 5%) (EPI:80)	56 (+/- 5%) [IS 1963:1985]
	Weft	190 (+/- 5%) (48:PPI)	300 (+/- 5%) (PPI:76)	50 (+/- 5%) [IS 1963:1985]
3.	Blend Composition Percent – Warp	Polyester=67(+/- 5%) Cotton=33(+/- 5%)	Polyster=67 (+/- 5%) Viscose=33 (+/- 5%)	Fibre Composition (IS:3416:1988) warp & weft P-67%(+/-5%) V-33% (+/-5%)
	Blend Composition Percent – Weft	Polyester=67(+/- 5%) Cotton=33(+/- 5%)	Polyester	
4.	Weight - Mass (Gms/mtr Sqr)	190 (+/- 5%)	100 Gsm (+/- 5%)	Weight /P.Sqr meter (TCM) 135 (+/- 5%)
5.		Breaking load on 5:0x20 cm strips, min		(Kgs) Min 20 cm2 reveled strip
	Warp way	88 kg	41 kg	60 kg (IS 1969:1985)
	weft way	63 kg	33 kg	60 kg
6.	Width Cm, Min	138 (+/- 1 cm)	90 (36 inches) (+/- 1 cm)	(IS) 90 (36 inches) (+/- 1 cm)
7.		Shrinkage (% Max)		Dimensional Changes (MAx)
	Warp way	2	2	(IS 2977) 2.0
	Weft way	2	2	2.0
8.		colour fAstness to:		
	➢ Light	AATCC 16-3.5 or better in 20 hours IS-5 or better	AATCC 16-3.5 or better in 20 hours IS-5 or better	(Min) [IS:2545] AATCC - 16 4 or better
	➢ Washing	4 or better	4 or better	[IS-764] CIC At 60°C - 4 or better St on adj Fab - 3 or better
	➢ Perspiration	4 or better	4 or better	CIC (IS 971) 4 or better St on Adj FAb – 3 or better
	➢ Rubbing	3 or better	4 or better	(IS 766) Dry - 4 or better Wet - 3 or better
9.	Pilling (After 5 hours of test)	IS 4 or better ASTM-D3512-3.5 or better	IS 4 or better ASTM-D3512-3.5 or better	ASTMD-3512-3/4 or better
10.	Weave	Plain	Plain	Plain
11.	Dye and colour	Disperse Vat Dye	Disperse Vat Dye	Disperse & reactive
12.	colour and Shade	Navy blue as per sample	Medium blue as per sample	Navy blue as per sample

ಆಯುಕ್ತರು, ಸಾ.ಶಿ.ಇ

71

ಅನುಬಂಧ-೨ - ೨

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

ಸಿಪಿಐ(2)/ಸ.ವ.ಸ ಕಾರ್ಯಾದೇಶ/ಕೆ.ಎಸ್.ಟಿ.ಐ.ಡಿ.ಸಿ-11/2018-19 ದಿನಾಂಕ:06.03.2019.

ಇವರಿಗೆ

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ,
ಒಕ್ಕಲಿಗರ ಭವನ, ಹಡ್ಸನ್ ವೃತ್ತ
ಬೆಂಗಳೂರು.

... Development Corporation Ltd.,
Bangalore - 560 0...
08 MAR 2019
INWARD No.

: **ಕಾರ್ಯಾದೇಶ** :

ವಿಷಯ: 2019-20ನೇ ಸಾಲಿಗೆ ವಿದ್ಯಾವಿಕಾಸ ಯೋಜನೆಯಡಿಯಲ್ಲಿ ಬೆಳಗಾವಿ ವಿಭಾಗದ 2 ಜಿಲ್ಲೆಗಳಾದ ಬೆಳಗಾವಿ ಮತ್ತು ಚಿಕ್ಕೋಡಿ ಜಿಲ್ಲೆಗಳ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯ ಗಂಡು ಮಕ್ಕಳು ಹಾಗು 1 ರಿಂದ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹೆಣ್ಣು ಮಕ್ಕಳಿಗೆ ಉಚಿತ ಸಮವಸ್ತ್ರ ಬಟ್ಟೆ ಸರಬರಾಜು ಮಾಡಲು ಕಾರ್ಯಾದೇಶ.

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ: ಇಡಿ 165 ಯೋಯೋಕ 2018 ಬೆಂಗಳೂರು, ದಿನಾಂಕ:18/01/2019

2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಮತ್ತು ಸಮಿತಿ ಅಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡಾವಳಿಯ ದಿನಾಂಕ:14-02-2019

-- * --

ಉಲ್ಲೇಖಿತ (1) ಸರ್ಕಾರಿ ಆದೇಶದಲ್ಲಿ 2019-20ನೇ ಸಾಲಿಗೆ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 01 ರಿಂದ 10ನೇ ತರಗತಿಯಲ್ಲಿನ ಗಂಡು ಮಕ್ಕಳು ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ ಒಂದು ಜೊತೆ ಉಚಿತ ಸಮವಸ್ತ್ರ ಬಟ್ಟೆಯನ್ನು ರಾಜ್ಯಸರ್ಕಾರದ ಉದ್ದಿಮೆಯಾದ ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ (ಕೆಎಸ್‌ಟಿಐಡಿಸಿ) ವತಿಯಿಂದ 10ಲಕ್ಷ ಮೀಟರ್ ಸರಬರಾಜು ಮಾಡಲು ಸರ್ಕಾರದ ಆದೇಶವಾಗಿರುತ್ತದೆ. ಈ ಹಿನ್ನಲೆಯಲ್ಲಿ 2019-20ನೇ ಸಾಲಿಗೆ ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧಗಳಲ್ಲಿ ತಿಳಿಸಿರುವಂತೆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ರಾಜ್ಯದ ಬೆಳಗಾವಿ ವಿಭಾಗದ 2 ಜಿಲ್ಲೆಗಳಾದ ಬೆಳಗಾವಿ ಮತ್ತು ಚಿಕ್ಕೋಡಿ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳಿಗೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಪ್ರತಿ ವಿದ್ಯಾರ್ಥಿಗೆ ಒಂದು ಸೆಟ್‌ನಂತೆ ಸಮವಸ್ತ್ರ ಬಟ್ಟೆಯನ್ನು ಕಡ್ಡಾಯವಾಗಿ ದಿನಾಂಕ:30.04.2019ರ ಒಳಗಾಗಿಪೂರೈಕೆ ಮಾಡಲು ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳಲು ನಿಮಗೆ ತಿಳಿಸಿದೆ.

ಪೂರೈಕೆ ಮಾಡಬೇಕಾದ ಬಟ್ಟೆಯ ಅಳತೆ ಮತ್ತು ಬಣ್ಣಗಳ ಬಗ್ಗೆ ಅನುಬಂಧ-1 ರಲ್ಲಿ ವಿವರಿಸಿದೆ. ಸದರಿ ನಿಗಮವು ಕರ್ನಾಟಕ ರಾಜ್ಯದಲ್ಲಿರುವ ತನ್ನ ವ್ಯಾಪ್ತಿಯ ಘಟಕಗಳಿಂದ ಮಾತ್ರ ಬಟ್ಟೆಗಳನ್ನು ಪಡೆದು ಸರಬರಾಜು ಮಾಡತಕ್ಕದ್ದು. ಹಾಗೂ ಬೇರೆ ಮೂಲಗಳಿಂದ / ಸಂಸ್ಥೆಗಳಿಂದ ಖರೀದಿಸಿ ಸರಬರಾಜು ಮಾಡತಕ್ಕದ್ದಲ್ಲ ಹಾಗೂ ಸರ್ಕಾರದ ಆದೇಶದಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳಿಗೆ ಬದ್ದರಾಗಿ ಸರಬರಾಜುಕಾರ್ಯ ನಿರ್ವಹಿಸುವಂತೆ ತಿಳಿಸಿದೆ.

ಷರತ್ತುಗಳು:-

1. ಸಮವಸ್ತ್ರ ಬಟ್ಟೆಗಳನ್ನು ಯಾವುದೇ ಕಾರಣಕ್ಕೆ ವಿಳಂಬ ಮಾಡದೆ ಕಡ್ಡಾಯವಾಗಿ ದಿನಾಂಕ:30.04.2019ರ ಒಳಗಾಗಿಸಂಬಂಧಿಸಿದ ತಾಲ್ಲೂಕು ಕೇಂದ್ರಗಳಿಗೆ ಸೆಟ್‌ಗಳ ರೂಪದಲ್ಲಿಸರಬರಾಜು ಪೂರ್ಣಗೊಳಿಸತಕ್ಕದ್ದು.
2. ಕೆ.ಎಸ್.ಟಿ.ಐ.ಡಿ.ಸಿ ಸಂಸ್ಥೆ ವತಿಯಿಂದ ಶರ್ಟಿಂಗ್ 5,52,567.40 ಮೀಟರ್, ಸೂಟಿಂಗ್ 1,42,611.80 ಮೀಟರ್ ಹಾಗು ಸ್ಕರ್ಟಿಂಗ್ 2,97,917.25 ಮೀಟರ್ ಒಟ್ಟು 9,93,097.00 ಮೀಟರ್(ಒಂಭತ್ತು ಲಕ್ಷದ ತೊಂಭತ್ತಮೂರು ಸಾವಿರದ ತೊಂಭತ್ತೇಳು ಮೀ ಮಾತ್ರ) ಸಮವಸ್ತ್ರ ಬಟ್ಟೆ ಸರಬರಾಜಿಗೆ ಅನುಮತಿಸಿದೆ. ಬಟ್ಟೆಯ ದರವನ್ನು ಉಲ್ಲೇಖಿತ (2)ರ ನಡಾವಳಿಯಂತೆ ಶರ್ಟಿಂಗ್-ರೂ.42.18 ಸೂಟಿಂಗ್-ರೂ.105.30 ಮತ್ತು ಸ್ಕರ್ಟಿಂಗ್-ರೂ.55.26 ಹಾಗೂ ಹೆಚ್ಚುವರಿಯಾಗಿ ನಿಯಮಾನುಸಾರ ಅನ್ವಯವಾಗುವ ಜಿ.ಎಸ್.ಟಿ ನೀಡಲಾಗುವುದು.

8/3 8/3/19 8/3/19

72

3. ಇದರಲ್ಲಿ ಬೆಳಗಾವಿ ವಿಭಾಗದ 2 ಜಿಲ್ಲೆಗಳಾದ ಬೆಳಗಾವಿ ಮತ್ತು ಚಿಕ್ಕೋಡಿ ಜಿಲ್ಲೆಗಳಿಗೆ 15 ತಾಲ್ಲೂಕುಗಳಿಗೆ ಅನುಬಂಧ-03ರಲ್ಲಿ ತೋರಿಸಿರುವಂತೆ ತರಗತಿವಾರು ಮಕ್ಕಳ ಸಂಖ್ಯೆಗೆ ಅನುಗುಣವಾಗಿ 1 ರಿಂದ 7ನೇ ತರಗತಿ ಗಂಡು ಮಕ್ಕಳಿಗೆ ಒಂದು ಜೊತೆ ಶರ್ಟ್ ಮತ್ತು ನಿಕ್ಕರ್, 8 ರಿಂದ 10ನೇ ತರಗತಿ ಗಂಡು ಮಕ್ಕಳಿಗೆ ಶರ್ಟ್ ಮತ್ತು ಪ್ಯಾಂಟ್ ಹಾಗೂ 1 ರಿಂದ 7ನೇ ತರಗತಿ ಹೆಣ್ಣು ಮಕ್ಕಳಿಗೆ ಒಂದು ಜೊತೆ ಶರ್ಟ್ ಮತ್ತು ಸ್ಕರ್ಟ್ ಬಟ್ಟೆಯನ್ನು ಸರಬರಾಜು ಮಾಡುವುದು.
4. ವಿಳಂಬ ಸರಬರಾಜಿಗೆ ಯಾವುದೇ ರೀತಿಯ ವಿನಾಯಿತಿ ನೀಡದೆ ನಿಗಧಿತ ಪ್ರಮಾಣದಲ್ಲಿ ದಂಡ ವಿಧಿಸಲು ಶಿಕ್ಷಣ ಇಲಾಖೆಯು ಬದ್ಧವಾಗಿರುತ್ತದೆ.
5. ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ಸಂಸ್ಥೆಯು ಕಡ್ಡಾಯವಾಗಿ ರಾಜ್ಯದಲ್ಲಿನ ವಿದ್ಯುತ್ ನೇಕಾರರಿಂದಲೇ ನೇಯ್ದ ಬಟ್ಟೆಗಳನ್ನು ಸರಬರಾಜು ಮಾಡತಕ್ಕದ್ದು.
6. ಯಾವುದೇ ಕಾರಣಕ್ಕೂ ಬಾಹ್ಯ ಮೂಲಗಳಿಂದ ಖರೀದಿಸಿದ ಸಮವಸ್ತ್ರ ಬಟ್ಟೆಯನ್ನು ಸರಬರಾಜು ಮಾಡತಕ್ಕದ್ದಲ್ಲ. ಮತ್ತು ಇಲಾಖೆ ಅಂತಹಾ ಬಟ್ಟೆಗಳನ್ನು ತಿರಸ್ಕರಿಸುವ ಅಧಿಕಾರ ಹೊಂದಿರುತ್ತದೆ.
7. ಇಲಾಖೆ ನಿಗಧಿಪಡಿಸಿದ ಗುಣಮಟ್ಟದ (Specification) ಪ್ರಕಾರವೇ ಸಮವಸ್ತ್ರ ಬಟ್ಟೆಗಳನ್ನು ಸರಬರಾಜು ಮಾಡತಕ್ಕದ್ದು.
8. ಕಳಪೆ ಗುಣಮಟ್ಟದ್ದೆಂದು ದೃಢಪಟ್ಟ ಬಟ್ಟೆಗಳ ಮೇಲೆ ಹಾಗೂ ವಿಳಂಬ ಸರಬರಾಜುಮಾಡಿದ ಬಟ್ಟೆಗಳ ಮೌಲ್ಯದ ಮೇಲೆ ಶಿಕ್ಷಣ ಇಲಾಖೆ ವಿಧಿಸಿದ ದಂಡವನ್ನು ಯಾವುದೇ ಕಾರಣಕ್ಕೂ ಮನ್ನಾ ಮಾಡುವಂತೆ ಸಂಸ್ಥೆ ಕೋರತಕ್ಕದ್ದಲ್ಲ, ಈ ಅಂಶವನ್ನು ಕಡ್ಡಾಯವಾಗಿ ಕರಾರಿನಲ್ಲಿ ನಮೂದಿಸಿರತಕ್ಕದ್ದು.
9. ಸಂಸ್ಥೆಗೆ ನಿಗಧಿತ ದಿನಾಂಕದ ಒಳಗಾಗಿ ಬಟ್ಟೆಗಳ ಸರಬರಾಜು ಮಾಡಲು ಸಾಧ್ಯವಾಗದ ಪಕ್ಷದಲ್ಲಿ ಈ ಕಾರ್ಯಾದೇಶವನ್ನು ಪಡೆದುಕೊಂಡ ಒಂದು ವಾರದ ಒಳಗಾಗಿ (ಏಳು ದಿನಗಳ ಒಳಗಾಗಿ) ಈ ಕಛೇರಿಗೆ ತಿಳಿಸತಕ್ಕದ್ದು.
10. ಈ ಆದೇಶ ಪಡೆದ ಒಂದು ವಾರದ ಒಳಗಾಗಿ ಇಲಾಖೆಯೊಂದಿಗೆ ಸೂಕ್ತ ಕರಾರು ಒಪ್ಪಂದ ಮಾಡಿಕೊಳ್ಳತಕ್ಕದ್ದು.
11. ವಿದ್ಯಾರ್ಥಿಗಳ ವಯೋಮಾನ ಹಾಗೂ ತರಗತಿಗೆ ನಿಗಧಿಪಡಿಸಿದ ಅಳತೆಯಂತೆ ಸಮವಸ್ತ್ರ ಬಟ್ಟೆಯನ್ನು ಕಡ್ಡಾಯವಾಗಿ ಸರಬರಾಜು ಮಾಡುವುದು. ಒಂದು ವೇಳೆ ಅಳತೆ ಹಾಗೂ ಪ್ರಮಾಣದಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಸರಬರಾಜು ಮಾಡಿದ 15 ರಿಂದ 30 ದಿನಗಳ ಒಳಗಾಗಿ ವ್ಯತ್ಯಾಸದ ಸಮವಸ್ತ್ರಗಳನ್ನು ಮರುಸರಬರಾಜು ಮಾಡತಕ್ಕದ್ದು.
12. ಕಾರ್ಯಾದೇಶದಲ್ಲಿ ಹೇಳಿರುವ ಸಮವಸ್ತ್ರ ಬಟ್ಟೆಯ ಪ್ರಮಾಣವನ್ನು 15% ಹೆಚ್ಚು ಅಥವಾ ಕಡಿಮೆ ಮಾಡುವ ಅಧಿಕಾರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಇರುತ್ತದೆ.

"ಸಮವಸ್ತ್ರ ಪೂರೈಕೆಯ ಸಾಮಾನ್ಯ ಷರತ್ತುಗಳು ಮತ್ತು ನಿಬಂಧನೆಗಳು"

1. ಕರಾರು ಒಪ್ಪಂದ:-
   (1) ಕರಾರು ಅಂದರೆ ಈ ಆದೇಶದಲ್ಲಿನ ಎಲ್ಲಾ ಅಂಶಗಳಿಗೂ ಮತ್ತು ಈ ಆದೇಶದಲ್ಲಿ ತಿಳಿಸಿರುವ ಎಲ್ಲಾ ವಿವರಣೆ/ಅನುಬಂಧಗಳನ್ನು ಒಳಗೊಂಡಂತೆ ಎಲ್ಲಾ ಷರತ್ತುಗಳಿಗೆ ಖರೀದಿದಾರರು ಹಾಗೂ ಸರಬರಾಜುದಾರರು ಬದ್ಧರಾಗಿ ಏರ್ಪಟ್ಟ ಒಡಂಬಡಿಕೆ
   (2) ಈ ಆದೇಶ ಸ್ವೀಕರಿಸಿದ ಏಳು (7) ದಿನಗಳ ಒಳಗಾಗಿ ಕರಾರು ಒಪ್ಪಂದ ಮಾಡಿಕೊಳ್ಳುವುದು.

2. ಕರಾರು ಒಪ್ಪಂದದ ಸಾಮಾನ್ಯ ಷರತ್ತುಗಳು:-
   1. ಈ ಕರಾರಿನಡಿ ಸರಬರಾಜುದಾರರು ಖರೀದಿದಾರರಿಂದ ಪಡೆದ ಆದೇಶದಂತೆ ಸೂಕ್ತ ಸಮವಸ್ತ್ರ ಬಟ್ಟೆಗಳನ್ನು ತಯಾರಿಸಿ ಅನುಬಂಧ-03ರಲ್ಲಿ ತಿಳಿಸಿರುವಂತೆ ಸಂಬಂಧಿಸಿದ ಜಿಲ್ಲೆಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಕಾಲದಲ್ಲಿ ಸರಬರಾಜು ಮಾಡುವ ಕಾರ್ಯವನ್ನು ಸಮರ್ಪಕವಾಗಿ ಪೂರ್ಣಗೊಳಿಸಬೇಕು.
   2. ಸಮವಸ್ತ್ರ ಸರಬರಾಜಿಗೆ ಸಂಬಂಧಿಸಿದಂತೆ ಸಂಸ್ಥೆಯು ಇಲಾಖೆಯೊಂದಿಗೆ ಮಾಡಿಕೊಳ್ಳಬೇಕಾದ ಕರಾರು ಒಪ್ಪಂದವನ್ನು ರೂ. 500/- ಗಳ ಛಾಪಾ ಕಾಗದದಲ್ಲಿ ಸಲ್ಲಿಸತಕ್ಕದ್ದು. ಕರಾರಿಗೆ ಸಂಸ್ಥೆಯ ಸಕ್ಷಮ ಪ್ರಾಧಿಕಾರಿಗಳು ಸಹಿ ಮಾಡಿ ತಾಲ್ಲೂಕುವಾರು ಸರಬರಾಜು ವೇಳಾ ಪಟ್ಟಿಯೊಂದಿಗೆ ಸಲ್ಲಿಸತಕ್ಕದ್ದು.

ಸರಬರಾಜುದಾರರು ಕರಾರು ಒಪ್ಪಂದ ಪತ್ರವನ್ನು ತಾಲ್ಲೂಕುವಾರು ಸರಬರಾಜು ವೇಳಾ ಪಟ್ಟಿಯೊಂದಿಗೆ ದಿನಾಂಕ: 16.03.2019ರೊಳಗಾಗಿ ನಿರ್ದೇಶಕರು, ಪ್ರಾಥಮಿಕ ಶಿಕ್ಷಣ ರವರ ಕಛೇರಿಗೆ ಸಲ್ಲಿಸುವುದು.

73
20

(ಅ) **ಕರಾರಿನ ಮೊತ್ತ :-** ಎಂದರೆ ಸರಬರಾಜುದಾರರಿಗೆ ಕರಾರು ಒಪ್ಪಂದದ ಪ್ರಕಾರ ಯೋಗ್ಯ ಮತ್ತು ಸಮಂಜಸ ರೀತಿಯಲ್ಲಿ ಕರಾರಿನಂತೆ ಸರಬರಾಜು ಕಾರ್ಯವನ್ನು ಸಮರ್ಪಕವಾಗಿ ಪೂರ್ಣಗೊಳಿಸಿದ ಪ್ರಮಾಣಕ್ಕೆ ಕರಾರಿನಲ್ಲಿ ಒಪ್ಪಿಗೆಯಾಗಿರುವ ದರದಂತೆ ಪಾವತಿಸಬೇಕಾದ ಮೊತ್ತ.

(ಆ) **ಸಮವಸ್ತ್ರಬಟ್ಟೆ ಸರಬರಾಜು:-** ಎಂದರೆ ಕರಾರಿನ ಪ್ರಕಾರ ಈ ಆದೇಶದ ಅನುಬಂಧ-03ರಲ್ಲಿ ವಿವರಿಸಿರುವಂತೆ ತಾಲ್ಲೂಕುವಾರು ನಿಗಧಿತ ಸಂಖ್ಯೆಯಂತೆ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರತಿ ವಿದ್ಯಾರ್ಥಿಗೆ ಒಂದು ಸೆಟ್ ನಂತೆ ಸಮವಸ್ತ್ರ ಬಟ್ಟೆಯನ್ನು ಸಂಬಂಧಿಸಿದ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ನಿಗಧಿತ ಪ್ರಮಾಣದಲ್ಲಿ ಸಕಾಲದಲ್ಲಿ ಸರಬರಾಜು ಮಾಡುವುದು.

(ಇ) **ಸೆಟ್ ಎಂದರೆ:-** 1 ರಿಂದ 7ನೇ ತರಗತಿ ಗಂಡುಮಕ್ಕಳಿಗೆ ಪ್ರತಿ ವಿದ್ಯಾರ್ಥಿಗೆ ಒಂದು ಶರ್ಟ್ ಮತ್ತು ಒಂದು ನಿಕ್ಕರ್ ಬಟ್ಟೆ, 8 ರಿಂದ 10ನೇ ತರಗತಿ ಗಂಡು ಮಕ್ಕಳಿಗೆ ಒಂದು ಶರ್ಟ್ ಮತ್ತು ಒಂದು ಪ್ಯಾಂಟ್ ಬಟ್ಟೆ, ಹಾಗೂ ತರಗತಿ 1 ರಿಂದ 7ನೇ ತರಗತಿ ಬಾಲಕಿಯರಿಗೆ ಒಂದು ಶರ್ಟ್ ಮತ್ತು ಒಂದು ಸ್ಕರ್ಟ್ (ಲಂಗದ) ಬಟ್ಟೆ.

(ಈ) **ಸರಬರಾಜು ವೆಚ್ಚ:-** ಎಂದರೆ ಸಂಸ್ಥೆಯವರು ನೀಡಿರುವ ದರವು ಸಮವಸ್ತ್ರ ಬಟ್ಟೆಗಳನ್ನು ಸಂಬಂಧಿಸಿದ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಗಳಿಗೆ ತಲುಪಿಸುವವರೆಗೆ ತಗಲುವ ತಯಾರಿಕಾ ವೆಚ್ಚ, ಸಾಗಾಣಿಕೆ ವೆಚ್ಚ, ಇನ್ಸುರೆನ್ಸ್, ಆಕಸ್ಮಿಕ, ಪ್ರಾಸಂಗಿಕ ಮತ್ತು ಇತರೆ ವಿಶಿಷ್ಟ ವೆಚ್ಚಗಳೆಲ್ಲವೂ ಸೇರಿರುತ್ತವೆ.

3. **ಉತ್ಪಾದನೆಯ ಮೂಲ:-**

(1). ಸರಬರಾಜು ಮಾಡುವ ಬಟ್ಟೆಗಳನ್ನು ಕಡ್ಡಾಯವಾಗಿ ರಾಜ್ಯದಲ್ಲಿನ ವಿದ್ಯುತ್ ನೇಕಾರರಿಂದಲೇ ನೇಯ್ದ ಬಟ್ಟೆಗಳನ್ನು ಸರಬರಾಜು ಮಾಡತಕ್ಕದ್ದು, ಇತರೆ ಯಾವುದೇ ಸಂಸ್ಥೆಗಳು/ಖಾಸಗಿ ಸಂಸ್ಥೆಗಳಿಂದ ಖರೀದಿಸಿ ಸರಬರಾಜು ಮಾಡತಕ್ಕದ್ದಲ್ಲ.

4. **ಸಮವಸ್ತ್ರ ಬಟ್ಟೆಗಳ ಗುಣಮಟ್ಟ ಪರೀಕ್ಷೆ:-**

(1) ಸಮವಸ್ತ್ರಬಟ್ಟೆಗಳ ಗುಣಮಟ್ಟವು ಟೆಕ್ನಿಕಲ್ ಸ್ಪೆಸಿಫಿಕೇಷನ್‌ಗಳಿಗೆ ಪೂರಕವಾಗಿರುವ ಬಗ್ಗೆ ತಾಂತ್ರಿಕ ಪರಿಶೀಲನೆಯನ್ನು ಭಾರತ ಸರ್ಕಾರ ಸ್ವಾಮ್ಯದ Textike Committee, Ministry of Textiles, Govt of India/Cental Silk Technological Research Institue, Madiwala, Bangalor /Indian Institute Of Handloom Technology,Selem/Central Sericulture Research and Training Institute, Mysore ಈ ಸಂಸ್ಥೆಯಿಂದ ನಿರ್ವಹಿಸಲಾಗುವುದು.

(2) ಕರಾರು ಒಪ್ಪಂದದಂತೆ ಸರಬರಾಜುದಾರರು ತಯಾರಿಸಿರುವ ಬಟ್ಟೆಗಳನ್ನು ಈ ಆದೇಶದೊಂದಿಗೆ ನೀಡಿರುವ ಬಟ್ಟೆಗಳ ತಾಂತ್ರಿಕ ಸ್ಪೆಸಿಫಿಕೇಶನ್ ಅನುಬಂಧ-2ರಂತೆ ಟೆಕ್ನಿಕಲ್ ಸ್ಪೆಸಿಫಿಕೇಶನ್‌ಗಳಿಗೆ ಅನುಗುಣವಾಗಿ ತಯಾರಿಸಿರುವ ಬಗ್ಗೆ ಸಮವಸ್ತ್ರ ಬಟ್ಟೆಯ ಗುಣಮಟ್ಟವನ್ನು ಖಾತ್ರಿಪಡಿಸಿಕೊಳ್ಳಲು ಖರೀದಿದಾರರಿಗೆ ಯಾವುದೇ ಆರ್ಥಿಕ ಹೊರೆ ಬೀಳದ ರೀತಿಯಲ್ಲಿ ಖರೀದಿದಾರರು ಅಥವಾ ಅವರ ಅಧಿಕೃತ ಪ್ರತಿನಿಧಿ ಬಟ್ಟೆಗಳನ್ನು ಪರೀಕ್ಷಿಸುವ ಸ್ಯಾಂಪಲ್‌ಗಳನ್ನು ಸೆಳೆಯುವ ಪೂರ್ಣ ಅಧಿಕಾರ ಹೊಂದಿರುತ್ತಾರೆ.

(3) ಈ ರೀತಿಯ ಪರೀಕ್ಷೆಯನ್ನು ಸರಬರಾಜುದಾರರ ಆವರಣದಲ್ಲಿ/ಸರಬರಾಜಿಗೆ ತಯಾರಾಗಿಟ್ಟಿರುವ ಆವರಣದಲ್ಲಿ ಅಥವಾ ಅಂತಿಮವಾಗಿ ಬಟ್ಟೆಗಳನ್ನು ಸರಬರಾಜು ಮಾಡಿದ ಸ್ಥಳದಲ್ಲಿಯೂ ಸಹ ನಡೆಸಬಹುದಾಗಿದೆ. ಬಟ್ಟೆಗಳ ಪರೀಕ್ಷೆಯನ್ನು ಸರಬರಾಜುದಾರರ ಆವರಣದಲ್ಲಿ ನಡೆಸಿದಲ್ಲಿ ಅದಕ್ಕೆ ತಕ್ಕ ಎಲ್ಲಾ ಪೂರಕ ಅನುಕೂಲತೆ ಮತ್ತು ಸಹಕಾರವನ್ನು ಸರಬರಾಜುದಾರರು ನೀಡುವುದು.

(4) ಪರೀಕ್ಷಿಸಿದ ಸಮವಸ್ತ್ರ ಬಟ್ಟೆಗಳಲ್ಲಿ ನಿಗಧಿತ ಗುಣಮಟ್ಟವಿದ್ದಲ್ಲ ಎಂದು ಕಂಡು ಬರುವ ಬಟ್ಟೆಗಳನ್ನು ತಿರಸ್ಕರಿಸುವ ಅಧಿಕಾರ ಖರೀದಿದಾರರಿಗೆ ಇರುತ್ತದೆ. ಹೀಗೆ ತಿರಸ್ಕರಿಸಿದ ಪ್ರಮಾಣದ ಬಟ್ಟೆಗಳನ್ನು ಸರಬರಾಜುದಾರರು ಬದಲಾಯಿಸಿ ನಿಗಧಿತ ಸ್ಪೆಸಿಫಿಕೇಶನ್‌ಗೆ ಒಳಪಟ್ಟ ಸೂಕ್ತ ಬಟ್ಟೆಗಳನ್ನು ಮರುಸರಬರಾಜು ಮಾಡತಕ್ಕದ್ದು, ಮತ್ತು ಇದರಿಂದ ಸರಬರಾಜುದಾರರಿಗೆ ಯಾವುದೇ ರೀತಿಯ ಹೆಚ್ಚಿನ ವೆಚ್ಚ ಅಥವಾ ನಷ್ಟ ಉಂಟಾದಲ್ಲಿ ಸರಬರಾಜು ದಾರರೇ ಭರಿಸಬೇಕು, ಇಂತಹ

ಪ್ರಸಂಗದಿಂದ ಸರಬರಾಜುದಾರರಿಗೆ ಉದ್ಭವಿಸುವ ಯಾವುದೇ ನಷ್ಟಗಳಿಗೆ ಖರೀದಿದಾರರು ಜವಾಬ್ದಾರರಾಗುವುದಿಲ್ಲ.

(5) ಸಂಬಂಧಿಸಿದ ಶಾಲೆಗಳಿಗೆ ಸರಬರಾಜಾದ ಬಟ್ಟೆಗಳಲ್ಲಿ ಯಾವುದೇ ಬಟ್ಟೆಯ ಗುಣಮಟ್ಟ ನಿರ್ಧಿಷ್ಟ ಪಡಿಸಿದ ಗುಣಮಟ್ಟದ್ದಲ್ಲ (ನಿಗಧಿತ ಸ್ಪೆಸಿಫಿಕೇಶನ್ ಮೀರಿದ್ದಲ್ಲಿ) ಎಂದು ಕಂಡುಬಂದಲ್ಲಿ ಸಂಬಂಧಿತ ಶಾಲೆಗೆ ಸರಬರಾಜಾದ ನಂತರವೂ ಇಂತಹ ಬಟ್ಟೆಯನ್ನು ತಿರಸ್ಕರಿಸುವ ಪೂರ್ಣ ಅಧಿಕಾರ ಖರೀದಿದಾರರಿಗೆ ಇರುತ್ತದೆ. ಇದನ್ನು ಬಟ್ಟೆಗಳ ಸರಬರಾಜಿಗೆ ಮುನ್ನ ಪರೀಕ್ಷೆಗೆ ಒಳಪಡಿಸಿ ಖರೀದಿದಾರರು ಅಥವಾ ಅವರ ಪ್ರತಿನಿಧಿ ಅಂಗೀಕರಿಸಿದ ಬಟ್ಟೆಗಳೆಂದು ಕಾರಣ ನೀಡಿ ಬಿಟ್ಟುಬಿಡಲು/ತ್ಯಜಿಸಲು ಅವಕಾಶ ಇರುವುದಿಲ್ಲ.

5. ಬಟ್ಟೆಗಳ ಪರೀಕ್ಷೆಗೆ ಮಾದರಿಗಳನ್ನು ಆಯ್ಕೆ ಮಾಡುವ ಬಗ್ಗೆ :-

(1) ಸಮವಸ್ತ್ರ ಬಟ್ಟೆಗಳನ್ನು ಸಂಬಂಧಿಸಿದ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ಸರಬರಾಜು ಕಾರ್ಯ ಆರಂಭಿಸುವ ಮುನ್ನ ಖರೀದಿದಾರರು ತಿಳಿಸಿದ ಇಲಾಖಾ ಅಧಿಕಾರಿ/ ಸಿಬ್ಬಂದಿ ಅಥವಾ ಟೆಕ್ನಿಕಲ್ ಪ್ಯಾನಲ್ ಸದಸ್ಯರು ಸರಬರಾಜುದಾರರು ಬಟ್ಟೆಗಳನ್ನು ತಯಾರಿಸಿದ/ಶೇಖರಿಸಿದ ಸ್ಥಳಕ್ಕೆ ಭೇಟಿನೀಡಿ ಪ್ರತಿ ತರಹದ(ಶರ್ಟಿಂಗ್, ಸೂಟಿಂಗ್ ಮತ್ತು ಸ್ಕರ್ಟಿಂಗ್) ಸಮವಸ್ತ್ರಗಳಲ್ಲಿ 25000ಮೀಟರ್‌ಗೆ ಒಂದು ಸ್ಯಾಂಪಲ್‌ನಂತೆ ಸ್ಯಾಂಪಲ್‌ಗಳನ್ನು ಡ್ರಾ ಮಾಡುತ್ತಾರೆ.("ಸರಬರಾಜು ಮುನ್ನ ಸ್ಯಾಂಪಲ್ ಡ್ರಾ")

(2) ಡ್ರಾ ಮಾಡುವ ಪ್ರತಿಯೊಂದು ಮಾದರಿ (ಸ್ಯಾಂಪಲ್) ಬಟ್ಟೆಯ ಅಳತೆ ಕನಿಷ್ಠ ಮೂರು (3) ಮೀಟರ್ ಗಳಿಗಿಂತ ಕಡಿಮೆ ಇರಬಾರದು, ಮತ್ತು ಈ ಸ್ಯಾಂಪಲ್‌ಗಳನ್ನು ಗಂಡು ಮತ್ತು ಹೆಣ್ಣುಮಕ್ಕಳಿಗೆ ನೀಡುವ ಶರ್ಟ್ (ಮೇಲಂಗಿ) ಬಟ್ಟೆ, ಪಿ.ವಿ.ಶರ್ಟಿಂಗ್, ಗಂಡುಮಕ್ಕಳ ನಿಕ್ಕರ್/ಪ್ಯಾಂಟ್ ಬಟ್ಟೆ ಪಿ.ಸಿ.ಸೂಟಿಂಗ್ ಮತ್ತು ಹೆಣ್ಣುಮಕ್ಕಳ ಸ್ಕರ್ಟ್ 2/40 ಪಿ.ವಿ.ಬಟ್ಟೆ ಈ ಮೂರೂ ಸಮವಸ್ತ್ರಬಟ್ಟೆಗಳ ಸ್ಯಾಂಪಲ್‌ಗಳನ್ನು ಡ್ರಾಮಾಡಲಾಗುತ್ತದೆ.

(3) ಸರಬರಾಜುದಾರರು ಒದಗಿಸಿದ ಪ್ರೊಡಕ್ಷನ್ ಅಂಡ್ ಡೆಲಿವರಿ ಶೆಡ್ಯೂಲ್ ಅನುಸರಿಸಿ ಸಂಸ್ಥೆ ಉತ್ಪನ್ನ ಮಾಡಿದ ವಿವಿಧ ಲಾಟ್‌ಗಳಲ್ಲಿನ ಬಟ್ಟೆಗಳನ್ನು ತಾಂತ್ರಿಕ ಪರೀಕ್ಷೆಗಾಗಿ ರ್‍ಯಾಂಡಮ್ ಸೆಲೆಕ್ಷನ್ ಮಾಡಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ.ಇದಕ್ಕೆ ಸರಬರಾಜುದಾರರು ಸಂಪೂರ್ಣ ಸಹಕಾರ ನೀಡಬೇಕು

(4) ಅಗತ್ಯ ಬಿದ್ದಲ್ಲಿ ಬಟ್ಟೆಗಳ ತಯಾರಿಕಾ ಘಟಕಗಳಿಗೆ ಭೇಟಿನೀಡಿ ಪರಿಶೀಲನೆ/ ಬಟ್ಟೆಗಳ ಗುಣಮಟ್ಟದ ಪರೀಕ್ಷೆನಡೆಸಲು ಟೆಕ್ನಿಕಲ್ ಕಮಿಟಿ ರಚಿಸುವ ಪೂರ್ಣ ಅಧಿಕಾರ ಖರೀದಿದಾರರಿಗೆ ಇರುತ್ತದೆ. ಹೀಗೆ ರಚಿಸಿದ ಕಮಿಟಿ ಸದಸ್ಯರು ಸಮವಸ್ತ್ರ ಬಟ್ಟೆಗಳ ತಯಾರಿಕಾ ಘಟಕಗಳಿಗೆ ಭೇಟಿನೀಡಿದಾಗ ಅವರೊಂದಿಗೆ ಪೂರ್ಣ ಸಹಕಾರ ನೀಡುವ ಜವಾಬ್ದಾರಿ ಸರಬರಾಜುದಾರರದ್ದಾಗಿರುತ್ತದೆ.

(5) ಸರಬರಾಜುದಾರರು ಬಟ್ಟೆಗಳನ್ನು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಾಗಾಣಿಕೆ ಮಾಡುವ ಮುನ್ನ ಕಾರ್ಯಾದೇಶದಲ್ಲಿ ನಮೂದಿಸಿರುವ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಂಖ್ಯೆಗೆ ಅನುಗುಣವಾಗಿ ಅಷ್ಟು ಸಂಖ್ಯೆಯ ಮೂರೂ ಬಟ್ಟೆಗಳ ಒಂದೊಂದು ಸ್ಯಾಂಪಲ್‌ಗಳನ್ನು ಹೊಂದಿರುವ **20 x 24** ಸೆಂ.ಮೀ. ಅಳತೆಯ ಸ್ಯಾಂಪಲ್ ಸ್ಯಾಚೆಟ್‌ಗಳನ್ನು ಈ ಕಛೇರಿಗೆ ಒದಗಿಸುವುದು. ಈ ಸ್ಯಾಂಪಲ್‌ಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸಿ ಸರಬರಾಜಾದ ಬಟ್ಟೆಗಳ ಗುಣಮಟ್ಟ ಹೋಲಿಕೆ ಮಾಡಲು ಸೂಚಿಸಲಾಗುವುದು.

(6) ಹೀಗೆ ಸರಬರಾಜು ಮಾಡಿದ ಬಟ್ಟೆಗಳಲ್ಲಿ ಪ್ರತಿ ತಾಲ್ಲೂಕಿನಿಂದಪ್ರತಿ ತರಹದ ಸಮವಸ್ತ್ರದ(ಶರ್ಟಿಂಗ್, ಸೂಟಿಂಗ್ ಮತ್ತು ಸ್ಕರ್ಟಿಂಗ್) ಒಂದೊಂದು ಸ್ಯಾಂಪಲ್ ಡ್ರಾ ಮಾಡಿ ಗುಣಮಟ್ಟ ಖಚಿತಪಡಿಸಿಕೊಳ್ಳಲಾಗುವುದು.("ಸರಬರಾಜಿನ ನಂತರ ಸ್ಯಾಂಪಲ್ ಡ್ರಾ")

6. ಬಟ್ಟೆಗಳ ಒಪ್ಪಿಗೆ ಪ್ರಮಾಣ ಪತ್ರ :-

(1) ಬಟ್ಟೆಗಳ ಯಶಸ್ವೀ ಗುಣಮಟ್ಟ ಪರೀಕ್ಷೆಯ ನಂತರ ಅನುಬಂಧ-3 ರಂತೆ ತಾಲ್ಲೂಕು ಕೇಂದ್ರಗಳಿಗೆ (ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಗೆ) ಸರಬರಾಜು ಮಾಡಿದ ಬಟ್ಟೆಗಳ ಗುಣಮಟ್ಟವನ್ನು ಖಾತ್ರಿ ಮಾಡಿಕೊಂಡು ಸರಬರಾಜಾದ ಬಟ್ಟೆಯ ಒಪ್ಪಿಗೆ ಪ್ರಮಾಣಪತ್ರವನ್ನು ಸರಬರಾಜುದಾರರು ಮತ್ತು ತಾಲ್ಲೂಕು ಮಟ್ಟದಲ್ಲಿ ಖರೀದಿದಾರರ ಪ್ರತಿನಿಧಿಯಾದ ಸಾ.ಶಿ.ಇ. ಕ್ಷೇತ್ರ ಶಿಕ್ಷಣಾಧಿಕಾರಿ ಕಡ್ಡಾಯವಾಗಿ ದಿನಾಂಕವನ್ನು ನಮೂದಿಸಿ ಸ್ವೀಕೃತಿ ನೀಡಿರತಕ್ಕದ್ದು, ಈ

75

ಪ್ರಮಾಣ ಪತ್ರದಮೇಲೆ ನಮೂದಿಸಲಾದ ದಿನಾಂಕವನ್ನು ಸಮವಸ್ತ್ರಬಟ್ಟೆಯನ್ನು ತಾಲ್ಲೂಕಿನಲ್ಲಿ ಸ್ವೀಕರಿಸಿದ ದಿನಾಂಕವೆಂದು ಪರಿಗಣಿಸಲಾಗುವುದು.

(2) **ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದ ಸ್ವೀಕೃತಿಗಳ ಮೇಲೆ ದಿನಾಂಕ ನಮೂದಿಸಿ ಮೊಹರು ಹಾಕಿ ಸಹಿ ಮಾಡಿದ ಸ್ವೀಕೃತಿಗಳನ್ನು ಮಾತ್ರ ಪರಿಗಣಿಸಲಾಗುವುದು ಇದು ಖುದ್ದು ಸರಬರಾಜುದಾರರ ಜವಾಬ್ದಾರಿ ಆಗಿದ್ದು, ಮೊಹರು/ಸಹಿ/ದಿನಾಂಕ ಹೊಂದಿರದ ಸ್ವೀಕೃತಿಗಳನ್ನು ಸರಬರಾಜುದಾರರ ಜವಾಬ್ದಾರಿಯ ಮೇಲೆ ತಿರಸ್ಕರಿಸಲಾಗುವುದು.**

7. **ಬಟ್ಟೆಗಳ ಪ್ಯಾಕಿಂಗ್ :-**

(1) ನಿಗಧಿತ ಸ್ಥಳಗಳಿಗೆ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ) ಸರಬರಾಜು ಮಾಡುವಾಗ ಸಮವಸ್ತ್ರ ಬಟ್ಟೆಗಳನ್ನು ಸೆಟ್ ರೂಪದಲ್ಲಿ ದೃಢವಾದ ಪ್ಯಾಕಿಂಗ್ ಮಾಡಿ ಸರಬರಾಜು ಮಾಡುವುದು.

(2) ಹೀಗೆ ಮಾಡಲಾದ ಪ್ಯಾಕಿಂಗ್ ಸಾಗಾಣಿಕೆಯಲ್ಲಿ (ಟ್ರಾನ್ಸಿಟ್) ಯಾವುದೇ ಕಾರಣಕ್ಕೆ ಹಾನಿ ಅಂದರೆ ಬಂಡಲ್‌ಗಳು ಮಳೆ/ಗಾಳಿ/ ಇನ್ನಿತರ ಎಲ್ಲಾ ಕಠಿಣ ಪರಿಸ್ಥಿತಿಗಳನ್ನು ನಿರಾಯಾಸವಾಗಿ ಎದುರಿಸಿ ಯಾವುದೇ ಹಾನಿ ಆಗದಂತೆ ಸಮವಸ್ತ್ರ ಬಟ್ಟೆಗಳು ಸುಸ್ಥಿತಿಯಲ್ಲಿ ಫಲಾನುಭವಿಗಳಿಗೆ ತಲುಪುವಂತೆ ಪ್ಯಾಕಿಂಗ್ ಮಾಡಿರಬೇಕು.

(3) ಸಮವಸ್ತ್ರಗಳ ಬಂಡಲ್ಸ್‌ಗಳನ್ನು ತರಗತಿವಾರು ಬಂಡಲ್ಸ್ ಮಾಡಬೇಕು. ಬಂಡಲ್ ಗಳ ಮೇಲೆ ತರಗತಿ, ಬಾಲಕರ / ಬಾಲಕಿಯರ ಬಟ್ಟೆಗಳ ಅಳತೆಯ ವಿವರ, ಬಂಡಲ್ ಗಳಲ್ಲಿರುವ ಸೆಟ್ ಗಳ ಸಂಖ್ಯೆ ವಿವರಗಳನ್ನು ಪ್ರತಿ ಬಂಡಲ್‌ಗಳ ಮೇಲೆ ಸ್ಪಷ್ಟವಾಗಿ ನಮೂದಿಸಿ ಸಂಸ್ಥೆಯ ಪ್ರತಿನಿಧಿಗಳು ದೃಢೀಕರಿಸಿರಬೇಕು.

(4) ಸಮವಸ್ತ್ರಗಳನ್ನು ಆಯಾ ತಾಲ್ಲೂಕುಗಳ ಮಕ್ಕಳ ಸಂಖ್ಯೆಗನುಗುಣವಾಗಿ ಸೆಟ್ ಗಳ ರೂಪದಲ್ಲಿ ಸರಬರಾಜು ಮಾಡಬೇಕು. ಬಿಡಿ ಬಿಡಿಯಾಗಿ ಷರ್ಟ್, ನಿಕ್ಕರ್, ಸ್ಕರ್ಟ್, ಇತ್ಯಾದಿಗಳ ಬಟ್ಟೆಯನ್ನು ಪ್ರತ್ಯೇಕವಾಗಿ ಸರಬರಾಜು ಮಾಡಬಾರದು. ಸಮವಸ್ತ್ರ ಸೆಟ್‌ಗಳನ್ನು ಸರಬರಾಜು ಮಾಡುವ ಮುಂಚೆ ಸರಬರಾಜುದಾರರು ಸಮವಸ್ತ್ರ ಬಟ್ಟೆಗಳನ್ನು ಅವರೇ ನಿರ್ಧಿಷ್ಟ ಪಡಿಸಿದ ಈ ಕಾರ್ಯಕ್ಕಾಗಿಯೇ ಸೂಕ್ತ ವ್ಯವಸ್ಥೆ ಹೊಂದಿದ ಒಂದು ಪ್ರತ್ಯೇಕ ಕೇಂದ್ರವನ್ನು ತೆರೆದು ಆ ಕೇಂದ್ರದಲ್ಲಿ ಎಲ್ಲಾ ಬಟ್ಟೆಗಳನ್ನು ಕ್ರೋಢೀಕರಿಸಿ ಸೆಟ್ಸ್ ರೂಪದಲ್ಲಿಯೇ ಪ್ಯಾಕ್ ಮಾಡಿ ಅಲ್ಲಿಂದ ವಿವಿಧ ಜಿಲ್ಲೆ / ತಾಲ್ಲೂಕುಗಳಿಗೆ ಸೆಟ್ ಗಳ ರೂಪದಲ್ಲಿ ಮಾತ್ರ ಸರಬರಾಜು ಮಾಡಲು ಎಲ್ಲಾ ವ್ಯವಸ್ಥೆ ಗಳನ್ನು ಕಲ್ಪಿಸಿಕೊಳ್ಳುವುದು ಸರಬರಾಜು ಸಂಸ್ಥೆಗಳ ಜವಾಬ್ದಾರಿ ಆಗಿರುತ್ತದೆ.

8. **ಸಮವಸ್ತ್ರ ಬಟ್ಟೆಗಳಿಗೆ ವಿಮೆ :-**

(1) ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ-3 ರಂತೆ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ಸರಬರಾಜು ಮಾಡುವ ಸಮವಸ್ತ್ರ ಬಟ್ಟೆಗಳನ್ನು ತಯಾರಾದ ಸ್ಥಳದಿಂದ ನಿಗಧಿತ ಸ್ಥಳಗಳಿಗೆ ತಲುಪಿಸುವವರೆಗೆ ಸರಬರಾಜು ಮಾಡುವ ಬಟ್ಟೆಗಳ ಶೇಕಡಾ 110% ಮೌಲ್ಯಕ್ಕೆ ಯುದ್ಧ ಹಾಗೂ ಮುಷ್ಕರಗಳೂ ಸೇರಿದಂತೆ ಎಲ್ಲಾ ವಿಧದ ನಷ್ಟಗಳಿಗೂ ಒಳಪಟ್ಟಂತೆ ಪೂರ್ಣಪ್ರಮಾಣದ ವಿಮೆಯನ್ನು ಸರಬರಾಜುದಾರರು ಮಾಡಿಸಿರ ಬೇಕು.

9. **ಸಮವಸ್ತ್ರ ಬಟ್ಟೆಗಳ ಸಾಗಾಣಿಕೆ :-**

(1) ಸಮವಸ್ತ್ರಬಟ್ಟೆಗಳನ್ನು ಈ ಆದೇಶದ ಅನುಬಂಧ-2 ರಲ್ಲಿ ವಿವರಿಸಿದಂತೆ ಮತ್ತು ಬಟ್ಟೆಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಅನುಬಂಧದಲ್ಲಿನ ಟೆಕ್ನಿಕಲ್ ಸ್ಪೆಸಿಫಿಕೇಶನ್‌ಗೆ ಒಳಪಟ್ಟ ಬಟ್ಟೆಗಳನ್ನು ಮಾತ್ರ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ಪೂರ್ಣ ವಿಮೆಗೆ ಒಳಪಟ್ಟು ಸುಸ್ಥಿತಿಯಲ್ಲಿ ತಲುಪಿಸುವ ಜವಾಬ್ದಾರಿ ಸರಬರಾಜುದಾರರದ್ದಾಗಿರುತ್ತದೆ.

76

10. ಸರಬರಾಜುದಾರರು ನಿರ್ವಹಿಸಬೇಕಾದ ಪ್ರಾಸಂಗಿಕ ಸೇವೆಗಳು (ಇನ್ಸಿಡೆಂಟಲ್ ಸರ್ವೀಸಸ್):-

(1) ಸಮವಸ್ತ್ರ ಬಟ್ಟೆಗಳ ತಯಾರಕಾ ಘಟಕಗಳ ಸೂಕ್ತ ನಿರ್ವಹಣೆ, ಬಟ್ಟೆಗಳ ವಿಂಗಡಣೆ/ ತಾಲ್ಲೂಕುವಾರು ಸರಬರಾಜಿಗೆ ಬಟ್ಟೆಗಳನ್ನು ಕ್ರ.ಸಂ-7 ರಲ್ಲಿ ವಿವರಿಸಿರುವ ರೀತಿಯಲ್ಲಿ ಸೆಟ್‌ವಾರು ಪ್ಯಾಕಿಂಗ್ ವ್ಯವಸ್ಥೆ, ಸಕಾಲದಲ್ಲಿ ನಿಗಧಿತ ಸಂಖ್ಯೆಯ ಸಮವಸ್ತ್ರ ಬಟ್ಟೆಗಳ ಸೆಟ್‌ಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಲುಪಿಸುವವರೆಗಿನ ಎಲ್ಲಾ ಕಾರ್ಯಗಳ ಮೇಲ್ವಿಚಾರಣೆ ಮತ್ತು ನಿರ್ವಹಣೆ.

(2) ಸರಬರಾಜು ಸಂಸ್ಥೆಯವರು ಬಟ್ಟೆಗಳ ಉತ್ಪಾದನೆ ಮತ್ತು ಸರಬರಾಜು ಪ್ರಗತಿಯ ಬಗ್ಗೆ ಪ್ರತಿ ಶನಿವಾರದಂದು ವರದಿಯನ್ನು ಕಡ್ಡಾಯವಾಗಿ ತಪ್ಪದೇ ಒಬ್ಬರು ಜವಾಬ್ದಾರಿಯುತ ಅಧಿಕಾರಿ/ನೌಕರರ ಮೂಲಕ ಮುದ್ದಾಂ ಶಿಕ್ಷಣ ಆಯುಕ್ತರ ಕಛೇರಿಗೆ ಸಲ್ಲಿಸುವುದು.

(3) ಸರಬರಾಜು ಮಾಡಿದ ಬಟ್ಟೆಗಳ ಬಣ್ಣ / ಗುಣಮಟ್ಟದಲ್ಲಿ ಯಾವುದೇ ಬದಲಾವಣೆ/ಕಳಪೆ ಗುಣಮಟ್ಟ ಇರಬಾರದು.

(4) ಸರಬರಾಜುದಾರರು ಈ ಮೇಲಿನ ಪ್ರಾಸಂಗಿಕ ಸೇವೆಗಳಲ್ಲದೆ ತತ್ಸಂಬಂಧ ಖರೀದಿದಾರರಿಗೆ ಅವಶ್ಯವೆನಿಸಿದ ಲಿಖಿತವಾಗಿ ತಿಳಿಸುವ ಇತರೆ ಸೇವೆಗಳನ್ನು ಒದಗಿಸಲು ಬದ್ಧರಾಗಿರತಕ್ಕದ್ದು.

11. ಸರಬರಾಜು ಮಾಡಿದ ಬಟ್ಟೆಗಳ ಗುಣಮಟ್ಟ ಖಾತ್ರಿಯ ಬಗ್ಗೆ:-

(1) ಈ ಆದೇಶದ ಅಡಿ ಸರಬರಾಜುದಾರರು ಸರಬರಾಜು ಮಾಡುವ ಸಮವಸ್ತ್ರ ಬಟ್ಟೆಗಳು ಹೊಸ / ಉಪಯೋಗಿಸದ ಬಟ್ಟೆಗಳಾಗಿದ್ದು, ಅನುಬಂಧ-2 ರಲ್ಲಿನ ಟೆಕ್ನಿಕಲ್ ಸ್ಪೆಸಿಫಿಕೇಶನ್‌ಗೆ ಪೂರಕವಾಗಿರುವ ಬಗ್ಗೆ ಮತ್ತು ಈ ಆದೇಶದ ಅಡಿ ಸರಬರಾಜು ಮಾಡುವ ಎಲ್ಲಾ ಸಮವಸ್ತ್ರ ಬಟ್ಟೆಗಳು ಭೌತಿಕವಾಗಿ / ವಿನ್ಯಾಸದಲ್ಲಿ / ತಯಾರಿಕೆಯಲ್ಲಿ ಯಾವುದೇ ನ್ಯೂನತೆ ಅಥವಾ ಲೋಪದೋಷಗಳಿಂದ ಕೂಡಿರುವುದಿಲ್ಲ ಎಂದು ಸರಬರಾಜುದಾರರು ಖರೀದಿದಾರರಿಗೆ ಖಾತ್ರಿ ಪಡಿಸಬೇಕು.

(2) ಈ ಖಾತ್ರಿ ನಿಯಮದಡಿ ಯಾವುದೇ ಕ್ಲೇಮು ಉದ್ಭವಿಸಿದಲ್ಲಿ ಖರೀದಿದಾರರು ಸರಬರಾಜುದಾರರಿಗೆ ಬರವಣಿಗೆ ಮೂಲಕ ಪ್ರಕಟ ಪಡಿಸಬೇಕು.

(3) ಇಂತಹ ಸಂದರ್ಭದಲ್ಲಿ ಖರೀದಿದಾರರು ನೋಟೀಸ್‌ನಲ್ಲಿ ತಿಳಿಸಿದ ಅವಧಿಯೊಳಗೆ ಸರಬರಾಜುದಾರರುನ್ಯೂನತೆ ಹೊಂದಿದ ಸಮವಸ್ತ್ರ ಬಟ್ಟೆಗಳನ್ನು ಹಿಂಪಡೆದು ನ್ಯೂನತೆ ಇಲ್ಲದ ಹೊಸಬಟ್ಟೆಯನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಯಾವುದೇ ಹೆಚ್ಚುವರಿ ವೆಚ್ಚ ಬಯಸದೆ 15 ದಿನದೊಳಗಾಗಿ ಸರಬರಾಜು ಮಾಡುವುದು.

(4) ಖರೀದಿದಾರರು ಸೂಚಿಸಿದ ಅವಧಿಯೊಳಗಾಗಿ ನ್ಯೂನತೆ ಇರುವ ಬಟ್ಟೆಗಳನ್ನು ಬದಲಾವಣೆ ಮಾಡಿಕೊಡಲು ಸರಬರಾಜು ದಾರರು ವಿಫಲರಾದಲ್ಲಿ ಪರಿಹಾರಕ್ಕಾಗಿ ಸರಬರಾಜುದಾರರ ಜವಾಬ್ದಾರಿಯಮೇಲೆ ಅಗತ್ಯವೆನಿಸಿದ ಯೋಗ್ಯ ಶಿಸ್ತು ಕ್ರಮ ಕೈಗೊಳ್ಳಲು ಖರೀದಿದಾರರು ಹಕ್ಕುಳ್ಳವರಾಗಿರುತ್ತಾರೆ.

12. ಸರಬರಾಜು ವೆಚ್ಚದ ಪಾವತಿ:-

(1) ಸರಬರಾಜುದಾರರು ಖರೀದಿದಾರರಿಗೆ ಸಮವಸ್ತ್ರ ಸರಬರಾಜು ವೆಚ್ಚದ ಪಾವತಿಯನ್ನು ಲಿಖಿತ ರೂಪದಲ್ಲಿ ಕೋರತಕ್ಕದ್ದು, ಹೀಗೆ ಪಾವತಿ ಕೋರುವಾಗ ಪಾವತಿ ಕೋರಿರುವ ಮೊತ್ತಕ್ಕೆ ಸರಿಹೊಂದುವಂತೆ ಸಮವಸ್ತ್ರಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಲುಪಿಸಿ ಅವರಿಂದ ಸಮವಸ್ತ್ರಗಳನ್ನು ಸುಸ್ಥಿತಿಯಲ್ಲಿ ಪಡೆದ ಬಗ್ಗೆ ಮೊಹರು/ಸಹಿ/ದಿನಾಂಕವನ್ನು ಸ್ಪಷ್ಟವಾಗಿ ನಮೂದಿಸಿದ ಸ್ವೀಕೃತಿ (ಇನ್ವಾಯ್ಸ್) ಗಳನ್ನು ಅವಶ್ಯವಾಗಿ ಲಗತ್ತಿಸಿರತಕ್ಕದ್ದು,

(2) ಹೀಗೆ ಸರಬರಾಜುದಾರರು ಕೋರಿದ ವೆಚ್ಚವನ್ನು ಕೋರಿಕೆ ಸಲ್ಲಿಸಿದ 90 (ತೊಂಭತ್ತು) ದಿನಗಳ ಒಳಗೆ ಪಾವತಿ ಮಾಡಲಾಗುವುದು

(3) ಸಮವಸ್ತ್ರಗಳನ್ನು ಸರಬರಾಜಿನ ಬಗ್ಗೆ ಸಂಸ್ಥೆಯವರು ಸರಬರಾಜು ವೆಚ್ಚವನ್ನು ಕ್ಲೇಮು ಮಾಡುವಾಗ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದ ಸ್ವೀಕೃತಿಗಳೊಂದಿಗೆ ಈ ಕಛೇರಿಗೆ ಸಲ್ಲಿಸಿದ ನಂತರ ಸರ್ಕಾರದಿಂದ ಈ ಯೋಜನೆಗಾಗಿ ಬಿಡುಗಡೆ ಆಗಿರುವ ಅನುದಾನವನ್ನು ಅನುಸರಿಸಿ ವೆಚ್ಚ ಪಾವತಿಸಲು ಇಲಾಖೆಯಿಂದ ಕ್ರಮ ತೆಗೆದುಕೊಳ್ಳಲಾಗುವುದು. ಸರಬರಾಜು ವೆಚ್ಚದ ಪಾವತಿಯು ರಾಜ್ಯ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡುವ ಕ್ರಮಕ್ಕೆ ಒಳಪಟ್ಟಿರುತ್ತದೆ.

77

(4) ಸರಬರಾಜುದಾರರಿಗೆ ವೆಚ್ಚವನ್ನು ಪಾವತಿಸುವ ಸಂದರ್ಭದಲ್ಲಿ ಸರಬರಾಜುದಾರರು ಮತ್ತು ಖರೀದಿದಾರರೊಂದಿಗೆ ಆಗಿರುವ ಒಪ್ಪಂದದ ರೀತಿಯಲ್ಲಿ ಅಂದರೆ ಈ ಆದೇಶದ ಅನುಬಂಧ-01 ರಲ್ಲಿ ತಿಳಿಸಿರುವಂತೆ ಸರಬರಾಜು ಮಾಡುವ ಬಟ್ಟೆಯ ಪ್ರತಿ ಮೀಟರ್/ಸೆಟ್‌ಗೆ ನಿಗಧಿಪಡಿಸಿರುವ ದರದಲ್ಲಿ ಯಾವುದು ಕನಿಷ್ಠವೋ ಅದನ್ನು ಪರಿಗಣಿಸಿ ವೆಚ್ಚವನ್ನು ಪಾವತಿಸಲಾಗುವುದು. ದರಗಳು ನಿರ್ಧಾರಿತ / ನಿಗಧಿಪಡಿಸಿದ ದರಗಳಾಗಿದ್ದು, ಯಾವುದೇ ಕಾರಣಕ್ಕೆ ದರಗಳ ಬದಲಾವಣೆಗೆ ಅವಕಾಶ ಇರುವುದಿಲ್ಲ.

(5) ಸರಬರಾಜುದಾರರಿಗೆ ಸರಬರಾಜು ಮಾಡಿದ ಸಮವಸ್ತ್ರಬಟ್ಟೆಗಳ ವೆಚ್ಚವನ್ನು ಬಟ್ಟೆಗಳ ಸರಬರಾಜನ್ನು ಮಾಡಿ ಸಂಬಂಧಿಸಿದ ಅಧಿಕಾರಿ / ಪ್ರತಿನಿಧಿಯಿಂದ ಪಡೆದ ಸ್ವೀಕೃತಿಯ ಆಧಾರದಮೇಲೆ ಕರಾರಿನಲ್ಲಿ ಒಪ್ಪಂದವಾಗಿರುವ ದರದ ಶೇಕಡ 90% ರಷ್ಟು (ಬಟ್ಟೆಗಳಿಗೆ ನಿಗಧಿತ ಸ್ಪೆಸಿಫಿಕೇಶನ್ ನಲ್ಲಿನ ಯಾವುದೇ ಗುಣ ಅಥವಾ ಪಥ ಬದಲಾವಣೆಗೆ ಹಾಗೂ ವಿಳಂಬ ಸರಬರಾಜಿಗೆ ವಿಧಿಸುವ ದಂಡವನ್ನು ಹೊರತುಪಡಿಸಿ) ಪಾವತಿಸಲಾಗುವುದು.

(6) ಉಳಿದ ಶೇಕಡಾ 10% ಮೊತ್ತವನ್ನು ಬಟ್ಟೆಗಳ ಸರಬರಾಜು ಕಾರ್ಯ ಪೂರ್ಣಗೊಂಡು ಗುಣಮಟ್ಟ ಪರಿಶೀಲನಾ ಸಂಸ್ಥೆ ಯಿಂದ ಗುಣಮಟ್ಟ ಪರೀಕ್ಷಾ ವರದಿ ಪಡೆದ ನಂತರ ನಿಯಮಾನುಸಾರ ದಂಡ ಶುಲ್ಕಗಳನ್ನು ಕಟಾಯಿಸಿ ಪಾವತಿಸಲಾಗುತ್ತದೆ.

(7) ಸರ್ಕಾರದಿಂದ ಬಿಡುಗಡೆ ಆದ ಅನುದಾನವನ್ನು ಅನುಸರಿಸಿ ಮತ್ತು ಲಭ್ಯ ಅನುದಾನದ ಆಧಾರದ ಮೇಲೆ ವೆಚ್ಚಗಳನ್ನು ಪಾವತಿಸಲಾಗುತ್ತದೆ.

13. **ಆದೇಶದ ಬದಲಾವಣೆ:-**

(1) ಅರ್ಜಿದಾರರು ಯಾವುದೇ ಸಂದರ್ಭದಲ್ಲಿ ಸರಬರಾಜುದಾರರಿಗೆ ಲಿಖಿತ ಆದೇಶ ನೀಡುವ ಮೂಲಕ/ ಸಮವಸ್ತ್ರ ಬಟ್ಟೆಗಳಿಗೆ ಸಂಬಂಧಿಸಿದಂತೆ ಈ ಆದೇಶದ ಸಾಮಾನ್ಯ ವ್ಯಾಪ್ತಿಗೊಳಪಟ್ಟು ಕೆಳಕಂಡ ಒಂದು ಅಥವಾ ಹೆಚ್ಚಿನ ಬದಲಾವಣೆ ತರಲು ಖರೀದಿದಾರರಿಗೆ ಅಧಿಕಾರ ಇರುತ್ತದೆ.

(ಅ) ಖರೀದಿದಾರರಿಗೆ ನಿಶ್ಚಿತವಾಗಿ ತಯಾರು ಮಾಡಿ ಸರಬರಾಜು ಮಾಡಬೇಕಾದ ಬಟ್ಟೆಯ ರೂಪ/ಮಾದರಿ / ವಿನ್ಯಾಸ/ ಸ್ಪೆಸಿಫಿಕೇಶನ್.

(ಆ) ಸಮವಸ್ತ್ರ ಬಟ್ಟೆಗಳನ್ನು ಒಯ್ಯುವ/ ಪ್ಯಾಕಿಂಗ್/ ವಿಧಾನ

(ಇ) ಸರಬರಾಜು ಮಾಡಬೇಕಾದ ಬಟ್ಟೆಗಳನ್ನು ತಲುಪಿಸಬೇಕಾದ ಸ್ಥಳ ಅಥವಾ

(ಈ) ಖರೀದಿದಾರರಿಗೆ ಸರಬರಾಜುದಾರರು ಒದಗಿಸಬೇಕಾದ ಸೇವೆಯ ಬಗ್ಗೆ.

(ಉ) ಸರಬರಾಜುದಾರರಿಗೆ ವಹಿಸಿರುವ ಕಾರ್ಯದ ಒಟ್ಟಾರೆ ಪರಿಮಾಣದಲ್ಲಿ ಶೇಕಡ-15 ಹೆಚ್ಚಳ ಅಥವಾ ಕಡಿಮೆ ಮಾಡುವ ಅಧಿಕಾರ ಖರೀದಿದಾರರಿಗೆ ಇರುತ್ತದೆ.

(2) ಇಂತಹ ಬದಲಾವಣೆಯಿಂದ ಸರಬರಾಜುದಾರರಿಗೆ ಬಟ್ಟೆಗಳ ಸರಬರಾಜಿನ ವೆಚ್ಚದಲ್ಲಿ ಆಗಬಹುದಾದ ಹೆಚ್ಚು ಅಥವಾ ಕಡಿಮೆ ದರಗಳ ಬಗ್ಗೆ ಅಥವಾ ಸರಬರಾಜಿನ ಕಾಲಾವಧಿಯಲ್ಲಿ ಆಗಬಹುದಾದ ವ್ಯತ್ಯಯಗಳ ಬಗ್ಗೆ ಈ ಆದೇಶಕ್ಕೆ ಸೂಕ್ತ ಪರಿಹಾರಪೂರ್ವಕ ಬದಲಾವಣೆಯನ್ನು ಲಿಖಿತವಾಗಿ ನೀಡಲಾಗುವುದು,

(3) ಸರಬರಾಜುದಾರರ ಯಾವುದೇ ಕ್ಲೇಮುಗಳ ಬಗ್ಗೆ ಅಥವಾ ಖರೀದಿದಾರರ ಮತ್ತು ಸರಬರಾಜುದಾರರ ಹೊಂದಾಣಿಕೆ ಬಗ್ಗೆ ಯಾವುದೇ ಆದೇಶ ಹೊರಡಿಸಿದ 30 (ಮೂವತ್ತು)ದಿನಗಳ ಒಳಗಾಗಿ ಪರಿಹಾರ ಕಲ್ಪಿಸಿಕೊಳ್ಳಲು ಅವಕಾಶವಿರುತ್ತದೆ.

14. **ಕರಾರು ಒಪ್ಪಂದದ ತಿದ್ದುಪಡಿ:-**

(1) ಖರೀದಿದಾರರು ಮತ್ತು ಸರಬರಾಜುದಾರರಿಬ್ಬರೂ ಲಿಖಿತ ಒಪ್ಪಿ ಕರಾರು ಒಪ್ಪಂದದ ತಿದ್ದುಪಡಿಗೆ ಸಹಿಮಾಡದ ಹೊರತು ಕರಾರಿನಲ್ಲಿನ ಯಾವುದೇ ಷರತ್ತು / ನಿಬಂಧನೆಗಳನ್ನು ಬದಲಾವಣೆ ಮಾಡತಕ್ಕದ್ದಲ್ಲ.

15. ನಿಯಮಿತ ಕಾರ್ಯ (Assignment) :-

(1) ಖರೀದಿದಾರರ ಪೂರ್ವ ಲಿಖಿತ ಒಪ್ಪಿಗೆ ಪಡೆಯದ ಹೊರತು ಸರಬರಾಜುದಾರರು ಈ ಕರಾರಿನಡಿ ನಿಯಮಿತವಾದ ಒಂದು ಭಾಗ ಅಥವಾ ಪೂರ್ಣವಾಗಿ ಯಾವುದೇ ಕಾರ್ಯವನ್ನು ನಿರ್ವಹಿಸತಕ್ಕದ್ದಲ್ಲ.

16. ಉಪಕರಾರು (ಒಳ ಒಪ್ಪಂದ) (Sub Contract) :-

(1) ಸಮವಸ್ತ್ರಗಳ ಬಟ್ಟೆಯನ್ನು ರಾಜ್ಯದ ಕೈಮಗ್ಗಗಳ ಘಟಕಗಳಿಂದ ಮಾತ್ರ ಪಡೆದು ಸರಬರಾಜು ಮಾಡಬೇಕು. ಇತರೆ ಯಾವುದೇ ಸಂಸ್ಥೆಗಳು ಅಥವಾ ಖಾಸಗಿ ಸಂಸ್ಥೆಗಳಿಂದ ಖರೀದಿಸಿ ಸರಬರಾಜು ಮಾಡತಕ್ಕದ್ದಲ್ಲ.

(2) ಸರಬರಾಜುದಾರರು ಈ ಕರಾರಿನಡಿ ಆದೇಶಿಸಿರುವ ಸಮವಸ್ತ್ರಗಳ ಸರಬರಾಜಿನ ಪೂರ್ಣ ಪ್ರಮಾಣದ ಅಥವಾ ಭಾಗಶಃ ಪ್ರಮಾಣವನ್ನು ಉಪಕರಾರು ಮಾಡತಕ್ಕದ್ದಲ್ಲ.

17. ಕಾಂಟ್ರ್ಯಾಕ್ಟ್ ನಿರ್ವಹಣೆಯಲ್ಲಿ ಸರಬರಾಜುದಾರರ(ಕಾಂಟ್ರ್ಯಾಕ್ಟ್ ದಾರರ) ವಿಳಂಬ :-

(1) ಈ ಕರಾರಿನಡಿ ಸರಬರಾಜುದಾರರು ನಿರ್ವಹಿಸಬೇಕಾದ ಕಾರ್ಯವನ್ನು ಅಂದರೆ ತಯಾರಿಸಿದ ಸಮವಸ್ತ್ರ ಬಟ್ಟೆಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ನಿಗಧಿ ಪಡಿಸಿರುವ ಅಂತಿಮ ದಿನಾಂಕದ ಒಳಗಾಗಿ ಚಾಚೂ ತಪ್ಪದೆ ಸರಬರಾಜು ಕಾರ್ಯ ನಿರ್ವಹಿಸತಕ್ಕದ್ದು.

(2) ಯಾವುದೇ ಒಂದು ಸಂದರ್ಭದಲ್ಲಿ ಈ ಕರಾರಿನಡಿ ನಿರ್ವಹಿಸಲಾಗುವ ಕಾರ್ಯದಲ್ಲಿ ಸಮವಸ್ತ್ರಗಳ ಸರಬರಾಜನ್ನು ನಿಗಧಿತ ಕಾಲಾವಧಿಯಲ್ಲಿ ಸರಬರಾಜು ಮಾಡಲು ತೊಡಕು ಉಂಟಾದ ಸಂದರ್ಭದಲ್ಲಿ ಸರಬರಾಜುದಾರರು ವಿಳಂಬಕ್ಕೆ ಸೂಕ್ತ ವಿವರಣೆ ಮತ್ತು ಕಾರಣಗಳನ್ನು ಮತ್ತು ಈ ರೀತಿ ಉಂಟಾದ ತೊಡಕನ್ನು ಸರಿಪಡಿಸಲು ಬೇಕಾದ ಕಾಲಾವಧಿ ಬಗ್ಗೆ ಖರೀದಿದಾರರಿಗೆ ಲಿಖಿತವಾಗಿ ತಿಳಿಸುವುದು. ಈ ರೀತಿ ಸರಬರಾಜುದಾರರಿಂದ ಸ್ವೀಕೃತ ಲಿಖಿತ ವಿವರಣೆ ಬಗ್ಗೆ ಖರೀದಿದಾರರು ಸಂದರ್ಭವನ್ನು ಮೌಲ್ಯಮಾಪನ ಮಾಡಿ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಸರಬರಾಜು ದಾರರಿಗೆ ಸೂಕ್ತ ಕಾಲಾವಕಾಶವನ್ನು ದಂಡ ಸಹಿತ ಅಥವಾ ದಂಡರಹಿತವಾಗಿ ಅನುಮತಿಸುವುದು, ಅಥವಾ ತಿರಸ್ಕರಿಸುವುದು ಖರೀದಿದಾರರ ವಿವೇಚನಾ ಅಧಿಕಾರಕ್ಕೆ ಒಳಪಟ್ಟಿರುತ್ತದೆ.

18. ನಷ್ಟ ಪರಿಹಾರ (Liquidated Damages) :-

(1) ಸರಬರಾಜುದಾರರು ಈ ಆದೇಶಕ್ಕೆ ಒಳಪಟ್ಟಂತೆ ಸಮವಸ್ತ್ರ ಬಟ್ಟೆಗಳ ಸರಬರಾಜನ್ನು ಭಾಗಶಃ ಅಥವಾ ಪೂರ್ಣ ಪ್ರಮಾಣದಲ್ಲಿ ಈ ಆದೇಶದಂತೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ನಿಗಧಿತ ಸಂಖ್ಯೆಯಲ್ಲಿ ಸಮವಸ್ತ್ರ ಸೆಟ್‌ಗಳನ್ನು ತಿಳಿಸಿರುವಂತೆ ನಿಗಧಿತ ಕಾಲಾವಕಾಶದೊಳಗೆ ತಲುಪಿಸಲು ವಿಫಲರಾದಲ್ಲಿ ಈ ಕರಾರಿನಡಿ ಖರೀದಿದಾರರು ಬೇರೆ ಪರಿಹಾರವಿಲ್ಲದೆ ವಿಳಂಬ ಸರಬರಾಜು ಮಾಡಿದ ಸಮವಸ್ತ್ರಬಟ್ಟೆಗಳ ಮೌಲ್ಯದ ಮೇಲೆ ಪ್ರತಿ ವಾರದ ವಿಳಂಬಕ್ಕೆ ವಾರ ಒಂದಕ್ಕೆ 1% ರಂತೆ ಮೊದನೇ ತಿಂಗಳಿಗೆ ಹಾಗೂ ನಂತರದ ವಿಳಂಬಕ್ಕೆ ಪ್ರತಿ ವಾರದ ವಿಳಂಬಕ್ಕೆ ಶೇಕಡ 2% ದಂಡವನ್ನು ವಿಳಂಬದ ಪ್ರಮಾಣದ ಬಟ್ಟೆಗೆ ಲಿಕ್ವಿಡೇಟೆಡ್ ಡ್ಯಾಮೇಜಸ್‌ಗಾಗಿ ದಂಡ ವಿಧಿಸಲಾಗುತ್ತದೆ.

19. ಕಾಂಟ್ರ್ಯಾಕ್ಟ್ ರದ್ದುಪಡಿಸುವಿಕೆ (Termination for Default) :-

(1) ಸರಬರಾಜುದಾರರು ಕರಾರಿನಲ್ಲಿನ ಯಾವುದೇ ಷರತ್ತು/ ಅಂಶಗಳನ್ನು ಉಲ್ಲಂಘಿಸಿದಲ್ಲಿ ತಪ್ಪಿನ ಬಗ್ಗೆ ಅಥವಾ ಉಲ್ಲಂಘಿಸಿದ ಅಂಶಗಳಬಗ್ಗೆ ಸರಬರಾಜುದಾರರಿಗೆ ಲಿಖಿತ ನೋಟೀಸ್ ನೀಡುವ ಮೂಲಕ ವಹಿಸಿರುವ ಕಾರ್ಯಾದೇಶವನ್ನು ಭಾಗಶಃ ಅಥವಾ ಪೂರ್ಣವಾಗಿ ರದ್ದುಪಡಿಸುವ ಅಧಿಕಾರ ಖರೀದಿದಾರರಿಗೆ ಇರುತ್ತದೆ.

(ಅ) ಸರಬರಾಜುದಾರರು ವಹಿಸಿರುವ ಕಾರ್ಯವನ್ನು ಪೂರ್ಣ ಅಥವಾ ಭಾಗಶಃ ನಿಗಧಿತ ಸಮಯದಲ್ಲಿ ಅಥವಾ ಖರೀದಿದಾರರು ಒಪ್ಪಿ ವಿಸ್ತರಿಸಲಾಗಿರುವ ದಿನಾಂಕದೊಳಗೆ ಪೂರ್ಣಗೊಳಿಸದ ಪಕ್ಷದಲ್ಲಿ.

(ಆ) ಸರಬರಾಜುದಾರರು ಈ ಕರಾರಿನ ಯಾವುದೇ ಅನಿವಾರ್ಯತೆಗಳನ್ನು ನಿರ್ವಹಿಸಲು ವಿಫಲರಾದಲ್ಲಿ.

(ಇ) ಸರಬರಾಜುದಾರರು ಈ ಕರಾರಿನ ನಿರ್ವಹಣೆಯಸಂಬಂಧ ಭ್ರಷ್ಟ ಅಥವಾ ವಂಚನೆ ಪ್ರಕರಣದಲ್ಲಿ ನಿರತರಾಗಿದ್ದರೆಂದು ಖರೀದಿದಾರರು ತೀರ್ಮಾನಿಸಲ್ಪಟ್ಟರೆ.

ಭ್ರಷ್ಟ ಅಥವಾ ವಂಚನೆ ಪ್ರಕರಣ ಎಂದರೆ ಈ ಕರಾರಿನ ಅನುಷ್ಠಾನದ ಪ್ರಕ್ರಿಯೆಯಲ್ಲಿ ಸಾರ್ವಜನಿಕ ಅಧಿಕಾರಿ/ನೌಕರರೊಂದಿಗೆ ಕರಾರಿನ ಬಗ್ಗೆ ಪ್ರಸ್ತಾಪಿಸುವುದು/ ಯಾವುದೇ ಮೌಲ್ಯ ಅಥವಾ ಬೇಡಿಕೆ ಮುಂದಿಡುವುದು.

ವಂಚನೆ ಪ್ರಕರಣ ಎಂದರೆ ಕಾರ್ಯಾದೇಶವನ್ನು ಪಡೆಯುವ ಉದ್ದೇಶಕ್ಕಾಗಿ ವಾಸ್ತವಾಂಶ ಅಥವಾ ವಾಸ್ತವಗಳನ್ನು ತಿರುಚಿದ ದಾಖಲೆಗಳನ್ನು ಸಲ್ಲಿಸುವುದು ಮತ್ತು ಸರಬರಾಜು ಕಾರ್ಯಕ್ಕಾಗಿ ಬಿಡ್ ಸಲ್ಲಿಸುವ ಅಥವಾ ಇತರೆ ಸಂಸ್ಥೆಗಳೊಂದಿಗೆ ಸರಬರಾಜು ವೆಚ್ಚಕ್ಕೆ ಸಂಬಂಧಿಸಿದಂತೆ ಒಳಸಂಚು ರೂಪಿಸುವುದು.

(2) ಮೇಲಿನ ಸಂದರ್ಭಗಳಡಿ ಖರೀದಿದಾರರು ಸರಬರಾಜುದಾರರ ಕಾರ್ಯಾದೇಶವನ್ನು ಭಾಗಶಃ ಅಥವಾ ಪೂರ್ಣವಾಗಿ ರದ್ದುಗೊಳಿಸಿದ ಪಕ್ಷದಲ್ಲಿ ಖರೀದಿ ಮಾಡಬೇಕಾದ ಸಮವಸ್ತ್ರ ಬಟ್ಟೆಗಳನ್ನು ತನಗೆ ಸೂಕ್ತವೆನಿಸಿದ ಕ್ರಮವನ್ನು ಅನುಸರಿಸಿ ಖರೀದಿಮಾಡಲು ಹಕ್ಕುಳ್ಳವರಾಗಿರುತ್ತಾರೆ. ಇಂತಹ ಸಂದರ್ಭದಲ್ಲಿ ತಗಲಬಹುದಾದ ಹೆಚ್ಚುವರಿ ವೆಚ್ಚವನ್ನು ಮೊದಲಿನ (ಕರಾರು ರದ್ದುಪಡಿಸಲಾದ) ಸರಬರಾಜುದಾರರೇ ಭರಿಸಬೇಕಾಗುತ್ತದೆ ಮತ್ತು ರದ್ದು ಮಾಡಲ್ಪಡದ ಭಾಗದ ಸರಬರಾಜನ್ನು ಮುಂದುವರಿಸತಕ್ಕದ್ದಾಗಿರುತ್ತದೆ.

20. ಗುಣಮಟ್ಟದ ಉಲ್ಲಂಘನೆಗಾಗಿ ದಂಡ (Penalty for Quality Deviation) :-

(1) ಸರಬರಾಜು ಮಾಡಲ್ಪಟ್ಟ ಸಮವಸ್ತ್ರ ಬಟ್ಟೆಗಳು ಈ ಕಾರ್ಯಾದೇಶದ ಅನುಬಂಧ-2 ರಲ್ಲಿನ ಟೆಕ್ನಿಕಲ್ ಸ್ಪೆಸಿಫಿಕೇಶನ್ ನಲ್ಲಿ ಹೇಳಿರುವಂತೆ ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಕಡ್ಡಾಯವಾಗಿರುತ್ತದೆ. ಹೀಗೆ ಗುಣಮಟ್ಟ ಕಾಯ್ದುಕೊಂಡಿರುವುದನ್ನು ದೃಢಪಡಿಸಿಕೊಳ್ಳಲು ಖರೀದಿದಾರರು ಸೂಕ್ತ ತಾಂತ್ರಿಕ ಪರೀಕ್ಷೆಗಳನ್ನು ಅನುಸರಿಸಬೇಕಾಗುತ್ತದೆ, ಈ ಕುರಿತು ಪರೀಕ್ಷೆಯ ವಿಧಾನ ಅನುಸರಿಸುವ ಕ್ರಮಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ನಿರ್ಧರಿಸುತ್ತಾರೆ. ಸಮವಸ್ತ್ರಗಳ ಗುಣಮಟ್ಟವು ಟೆಕ್ನಿಕಲ್ ಸ್ಪೆಸಿಫಿಕೇಶನ್‌ಗಳಿಗೆ ಪೂರಕವಾಗಿರುವ ಬಗ್ಗೆ ತಾಂತ್ರಿಕ ಪರಿಶೀಲನೆಯನ್ನು ಭಾರತ ಸರ್ಕಾರ ಸ್ವಾಮ್ಯದ ಸಂಸ್ಥೆಗಳಿಂದ ನಿರ್ವಹಿಸಲಾಗುವುದು.

(2) ಸರಬರಾಜು ಮಾಡಿದ ಸಮವಸ್ತ್ರಗಳು ಇಲಾಖೆ ನಿರ್ದಿಷ್ಟ ಪಡಿಸಿರುವ ಸ್ಪೆಸಿಫಿಕೇಶನ್‌ಗಳನ್ನು ಉಲ್ಲಂಘಿಸಿದಲ್ಲಿ ಅಥವಾ ವಿಚಲನೆ ಆಗಿದ್ದಲ್ಲಿ ನಿರ್ದಿಷ್ಟ ಸ್ಪೆಸಿಫಿಕೇಶನ್ ಮೀರಿದ ಅಂಕಗಳಿಗೆ ದಂಡ ವಿಧಿಸುವ ಅಥವಾ ದೋಷಪೂರಿತ ಬಟ್ಟೆಗಳನ್ನು ತಿರಸ್ಕರಿಸುವ ವಿವೇಚನಾಧಿಕಾರ ಆಯುಕ್ತರು, ಸಾ.ಶಿ.ಇ ಇವರಿಗೆ ಇರುತ್ತದೆ. ಅಲ್ಲದೆ ಬಟ್ಟೆಗಳ ತಾಂತ್ರಿಕ ಪರೀಕ್ಷೆ ನಡೆಸಿದ ಸಂಸ್ಥೆಯವರು ನೀಡಿರುವ ವರದಿಯ ಆಧಾರದ ಮೇಲೆ ಗುಣಮಟ್ಟವನ್ನು ಉಲ್ಲಂಘಿಸಿದ ಸಮವಸ್ತ್ರ ಬಟ್ಟೆಗಳಿಗೆ ಪ್ರತಿಯೊಂದು ಪ್ಯಾರಾ ಮೀಟರನ್ನು ಗಣನೆಗೆ ತೆಗೆದುಕೊಂಡು ಗುಣಮಟ್ಟ ಉಲ್ಲಂಘಿಸಿದ ಬಟ್ಟೆಗಳ ಸರಬರಾಜು ಮೌಲ್ಯಕ್ಕೆ ಶೇಕಡ 2% ದಣಡವನ್ನು ಗುಣಮಟ್ಟ ಕಡಿಮೆ ಇರುವ ಪ್ಯಾರಾಮೀಟರ್‌ಗೆ ಸಂಬಂಧಿಸಿದ 25000ಮೀಟರ್ ಲಾಟ್‌ನ ಮೌಲ್ಯಕ್ಕೆ(ಸರಬರಾಜು ಪೂರ್ವ ಗುಣಮಟ್ಟ ವರದಿ) ಹಾಗೂ ಗುಣಮಟ್ಟ ಕಡಿಮೆ ಇರುವ ಸ್ಯಾಂಪಲ್‌ನ ಪ್ರತಿ ತಾಲ್ಲೂಕಿನ ಸರಬರಾಜು ಮೌಲ್ಯಕ್ಕೆ (ಸರಬರಾಜಿನ ನಂತರದ ಗುಣಮಟ್ಟ ವರದಿ) ವಿಧಿಸಲು ಹಾಗೂ ದಂಡ ವಿಧಿಸುವ ಕ್ರಮವನ್ನು ತೀರ್ಮಾನ ಮಾಡಲು ಸಾ.ಶಿ.ಇ. ಆಯುಕ್ತರಿಗೆ ಅಧಿಕಾರ ಇರುತ್ತದೆ.

(3) ಅಲ್ಲದೆ ಬಟ್ಟೆಗಳ ಪರೀಕ್ಷಾವರದಿಯು ನಿಗಧಿತ ಸ್ಪೆಸಿಫಿಕೇಶನ್ ನಲ್ಲಿನ ಗುಣಗಳನ್ನು ಒಪ್ಪಲು ಸಾಧ್ಯವಿಲ್ಲದ ಮಟ್ಟಿಗೆ ಉಲ್ಲಂಘನೆ ಆಗಿದ್ದಲ್ಲಿ ಅಂತಹ ಸೆಟ್‌ಗಳ ಪೂರ್ಣ ಪ್ರಮಾಣವನ್ನು ತಿರಸ್ಕರಿಸಿ ಬದಲಿಗೆ ಬೇರೆ ಪೂರ್ಣ ಗುಣಮಟ್ಟಕ್ಕೆ ಹೊಂದಾಣಿಕೆ ಆಗುವಂತಹ ಹೊಸ ಬಟ್ಟೆಗಳನ್ನು ಸರಬರಾಜು ಮಾಡಲು ಆದೇಶಿಸುವ ಅಧಿಕಾರ ಖರೀದಿದಾರರಿಗೆ ಇರುತ್ತದೆ.

21. ಖರೀದಿದಾರರ ಸೌಕರ್ಯದ ಮೇರೆಗೆ ಕರಾರಿನ ರದ್ದತಿ:-

(1) ಖರೀದಿದಾರರು ಯಾವುದೇ ಸಂದರ್ಭದಲ್ಲಿ ತಮ್ಮ ಸೌಕರ್ಯದ ಹಿನ್ನೆಲೆಯಲ್ಲಿ ಸರಬರಾಜುದಾರರಿಗೆ ಲಿಖಿತ ನೋಟೀಸ್ ನೀಡಿ ಪೂರ್ಣ ಅಥವಾ ಭಾಗಶಃ ಕರಾರನ್ನು ರದ್ದುಪಡಿಸಬಹುದಾಗಿದೆ. ಹೀಗೆ ರದ್ದುಪಡಿಸುವಾಗ ನೋಟೀಸಿನಲ್ಲಿ ಖರೀದಿದಾರರ ಸೌಕರ್ಯಕ್ಕಾಗಿ ಎಂದು ತಿಳಿಸಿ ಅದಕ್ಕೆ ಕಾರಣಗಳನ್ನು ಸ್ಪಷ್ಟವಾಗಿ ನಮೂದಿಸಬೇಕು, ಮತ್ತು ಕರಾರಿನ ಎಷ್ಟು ಭಾಗವನ್ನು ರದ್ದುಪಡಿಸಿದೆ ಎಂಬುದನ್ನು ಮತ್ತು ಸದರಿ ರದ್ದುಆದೇಶ ಯಾವ ದಿನಾಂಕ ದಿಂದ ಜಾರಿಗೆ ಬರುತ್ತದೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಿರಬೇಕು.

(2) ಇಂತಹ ಸಂದರ್ಭದಲ್ಲಿ ಖರೀದಿದಾರರ ರದ್ದು ಆದೇಶವನ್ನು ಸ್ವೀಕರಿಸಿದ ಸರಬರಾಜುದಾರರು ಈ ಆದೇಶ ಸ್ವೀಕರಿಸಿದ ದಿನಾಂಕದಿಂದ 07 (ಏಳು) ದಿನಗಳ ವರೆಗಿನ ಅವಧಿಯಲ್ಲಿ ಸರಬರಾಜಿಗೆ ತಯಾರಾಗಿರುವ ಬಟ್ಟೆಗಳನ್ನು ಖರೀದಿದಾರರು ಕರಾರಿನಲ್ಲಿ ನಿಗಧಿಯಾಗಿರುವ ದರಗಳಂತೆ ಒಪ್ಪಿಕೊಳ್ಳತಕ್ಕದ್ದು ಮತ್ತು ಉಳಿದ ಸಮವಸ್ತ್ರ ಬಟ್ಟೆಗಳ ಬಗ್ಗೆ ಖರೀದಿದಾರರ ನಿರ್ಣಯವೇ ಅಂತಿಮವಾಗಿರುತ್ತದೆ.

(ಅ) ಇಂತಹ ಸಂದರ್ಭದಲ್ಲಿ ಕರಾರಿನಲ್ಲಿ Delivery Schedule ಪ್ರಕಾರ ನಿಗಧಿಪಡಿಸಿದ ಅವಧಿ, ಒಪ್ಪಿರುವಷರತ್ತು ಮತ್ತು ದರಗಳನ್ವಯ ಅಥವಾ

(ಆ) ಜ್ಞಾಪನವನ್ನು ರದ್ದುಗೊಳಿಸಿ Delivery Schedule ಪ್ರಕಾರ ಭಾಗಶಃ ಸರಬರಾಜಾಗಿರುವ ಸಮವಸ್ತ್ರಬಟ್ಟೆಗಳಿಗೆ ನಿಗಧಿತ ವೆಚ್ಚವನ್ನು ಪಾವತಿಸುವುದು.

22. ವಿವಾದಗಳ ಬಗೆಹರಿಸುವಿಕೆ:-

(1) ಈ ಕರಾರಿನಡಿ ಅಥವಾ ಬೇರಾವುದೇ ಕಾರಣಕ್ಕಾಗಲಿ ಖರೀದಿದಾರರು ಮತ್ತು ಸರಬರಾಜುದಾರರ ನಡುವೆ ಯಾವುದೇ ವಿವಾದಗಳು, ಭಿನ್ನಾಭಿಪ್ರಾಯಗಳು, ಅಸಮ್ಮತಿ ಉದ್ಭವಿಸಿದಲ್ಲಿ ಸೌಹಾರ್ದಯುತವಾಗಿ ನೇರವಾದ ಅನೌಪಚಾರಿಕ ಮಾತುಕತೆಗಳ ಮೂಲಕ ಬಗೆಹರಿಸಿಕೊಳ್ಳುವ ಎಲ್ಲಾ ಪ್ರಯತ್ನಗಳನ್ನು ಮಾಡುವುದು.

(2) ಈ ರೀತಿಯಾಗಿ ಪ್ರಯತ್ನಗಳನ್ನು ನಡೆಸಿದ 30 (ಮೂವತ್ತು) ದಿನಗಳ ಒಳಗೆ ಭಿನ್ನಾಭಿಪ್ರಾಯಗಳು ಬಗೆಹರಿಯದಿದ್ದಲ್ಲಿ ಖರೀದಿದಾರರಾಗಲಿ, ಸರಬರಾಜುದಾರರಾಗಲಿ ಮತ್ತೊಬ್ಬರಿಗೆ ನೋಟೀಸ್ ನೀಡುವ ಮೂಲಕ ಸಮಸ್ಯೆಯನ್ನು ಮತ್ತೊಬ್ಬರ ಮಧ್ಯಸ್ಥಿಕೆ ಮೂಲಕ ಬಗೆಹರಿಸುವ ಪ್ರಯತ್ನದ ಬಗ್ಗೆ ಸಹಕರಿಸಬೇಕು. ಹೀಗೆ ಮುಂಚಿತವಾಗಿ ಸೂಚನೆ ನೀಡದೆ ಮಧ್ಯಸ್ಥಿಕೆಯನ್ನು ಪ್ರಾರಂಭಿಸತಕ್ಕದ್ದಲ್ಲ.

(3) ಈ ರೀತಿ ನೋಟೀಸ್ ನೀಡಿದ ನಂತರ ಅಂತಿಮವಾಗಿ ಇಲಾಖಾ ಮುಖ್ಯಸ್ಥರಿಂದ ಅಥವಾ ಇಲಾಖೆಯ ಕಾರ್ಯದರ್ಶಿಯವರ ಮಧ್ಯಸ್ತಿಕೆ ಪಡೆದು ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳತಕ್ಕದ್ದು, ಈ ರೀತಿ ಮಧ್ಯಸ್ಥಿಕೆಯನ್ನು ಸಮವಸ್ತ್ರ ಸರಬರಾಜಿನ ಪೂರ್ವದಲ್ಲಾಗಲಿ, ಸರಬರಾಜು ಪ್ರಾರಂಭಿಸಿರುವ ಸಮಯದಲ್ಲಾಗಲಿ, ಸರಬರಾಜಿನ ನಂತರವಾಗಲಿ ಪ್ರಾರಂಭಿಸಲು ಅವಕಾಶ ಇರುತ್ತದೆ.

(4) ಇಂತಹ ಪ್ರಕರಣಗಳಲ್ಲಿ ಮಾನ್ಯ ಶಿಕ್ಷಣ ಕಾರ್ಯದರ್ಶಿಯವರ ತೀರ್ಮಾನವೇ ಅಂತಿಮವಾಗಿದ್ದು, ಇವರ ತೀರ್ಮಾನಕ್ಕೆ ಎರಡೂ ಪಕ್ಷಗಳೂ ಬದ್ಧರಾಗಿರತಕ್ಕದ್ದು. ಈ ರೀತಿಯ ಆರ್ಬಿಟ್ರೇಶನ್ ನಡಾವಳಿಗಳಿಗೆ ತಗಲುವ ಎಲ್ಲಾ ವೆಚ್ಚಗಳನ್ನೂ ಆರ್ಬಿಟ್ರೇಶನ್ ತೀರ್ಮಾನದಂತೆ ಪಾವತಿಸತಕ್ಕದ್ದು. ಆದರೆ ಈ ಕಾರ್ಯಕ್ಕಾಗಿ ತಯಾರಿಸಿ ಮಂಡಿಸುವ ದಾಖಲೆಗಳಿಗೆ ತಗಲುವ ವೆಚ್ಚವನ್ನು ಸಂಬಂಧಿಸಿದ ಆಯಾ ವ್ಯಕ್ತಿಗಳೇ ಭರಿಸತಕ್ಕದ್ದು.

(5) ಈ ಮಧ್ಯೆ ವಿವಾದಗಳಿಗೆ ಸಂಬಂಧಿಸಿದಂತೆ ಖರೀದಿದಾರರು ಹಾಗೂ ಸರಬರಾಜು ದಾರರ ನಡುವೆ ಪರಸ್ಪರ ಲಿಖಿತ ಒಪ್ಪಂದ ಏರ್ಪಡದ ಹೊರತು ಸರಬರಾಜುದಾರರು/ಖರೀದಿದಾರರು ಕಾಂಟ್ರ್ಯಾಕ್ಟ್ ನಂತೆ ಕಾರ್ಯವನ್ನು/ ತಮ್ಮ ಜವಾಬ್ದಾರಿಗಳನ್ನು ಮುಂದುವರೆಸತಕ್ಕದ್ದು.

(81)

(6) ಮತ್ತು ಖರೀದಿ ದಾರರು ಸರಬರಾಜುದಾರರಿಗೆ ಬಾಕಿ ಇರುವ ವೆಚ್ಚವನ್ನು ಕರಾರಿನಂತೆ ಪಾವತಿಸುವುದು.

23. ಜವಾಬ್ದಾರಿಯ ಮಿತಿ (Limitation of liability) :-

(1) ಅನುರೂಪವಾಗಿ ಕ್ರಿಮಿನಲ್ ಉದಾಸೀನತೆ ಅಥವಾ ಬೇಕೆಂದೇ ಮಾಡಿದ ತಪ್ಪುಗಳ ಸಂದರ್ಭದಲ್ಲಿ ಈ ಕರಾರಿನಲ್ಲಿನ ಯಾವುದೇ ಲೋಪದ ಪರಿಣಾಮವಾಗಿ ಉದ್ಭವಿಸಿದ ನಷ್ಟ ಅಥವಾ ಹಾನಿಗೆ ಸರಬರಾಜುದಾರ ಯಾವುದೇ ರೀತಿಯ ನಷ್ಟ ತುಂಬಿಕೊಡಲು ಜವಾಬ್ದಾರನಾಗಿರುವುದಿಲ್ಲ. ಈ ವಿವರಣೆಯು ಸರಬರಾಜುದಾರ ಸರಬರಾಜು ಮಾಡಿದ ಸಮವಸ್ತ್ರ ಬಟ್ಟೆಗಳ ಗುಣಮಟ್ಟಕ್ಕೆ ಮತ್ತು ವಿಳಂಬ ಸರಬರಾಜಿಗೆ ವಿಧಿಸುವ ದಂಡಗಳಿಗೆ ಅನ್ವಯಿಸುವುದಿಲ್ಲ.

(2) ಯಾವುದೇ ಕಾರಣಕ್ಕೆ ಉದ್ಭವಿಸುವ ಸಮಸ್ಯೆಗಳ ಬಗ್ಗೆ ಅಥವಾ ಖರೀದಿದಾರರ ಯಾವುದೇ ಆದೇಶದಿಂದ ಸರಬರಾಜುದಾರರು ಬಾಧಿತರಾದಲ್ಲಿ ಅಂತಹ ಬಾಧಿತ ಆದೇಶ ಹೊರಡಿಸಿದ 15 ದಿನಗಳ ಒಳಗಾಗಿ ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಲ್ಲಿ ಆಕ್ಷೇಪಣೆಯನ್ನು ಸಲ್ಲಿಸತಕ್ಕದ್ದು.

24. ತೆರಿಗೆಗಳು ಮತ್ತು ಕರಗಳು (Taxes and Duties) :-

(1) ಸಮವಸ್ತ್ರಗಳು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ತಲುಪಿಸುವವರೆಗಿನ ಕರಗಳು / ಲೈಸೆನ್ಸ್ ಫೀ / ಆಕ್ಟ್ರಾಯ್ / ವ್ಯಾಟ್ / ರೋಡ್ ಪರ್ಮಿಟ್ ಮುಂತಾದ ಎಲ್ಲಾ ವೆಚ್ಚಗಳಿಗೂ ಸರಬರಾಜುದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ. ಉಲ್ಲೇಖಿತ (2)ರ ನಡಾವಳಿಯಂತೆ ಸಂಸ್ಥೆಗೆ ಜಿ.ಎಸ್.ಟಿ ಮೊತ್ತವನ್ನು ಪಾವತಿಮಾಡಲಾಗುವುದು.

25. ಬಟ್ಟೆಗಳ ತಾಂತ್ರಿಕ ಗುಣಮಟ್ಟದ ಪರೀಕ್ಷಾ ಶುಲ್ಕದ ವೆಚ್ಚವನ್ನು ಸರಬರಾಜುದಾರರೇ ಭರಿಸತಕ್ಕದ್ದು.

26. ಆದೇಶದಲ್ಲಿ ಸರಬರಾಜಿಗೆ ನಿಗಧಿಪಡಿಸಿರುವ ಸಮವಸ್ತ್ರಗಳ ಪ್ರಮಾಣದಲ್ಲಿ ಶೇಕಡ 15% ವರೆಗೆ ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಅಧಿಕಾರ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಗೆ ಇರುತ್ತದೆ. ಮತ್ತು ಇಂತಹ ಹೆಚ್ಚಳ ಅಥವಾ ಕಡಿಮೆ ಮಾಡಿದ ಕಾರಣಕ್ಕೆ ಸರಬರಾಜು ಸಂಸ್ಥೆಗೆ ಈ ಕರಾರಿನಡಿ ಒಪ್ಪಿಗೆಯಾಗಿರುವ ನಿಗಧಿಪಡಿಸಿರುವ ದರದಲ್ಲಿ ಮಾತ್ರ ಲೆಕ್ಕಾಚಾರ ಮಾಡಿ ವೆಚ್ಚವನ್ನು ಪಾವತಿಸಲಾಗುವುದು.

ಈ ಆದೇಶ ದೊಂದಿಗೆ ಇರುವ ಲಗತ್ತುಗಳು:-

1. ಅನುಬಂಧ-1 : 2019-20ನೇ ಸಾಲಿಗೆ ಸರಬರಾಜು ಮಾಡಬೇಕಾದ ಸಮವಸ್ತ್ರ ಬಟ್ಟೆಗಳ ಬಣ್ಣ, ಅಳತೆ, ಪ್ರತಿ ಮೀಟರ್‌ಗೆ ನಿಗಧಿ ಪಡಿಸಿರುವ ದರ ಮತ್ತು ಬಟ್ಟೆಗಳ ಪ್ರಮಾಣಗಳ ವಿವರ.
2. ಅನುಬಂಧ-2 : ಸರಬರಾಜು ಮಾಡಬೇಕಾಗಿರುವ ಸಮವಸ್ತ್ರ ಬಟ್ಟೆಗಳ ತಾಂತ್ರಿಕ ಸ್ಪೆಸಿಫಿಕೇಶನ್
3. ಅನುಬಂಧ-3 : ಸಮವಸ್ತ್ರ ಬಟ್ಟೆ ತಾಲ್ಲೂಕುವಾರು ತರಗತಿವಾರು ಸೆಟ್‌ಗಳ ರೂಪದಲ್ಲಿ ಒದಗಿಸಬೇಕಾದ ಸಂಖ್ಯೆಯ ವಿವರ.
4. ಅನುಬಂಧ-4 : ಕರಾರು ಒಪ್ಪಂದದ ಮಾದರಿ (ರೂ.500/-ರ ಛಾಪಾ ಕಾಗದದ ಮೇಲೆ ನಮೂದಿಸಿ ಸಹಿ ಮಾಡಿ ನಿಗಧಿತ ದಿನಾಂಕದೊಳಗೆ ಸಲ್ಲಿಸಬೇಕು)

[ಡಾ॥ಪಿ.ಸಿ.ಜಾಫರ್.ಭಾ.ಆ.ಸೇ]

ಆಯುಕ್ತರು,

ಅನುಬಂಧ-01

2019-20ನೇ ಸಾಲಿಗೆ ಮೆ:ಕೆ.ಎಸ್.ಟಿ.ಐ.ಡಿ.ಸಿ ಸಂಸ್ಥೆ ಸರಬರಾಜು ಮಾಡಬೇಕಾದ ಸಮವಸ್ತ್ರ ಬಟ್ಟೆಗಳ ಬಣ್ಣ, ಅಳತೆ, ಪ್ರಮಾಣದ ವಿವರ

ಕ್ರ.ಸಂ	ಬಟ್ಟೆಯ ವಿವರ	ಬಣ್ಣ
1	ಗಂಡು/ಹೆಣ್ಣು ಮಕ್ಕಳ ಮೇಲಂಗಿ ಬಟ್ಟೆ [ಪಾಲಿಯಸ್ಟರ್ ವಿಸ್ಕೋಸ್ ಷರ್ಟಿಂಗ್]	ಲೈಟ್ ಬ್ಲೂ
2	ಗಂಡು ಮಕ್ಕಳ ನಿಕ್ಕರ್/ ಪ್ಯಾಂಟ್ ಬಟ್ಟೆ (ಪಾಲಿಯಸ್ಟರ್ ಕಾಟನ್ ಸೂಟಿಂಗ್]	ನೇವಿ ಬ್ಲೂ
3	ಹೆಣ್ಣುಮಕ್ಕಳ ಸ್ಕರ್ಟ್ ಬಟ್ಟೆ (2/40 ಪಿ.ವಿ.ಬಟ್ಟೆ]	ನೇವಿ ಬ್ಲೂ

ಕ್ರ.ಸಂ	ವಿಭಾಗ	ಸರಬರಾಜು ಸಂಸ್ಥೆಯ ಹೆಸರು	ಫಲಾನುಭವಿಗಳ ಸಂಖ್ಯೆ [ಪ್ರತಿ ವಿದ್ಯಾರ್ಥಿಗೆ 1 ಸೆಟ್‌ನಂತೆ]
			ಒಟ್ಟು
1	ಬೆಳಗಾವಿ ವಿಭಾಗ (ಬೆಳಗಾವಿ ಮತ್ತು ಚಿಕ್ಕೋಡಿ)	ಕೆ.ಎಸ್.ಟಿ.ಐ.ಡಿ.ಸಿ, ಬೆಂಗಳೂರು	407457

ಬಟ್ಟೆಯ ವಿವರ	ಬಳಕೆಯಾಗುವ ಬಟ್ಟೆ ಮೀಟರ್‌ಗಳಲ್ಲಿ	ಪ್ರತಿ ಮೀಟರ್‌ಗೆ ದರ	ಒಟ್ಟು ಮೌಲ್ಯ
ಮೀಡಿಯಂ ಬ್ಲ್ಯೂ ಪಾಲಿಯಸ್ಟರ್ ವಿಸ್ಕೋಸ್ ಷರ್ಟಿಂಗ್ [ಮೇಲಂಗಿ ಬಟ್ಟೆ] 1ರಿಂದ10ನೇ ತರಗತಿಯ ವರೆಗಿನ ಬಾಲಕರು ಮತ್ತು ಬಾಲಕಿಯರುಗಳಿಗೆ	5,52,567.40	42.18	23307293.00
ನೇವಿ ಬ್ಲ್ಯೂ ಪಾಲಿಯಸ್ಟರ್ ಕಾಟನ್ ಸೂಟಿಂಗ್ [ನಿಕ್ಕರ್/ಪ್ಯಾಂಟ್ ಬಟ್ಟೆ] 1 ರಿಂದ 10ನೇ ತರಗತಿಯ ಬಾಲಕರುಗಳಿಗೆ.	1,42,611.80	105.30	14974239.00 150,17,022.50
ನೇವಿಬ್ಲೂ 2/40 ಪಿ.ವಿ ಸ್ಕರ್ಟ್ ಬಟ್ಟೆ] 1 ರಿಂದ 10ನೇ ತರಗತಿಯ ಬಾಲಕಿಯರುಗಳಿಗೆ.	2,97,917.25	55.26	16462907.00
ಒಟ್ಟು	**9,93,097.00**		**5,47,44,439.00**

ಆಯುಕ್ತರು, ಸಾ.ಶಿ.ಇ

ಒಟ್ಟು ಆದೇಶದ ಮೊತ್ತ: ರೂ. 5,47,44,439.00 (ಐದು ಕೋಟಿ ನಲವತ್ತೇಳು ಲಕ್ಷದ ನಲವತ್ನಾಲ್ಕು ಸಾವಿರದ ನಾಲ್ಕುನೂರ ಮೂವತ್ತೊಂಭತ್ತು ರೂ ಮಾತ್ರ) ಸದರಿ ಮೊತ್ತಕ್ಕೆ ನಿಯಮಾನುಸಾರ ಜಿ.ಎಸ್.ಟಿ ಪಾವತಿ ಮಾಡಲಾಗುವುದು.

83

Class-wise Measurment

Classes	Discription	Measurement in running metres	Width
I & II	Boys-H.Pant	0.50	54”
	Boys - Shirt	1.10	36”
	Girls - Skirt	1.20	36”
	Girls - Shirt	1.10	36”
III & IV	Boys-H.Pant	0.55	54”
	Boys - Shirt	1.20	36”
	Girls - Skirt	1.40	36”
	Girls - Shirt	1.20	36”
V to VII	Boys-H.Pant	0.60	54”
	Boys - Shirt	1.40	36”
V to VII	Girls Skirt	1.75	36”
	Girls Shirt	1.50	36”
VIII to X	Boys - Pant	1.20	54”
	Boys - Shirt	2.00	36”

ಆಯುಕ್ತರು, ಸಾ.ಶಿ.ಇ

TECHNICAL SPECFICATIONS FOR SUPPLY OF UNIFORMS FOR- 2019-20

Sl No	Specification	PC Suiting	PV Shirting	2/40s PV Cloth
1.	Count of Yarns (Approx)			Count of yarn[TCM]
	Warp	20/2 tex (2/30sNe) PC (+/- 10%)	10/2 tex (2/60s Ne) (+/- 10%)	2/40s PV (+/- 10%)
	Weft	20/2 tex (2/30s Ne) PC (+/- 10%)	80 Denier texturised Polyester filament (+/- 10%)	2/40s PV (+/- 10%)
2.	Threads/dm			Threads/inch
	Warp	240 (+/-5%) (60:EPI)	320 (+/- 5%) (EPI:80)	56 (+/- 5%) [IS 1963:1985]
	Weft	190 (+/- 5%) (48:PPI)	300 (+/- 5%) (PPI:76)	50 (+/- 5%) [IS 1963:1985]
3.	Blend Composition Percent — Warp	Polyester=67(+/- 3%) Cotton=33(+/- 3%)	Polyster=67 (+/- 3%) Viscose=33 (+/- 3%)	Fibre Composition (IS:3416:1988) warp & weft P-67%(+/-5%) V-33% (+/-5%)
	Blend Composition Percent — Weft	Polyester=67(+/- 3%) Cotton=33(+/- 3%)	Polyester	
4.	Weight - Mass (Gms/mtr Sqr)	190 (+/- 5%)	100 Gsm (+/- 5%)	Weight /P.Sqr meter (TCM) 135 (+/- 5%)
5.	Breaking load on 5:0x20 cm strips, min			(Kgs) Min 20 cm2 reveled strip
	Warp way	88 kg	41 kg	60 kg (IS 1969:1985)
	weft way	63 kg	33 kg	60 kg
6.	Width Cm, Min	138 (+/- 1 cm)	90 (36 inches) (+/- 1 cm)	(IS) 90 (36 inches) (+/- 1 cm)
7.	Shrinkage (% Max)			Dimensional Changes (MAx)
	Warp way	2	2	(IS 2977) 2.0
	Weft way	2	2	2.0
8.	colour fAstness to:			
	➢ Light	AATCC 16-3.5 or better in 20 hours IS-5 or better	AATCC 16-3.5 or better in 20 hours IS-5 or better	(Min) [IS:2545] AATCC - 16 4 or better
	➢ Washing	4 or better	4 or better	[IS-764] CIC At 60°C - 4 or better St on adj Fab - 3 or better
	➢ Perspiration	4 or better	4 or better	CIC (IS 971) 4 or better St on Adj FAb – 3 or better
	➢ Rubbing	3 or better	4 or better	(IS 766) Dry - 4 or better Wet – 3 or better
9.	Pilling (After 5 hours of test)	IS 4 or better ASTM-D3512-3.5 or better	IS 4 or better ASTM-D3512-3.5 or better	ASTMD-3512-3/4 or better
10.	Weave	Plain	Plain	Plain
11.	Dye and colour	Disperse Vat Dye	Disperse Vat Dye	Disperse & reactive
12.	colour and Shade	Navy blue as per sample	Medium blue as per sample	Navy blue as per sample

ಆಯುಕ್ತರು

85

ಅನುಬಂಧ-3 ...

"ಪ್ರವಾಹ ತುರ್ತು"

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

ಸಿಪಿಇ(2)/ಸ.ವ.ಸ ಕಾರ್ಯಾದೇಶ-2/ಕೆ.ಎಸ್.ಟಿ.ಐ.ಡಿ.ಸಿ-11/2019-20 ದಿನಾಂಕ: 12.09.2019

ಇವರಿಗೆ,

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ,
ಒಕ್ಕಲಿಗರ ಭವನ, ಹಡ್ಸನ್ ವೃತ್ತ
ಬೆಂಗಳೂರು.

-: **ಕಾರ್ಯಾದೇಶ** :-

ವಿಷಯ: 2019-20ನೇ ಸಾಲಿಗೆ ವಿದ್ಯಾವಿಕಾಸ ಯೋಜನೆಯಡಿಯಲ್ಲಿ ಪ್ರವಾಹ ಸಂತ್ರಸ್ತ ಪ್ರದೇಶಗಳಾದ ಬೆಳಗಾವಿ, ಚಿಕ್ಕೋಡಿ, ಬಾಗಲಕೋಟೆ,ಚಿಕ್ಕಮಗಳೂರು, ಕೊಡಗು, ಧಾರವಾಡ, ರಾಯಚೂರು, ಶಿವಮಾಗ್ಗ ಮತ್ತು ಗದಗ ಜಿಲ್ಲೆಗಳ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಮವಸ್ತ್ರ – ಬಟ್ಟೆ ಸರಬರಾಜು ಮಾಡಲು ಕಾರ್ಯಾದೇಶ ನೀಡುವ ಕುರಿತು.

ಉಲ್ಲೇಖ: 1 ಸರ್ಕಾರದ ಆದೇಶ ಸಂಖ್ಯೆ: ಇಡಿ 165 ಯೋಯೋಕ 2018 (ಭಾಗ (2)) ಬೆಂಗಳೂರು, ದಿನಾಂಕ: 28/08/2019.
2. ಈ ಕಛೇರಿಯಿಂದ ನಿಮಗಾಗಲೇ ನೀಡಿರುವ ಕಾರ್ಯಾದೇಶ ದಿನಾಂಕ;06.03.2019

ರಾಜ್ಯದಲ್ಲಿನ ಕೆಲವು ಜಿಲ್ಲೆಗಳಲ್ಲಿ ಇತ್ತೀಚೆಗೆ ಭಾರಿ ಮಳೆಯಿಂದಾಗಿ ಪ್ರವಾಹವುಂಟಾಗಿರುತ್ತದೆ. ಇದರಿಂದ ಶಾಲೆಗಳು, ಮನೆಗಳು, ಮುಳುಗಡೆ/ ಹಾನಿಯಾಗಿದ್ದು ಶಾಲಾ ಸಮವಸಗಳು ಹಾಳಾಗಿದ್ದು ಇಂತಹ ನೆರೆ ಸಂತ್ರಸ್ತ ಜಿಲ್ಲೆಗಳ ಸರ್ಕಾರಿ ಶಾಲಾ ಮಕ್ಕಳಿಗೆ ಹೆಚ್ಚುವರಿಯಾಗಿ ಒಂದು ಜೊತೆ ಸಮವಸ್ತ್ರ ನೀಡಲು ಸರ್ಕಾರವು ಉಲ್ಲೇಖದ ಪತ್ರದಲ್ಲಿ ಆದೇಶ ಮಾಡಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ನೆರೆ ಪೀಡಿತ ಜಿಲ್ಲೆಗಳ ಉಪನಿರ್ದೇಶಕರಿಂದ ಜಿಲ್ಲಾವಾರು ಬೇಕಾದ ಸಮವಸ್ತ್ರಗಳ ಮಾಹಿತಿ ಪಡೆಯಲಾಗಿದೆ. ಉಪನಿರ್ದೇಶಕರು ನೀಡಿದ ಬೇಡಿಕೆ ಮಾಹಿತಿ ಮೇರೆಗೆ ಅಗತ್ಯವಿರುವ ಜಿಲ್ಲಾವಾರು ಸಮವಸ್ತ್ರದ ಬೇಡಿಕೆ ಈ ಕೆಳಗಿನಂತಿದೆ.

ಕ್ರ ಸಂ	ಜಿಲ್ಲೆಯ ಹೆಸರು	ಸಮವಸ್ತ್ರದ ಬೇಡಿಕೆ
1	ಕೊಡಗು	1298
2	ಚಿಕ್ಕಮಗಳೂರು	100
3	ಬೆಳಗಾವಿ	14528
4	ಧಾರವಾಡ	2172
5	ಬಾಗಲಕೋಟೆ	2835
6	ರಾಯಚೂರು	794
7	ಗದಗ	1960
8	ಶಿವಮೊಗ್ಗ	754
9	ಚಿಕ್ಕೋಡಿ	38786
	ಒಟ್ಟು	**63227**

ಜಿಲ್ಲಾವಾರು, ತರಗತಿವಾರು, ಬಾಲಕ, ಬಾಲಕೀಯರಿಗೆ ಸರಬರಾಜು ಮಾಡಬೇಕಾದ ಸಮವಸ್ತ್ರದ ಬೇಡಿಕೆಯ ಪಟ್ಟಿಯನ್ನು ಈ ಪತ್ರದೊಂದಿಗೆ ಅನುಬಂಧಿಸಿದೆ ಅದರಂತೆ ಎಲ್ಲಾ ಸಮವಸ್ತ್ರಗಳನ್ನು ಕಾರ್ಯಾದೇಶ

ನೀಡಿದ ದಿನಾಂಕದಿಂದ 20 ದಿನಗಳೊಳಗೆ ಬೇಡಿಕೆ ಪಟ್ಟಿಯಂತೆ(ಅನುಬಂಧ 1&2) ಸರಬರಾಜು ಮಾಡಲು ಕ್ರಮವಹಿಸುವುದು.

ಈ ಬಗ್ಗೆ ಈ ಕಛೇರಿಯಿಂದ ಮೊದಲ ಸೆಟ್ ಸಮವಸ್ತ್ರ ವಿತರಣೆಗಾಗಿ ನೀಡಿದಂತಹ ಕಾರ್ಯಾದೇಶದ ಸಂಖ್ಯೆ ಸಿಪಿಇ(2)/ಸ.ವ.ಸ ಕಾರ್ಯಾದೇಶ/ಕೆ.ಎಸ್.ಟಿ.ಐ.ಡಿ.ಸಿ-11 /2018-19 ದಿನಾಂಕ: 06.03.2019 ರಲ್ಲಿ ನಮೂದಿಸಿರುವ ಎಲ್ಲಾ ಷರತ್ತು ನಿಬಂಧನೆಗಳು ಯಥಾವತ್ತಾಗಿ ಅನ್ವಯಿಸುತ್ತವೆ.

ಈಗಾಗಲೇ ನಿಗದಿಪಡಿಸಿರುವಂತೆ ನಿಗದಿತ ಗುಣಮಟ್ಟ ಹಾಗೂ ತರಗತಿವಾರು ಮಕ್ಕಳ ಅಳತೆಗಳಲ್ಲಿ ವ್ಯತ್ಯಾಸವಾಗದಂತೆ ಕಾಲಮಿತಿಯಲ್ಲಿ ಸಮವಸ್ತ್ರಗಳನ್ನು ಜಿಲ್ಲೆಗಳ ತಾಲೂಕು ಕೇಂದ್ರಗಳಿಗೆ ಸರಬರಾಜು ಮಾಡುವುದು.

ಪ್ರವಾಹ ತುರ್ತು ಆಗಿರುವುದರಿಂದ ಯಾವುದೇ ವಿಳಂಬವಿಲ್ಲದಂತೆ ಸಕಾಲದಲ್ಲಿ ಸಮವಸ್ತ್ರ ಬಟ್ಟೆ ಸರಬರಾಜು ಮಾಡಲು ಮತ್ತೊಮ್ಮೆ ತಮಗೆ ಸ್ಪಷ್ಟಪಡಿಸಿದೆ.

ಆಯುಕ್ತರು,
[ಡಾ॥ ಕೆ.ಜಿ ಜಗದೀಶ .ಭಾ.ಆ.ಸೇ]

12/09

87

34

ಅನುಬಂಧ - 4

ಅನುಬಂಧ-4-(ಅ)

2017-18ನೇ ಸಾಲಿಗೆ ವಿದ್ಯಾ ವಿಕಾಸ ಯೋಜನೆಯಡಿ ಶಿಕ್ಷಣ ಇಲಾಖೆಗೆ ಸಮವಸ್ತ್ರ ಬಟ್ಟೆ ಸರಬರಾಜು ಮಾಡಿದ ಘಟಕ/ಸಹಕಾರ ಸಂಘ ಪೂರೈಸಿದ ಬಟ್ಟೆ ಪ್ರಮಾಣ ಹಾಗೂ ಬಟ್ಟೆ ಮೌಲ್ಯ

23	ಬಾಲಕಿಯರ ವಸತಿನಿಲಯ 2235-02-103-0-99-(100)	288.50	159.00	39	39	
25	ಸ್ವಾಧಾರ ಗೃಹ 2235-02-103-0-64(059)	454.75	0.00	53	53	
26	181 – ಮಹಿಳಾ ಸಹಾಯವಾಣಿ	6159 ದೂರವಾಣಿ ಕರೆಗಳನ್ನು ಸ್ವೀಕರಿಸಲಾಗಿದೆ.				
27	ಒನ್ ಸ್ಟಾಪ್ ಸೆಂಟರ್ (ಸಖಿ) 2235-02-102-0-42	ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ನೇರವಾಗಿ ಜಿಲ್ಲೆಗಳ ಉಪನಿರ್ದೇಶಕರುಗಳ ಜಂಟಿ ಖಾತೆಗೆ ಜಮೆ ಮಾಡಿರುತ್ತಾರೆ.				

28	ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2235-02-103-0-52 (034)	706.67	458.79	234	234	
30	ಭಾಗ್ಯಲಕ್ಷ್ಮಿ ಯೋಜನೆ 2235-02-102-0-25	10000.00	3873.66	3,33,334	1,29,122	
31	ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ 2235-02-102-0-27	30.00	6.32	250	65	
32	ಮಕ್ಕಳ ದಿನಾಚರಣೆ ಕಾರ್ಯಕ್ರಮ 2235-02-102-0-99-100	15.00	15.00	8	8	
33	ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ನಿವಾರಣೆ ಕಾರ್ಯಕ್ರಮ 2235-02-102-0-24-100	30.00	0.00	-	-	ಅನುದಾನ ನಿಗದಿಪಡಿಸಿದ್ದು, ಆರ್ಥಿಕ ಇಲಾಖೆಯಿಂದ ಕಡಿತಗೊಳಿಸಲಾಗಿದೆ. ಮರುಹೊಂದಾಣಿಕೆಗೆ ಕಡತ ಸಲ್ಲಿಸಿದೆ.
34	ಉಜ್ವಲ ಯೋಜನೆ 2235-02-103-0-67	297.20	145.28	15	12	
35	ಬೇಟಿ ಬಚಾವೊ ಬೇಟಿ ಪಡಾವೊ 2235-02-102-0-41	125.00	85.60	-	-	ಗ್ರಾಮ, ತಾಲ್ಲುಕು,ಜಿಲ್ಲಾ ಮಟ್ಟಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ.
36	ಸ್ವೀಕಾರ ಕೇಂದ್ರಗಳು ಮತ್ತು ರಾಜ್ಯ ಮಹಿಳಾ ನಿಲಯಗಳು 2235-02-106-0-06	688.72	439.14	12 (ಸಂಸ್ಥೆಗಳು)	12 (ಸಂಸ್ಥೆಗಳು)	
37	ನಿರ್ಗತಿಕ ಮಕ್ಕಳ ಕುಟೀರ ಯೋಜನೆ 2211-00-102-0-26	789.00	59.43	263 (ಕುಟೀರಗಳು)	161 (ಕುಟೀರಗಳು)	
38	ಸುಧಾರಣಾ ಸಂಸ್ಥೆಗಳ ಕಟ್ಟಡ ನಿರ್ಮಾಣ 4235-02-106-1-01	550.00	26.53	2	1	
	ಒಟ್ಟು	419399.37	385013.10			

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳಡಿ 2020-21ನೇ ಸಾಲಿನ ಫೆಬ್ರವರಿ ಅಂತ್ಯದವರೆಗೆ ಸಾಧಿಸಿದ ಗುರಿ ಮತ್ತು ಸಾಧನೆಗಳ ವಿವರ.

(ರೂ.ಲಕ್ಷಗಳಲ್ಲಿ)

ಕ್ರ.ಸಂ	ಯೋಜನೆಯ ಹೆಸರು	ಸರ್ಕಾರದಿಂದ ನಿಗಧಿಯಾದ/ಬಿಡುಗಡೆಯಾದ ಅನುದಾನ	ನಿಗಧಿತ ಆರ್ಥಿಕ ಗುರಿ	ಆರ್ಥಿಕ ಸಾಧನೆ	ಶೇಕಡವಾರು ಸಾಧನೆ
1	ದೇವದಾಸಿ ಪುನರ್ವಸತಿ	614.00	614.00	604.00	98.37
2	ದೇವದಾಸಿ ಮಾಸಾಶನ	5423.40	5423.40	4971.45	91.66
3	ಉದ್ಯೋಗಿನಿ ಸರ್ಕಾರದಿಂದ ಬಿಡುಗಡೆ ರೂ.1000.00 (ಲಕ್ಷಗಳು) ನಿಗಮದ ಉಳಿಕೆ ಹಣ ರೂ.1000.00	2000.00	2000.00	2000.00	100.00
4	ಕಿರುಸಾಲ	2500.00	2500.00	650.00	26.00
5	ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ	300.00	300.00	220.76	73.58
6	ಚೇತನಾ	400.00	400.00	263.90	65.97
7	ಕೆ.ಎಸ್.ಎಫ್.ಸಿ ಮುಖಾಂತರ ಬಡ್ಡಿ ಸಹಾಯಧನ ಸರ್ಕಾರದಿಂದ ಬಿಡುಗಡೆ ರೂ.2550.00 (ಲಕ್ಷಗಳು) ನಿಗಮದ ಉಳಿಕೆ ಹಣ ರೂ.2450.00 (ಲಕ್ಷಗಳು)	5000.00	5000.00	5000.00	100.00
8	ಧನಶ್ರೀ	200.00	200.00	152.25	76.12

ಅನುಬಂಧ-2

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

- ಕುಟುಂಬದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಉಂಟಾದಾಗ, ನ್ಯಾಯಾಲಯದ ಮುಖಾಂತರ ಮಹಿಳೆಯರಿಗೆ ಆರ್ಥಿಕ ಪರಿಹಾರ, ರಕ್ಷಣಾ ಆದೇಶ, ವಾಸದ ಆದೇಶ, ಮಕ್ಕಳ ವಶ, ತಾತ್ಕಾಲಿಕ ಆಶ್ರಯ, ವೈದ್ಯಕೀಯ ಹಾಗೂ ಕಾನೂನು ನೆರವನ್ನು ಒದಗಿಸಲು ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005 ಹಾಗೂ ನಿಯಮ 2006ನ್ನು ಅನುಷ್ಠಾನಗೊಳಿಸಲಾಗುತ್ತಿದೆ.
- ಪ್ರಸ್ತುತ 47 ತಾಲ್ಲೂಕುಗಳಲ್ಲಿ ಮಾತ್ರ ಪ್ರತ್ಯೇಕ ಸಂರಕ್ಷಣಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಉಳಿದ ತಾಲ್ಲೂಕುಗಳಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳೇ ಸಂರಕ್ಷಣಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜಿಲ್ಲಾ ಮಟ್ಟದಲ್ಲಿ 30 ಜಿಲ್ಲೆಗಳ ಉಪನಿರ್ದೇಶಕರು ಸಂರಕ್ಷಣಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಂತ್ರಸ್ಥ ಮಹಿಳೆಯರು ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಸಂಪರ್ಕಿಸಿ ನೆರವು/ ಪರಿಹಾರ ಪಡೆದುಕೊಳ್ಳಬಹುದಾಗಿದೆ. 116 ಸೇವಾ ಸಂಸ್ಥೆಗಳು, 52 ಸ್ವಾಧಾರ ಗೃಹಗಳನ್ನು, ಆಶ್ರಯ ಒದಗಿಸುವ ಕೇಂದ್ರಗಳನ್ನಾಗಿ ಕಾಯ್ದೆಯಡಿ ನೋಂದಾಯಿಸಲಾಗಿದೆ. ಸದರಿ ಕಾಯ್ದೆಯಡಿ ಕೌಟುಂಬಿಕ ಸಮಸ್ಯೆಗಳಿಗೆ ರಕ್ಷಣಾ ಆದೇಶ, ವಾಸಸ್ಥಳದ ಆದೇಶ, ಆರ್ಥಿಕ ಪರಿಹಾರ, ಮಕ್ಕಳ ಅಭಿರಕ್ಷೆಗೆ ಆಜ್ಞೆ, ವೈದ್ಯಕೀಯ ಸೌಲಭ್ಯ, ಮಧ್ಯಂತರ ಮತ್ತು ಅಂತಿಮ ಆದೇಶಗಳನ್ನು ವ್ಯಾಪ್ತಿ ಪ್ರದೇಶದ ಜೆ.ಎಂ.ಎಫ್.ಸಿ. ನ್ಯಾಯಾಲಯದಿಂದ ಪಡೆಯಬಹುದಾಗಿದೆ.
- ಅರಿವು ಮೂಡಿಸುವ ಬಗ್ಗೆ : ಕಾನೂನು ಸೇವಾ ಪ್ರಾಧಿಕಾರದಿಂದ ಸಾರ್ವಜನಿಕರಿಗೆ ಡಿ.ವಿ. ಕಾಯ್ದೆಯ ಬಗ್ಗೆ ಹಾಗೂ ಕಾನೂನುಗಳ ಬಗ್ಗೆ ಅರಿವು ಮೂಡಿಸಲು ಶಿಬಿರಗಳನ್ನು ನಡೆಸಲಾಗುತ್ತದೆ.
- ಗ್ರಾಮ ಪಂಚಾಯತ್ ಮಟ್ಟದಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಡಿ.ವಿ.ಕಾಯ್ದೆ ಕುರಿತು ಕಾರ್ಯಾಗಾರ ನಡೆಸಲಾಗುತ್ತದೆ.
- ಬೀದಿ ನಾಟಕ, ಫ್ಲೆಕ್ಸ್ ಮೂಲಕ ಯೋಜನೆಗಳ ಕುರಿತು ಅರಿವು ಮೂಡಿಸಲಾಗುತ್ತಿದೆ.

ರಾಜ್ಯ ಮಹಿಳಾ ಆಯೋಗ

- ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ) ಅಧಿನಿಯಮ 2013.
- ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005, ನಿಯಮ 2006
- ವರದಕ್ಷಿಣೆ ನಿಷೇಧ ಅಧಿನಿಯಮ 1961
- ಕರ್ನಾಟಕ ವಿವಾಹಗಳ ನೋಂದಣಿ ಅಧಿನಿಯಮ 1976
- ಹಿಂದೂ ವಿವಾಹ ಕಾಯ್ದೆ 1955, ವಿವಾಹ ವಿಚ್ಛೇಧನ ಪಡೆಯುವ ಹಕ್ಕು ಕಲಂ13
- ಮಹಿಳೆಯರನ್ನು ಅಸಭ್ಯ ರೀತಿಯಲ್ಲಿ ಪ್ರತಿಬಿಂಬಿಸುವ ವಿರುದ್ಧ ಕ್ರಮ ಕೈಗೊಳ್ಳುವ ಅಧಿನಿಯಮ 1986.
- ಮಹಿಳೆಯರನ್ನು ಆಕ್ರಮ ಸಾಗಾಣಿಕೆ ನಿಷೇಧ ಕಾಯ್ದೆ 1956
- ಕರ್ನಾಟಕ ದೇವದಾಸಿ ನಿರ್ಭಂದಿಸುವ ಅಧಿನಿಯಮ 1982

ರಾಜ್ಯದಲ್ಲಿ ಮಹಿಳೆಯರ ರಕ್ಷಣೆಗಾಗಿ ರೂಪಿಸಿರುವ ಕಾನೂನುಗಳ ಬಗ್ಗೆ ಕಾನೂನು ಅರಿವು ಕಾರ್ಯಕ್ರಮದ ಮೂಲಕ ಮಹಿಳೆಯರ ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯ ಮತ್ತಿತರ ದುರ್ನಡತೆಗಳನ್ನು ಹತ್ತಿಕ್ಕಲು ಮಹಿಳೆಯರ ಸುರಕ್ಷತೆಗಾಗಿ ಕೈಗೊಂಡ ಕ್ರಮಗಳು.

ಅನುಬಂಧ-3

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ಕ್ರಿಯಾ ಯೋಜನೆಯ ವಿವರ

ಕ್ರ ಸಂ.	ಯೋಜನೆಯ ಹೆಸರು	ಕ್ರಿಯಾ ಯೋಜನೆಯ ವಿವರ
1.	ಕೇಂದ್ರ ಪುರಸ್ಕೃತ ಐ.ಸಿ.ಡಿ.ಎಸ್.ಯೋಜನೆ (*ಕೇಂದ್ರ ಮತ್ತು ರಾಜ್ಯದ ಪಾಲು -60:40*) 2211-00-102-0-22 (TP)	ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, 01 ಅಂಕಿ ಅಂಶಗಳ ಸಹಾಯಕರು ಹಾಗೂ ಮೇಲ್ವಿಚಾರಕಿಯರ ವೇತನ (25:75) ಉಳಿದ ಎಲ್ಲಾ ಸಿಬ್ಬಂದಿಗಳ ವೇತನವನ್ನು ಶೇ.100 ರಷ್ಟು ರಾಜ್ಯ ಸರ್ಕಾರ ಭರಿಸುತ್ತದೆ. (0:100) ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಗೌರವಧನ ಹಾಗೂ ಆಡಳಿತ ವೆಚ್ಚದಡಿ (60:40) ಆಗಿರುತ್ತದೆ.
2.	ಕೇಂದ್ರ ಪುರಸ್ಕೃತ ಐ.ಸಿ.ಡಿ.ಎಸ್.ಯೋಜನೆ (ಕೇಂದ್ರ ಮತ್ತು ರಾಜ್ಯದ ಪಾಲು -60:40) 2211-00-102-0-02 (ZP)	ಜಿಲ್ಲಾ ನಿರೂಪಣಾಧಿಕಾರಿಗಳು ಹಾಗೂ 1 ಅಂಕಿ ಅಂಶಗಳ ಸಹಾಯಕರ ವೇತನ (25:75) ಉಳಿದ ಎಲ್ಲಾ ಸಿಬ್ಬಂದಿಗಳ ವೇತನ (0:100) ಹಾಗೂ ಆಡಳಿತ ವೆಚ್ಚದಡಿ (60:40) ಆಗಿರುತ್ತದೆ.
3.	ರಾಜ್ಯ ಐ.ಸಿ.ಡಿ.ಎಸ್. ಘಟಕ (0:100) 2235-02-102-0-04	ಪ್ರಧಾನ ಕಛೇರಿ ಸಮಗ್ರ ಶಿಶು ಅಭಿವೃದ್ಧಿ ಯೋಜನಾ ಘಟಕದ ಅಧಿಕಾರಿ/ಸಿಬ್ಬಂದಿಗಳ ವೇತನ, ಭತ್ಯೆಗಳು, ಕಛೇರಿ ವೆಚ್ಚ, ಬಾಹ್ಯ ಮೂಲ ಸಿಬ್ಬಂದಿಗಳ ಗೌರವಧನ, ಅಧ್ಯಯನ, ಮೌಲ್ಯಮಾಪನ ಹಾಗೂ ಇಲಾಖೆಯ ಕಾನೂನು ಸಲಹೆಗಾರರ ಗೌರವಧನವನ್ನು ಒಳಗೊಂಡಿರುತ್ತದೆ. ಈ ಸಂಪೂರ್ಣ ಮೊತ್ತವನ್ನು ರಾಜ್ಯ ಸರ್ಕಾರವೇ ಶೇಕಡ 100ರ ಅನುಪಾತದಲ್ಲಿ ಭರಿಸುತ್ತದೆ.
4.	ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮ 2235-00-101-0-61 (50:50)	ಸದರಿ ಯೋಜನೆಯಡಿ ಕೇಂದ್ರ ಮತ್ತು ರಾಜ್ಯ ಸರ್ಕಾರವು 50:50 ರ ಅನುಪಾತದಂತೆ (55947.45+55947.45) 6 ತಿಂಗಳಿನಿಂದ 6 ವರ್ಷದ ಸಾಮಾನ್ಯ ಮಕ್ಕಳಿಗೆ ರೂ.8/-ರ ಘಟಕವೆಚ್ಚ, ಅಪೌಷ್ಟಿಕ ಮಕ್ಕಳಿಗೆ ರೂ.12/-ರ ಘಟಕವೆಚ್ಚ, ಕಿಶೋರಿಯರು ಗರ್ಭಿಣಿ, ಬಾಣಂತಿಯರು, ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ರೂ. 9.50 ರ ಘಟಕವೆಚ್ಚದಂತೆ ಅನುದಾನವನ್ನು ಒದಗಿಸಿದ್ದು ಪೂರಕ ಪೌಷ್ಟಿಕ ಆಹಾರಕ್ಕಾಗಿ ವೆಚ್ಚ ಭರಿಸಲಾಗುತ್ತದೆ. ರಾಜ್ಯ ಸರ್ಕಾರವು ಮಾತೃಪೂರ್ಣ, ಮೊಟ್ಟೆ ನೀಡುವ(ಸೃಷ್ಟಿ) ಯೋಜನೆ, ಕ್ಷೀರ ಭಾಗ್ಯ ಕಾರ್ಯ ಕ್ರಮಗಳಿಗಾಗಿ ರೂ.77276.63 ಅನುದಾನವನ್ನು ಒದಗಿಸಿದೆ.
5.	ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ತರಬೇತಿ ಕಾರ್ಯಕ್ರಮ 2235-02-102-0-05 (60:40)	21 ಅಂಗನವಾಡಿ ತರಬೇತಿ ಕೇಂದ್ರಗಳು ಹಾಗೂ ಒಂದು ಮೇಲ್ವಿಚಾರಕಿಯರ ತರಬೇತಿ ಕೇಂದ್ರ ಕಾರ್ಯ ನಿರ್ವಹಿಸುತ್ತಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರವು ಶೇ. 60:40 ರ ಅನುಪಾತದಂತೆ ಅನುದಾನವನ್ನು ಒದಗಿಸುತ್ತದೆ. ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರವು ರೂ. 50.00ಲಕ್ಷಗಳ ಅನುದಾನವನ್ನು ಒದಗಿಸಿದ್ದು ಅದರಂತೆ ರಾಜ್ಯ ಸರ್ಕಾರವು ಆಯವ್ಯಯ ಹಂಚಿಕೆಯನ್ನು ನಿಗದಿಪಡಿಸಲು ಮತ್ತು ರಾಜ್ಯದ ಪಾಲು ಶೇ: 40 ರಂತೆ ರೂ. 20.00 ಲಕ್ಷಗಳನ್ನು ಒದಗಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕ್ರಮವಹಿಸಲಾಗುವುದು. ಅಂಗನವಾಡಿ ಮೇಲ್ವಿಚಾರಕಿಯರ ವೃತ್ತಿ ತರಬೇತಿಗಾಗಿ ಪ್ರತಿ ತರಬೇತಿಗೆ (25 ಶಿಕ್ಷಣಾರ್ಥಿಗಳಿಗೆ 32 ದಿನಗಳು ರೂ263.500 ಗಳನ್ನು, ಅಂಗನವಾಡಿ ಕಾರ್ಯಕರ್ತೆಯರ (35 ಶಿಕ್ಷಣಾರ್ಥಿಗಳು 32 ದಿನಗಳು) ವೃತ್ತಿ ತರಬೇತಿಗಾಗಿ ಪ್ರತಿ ತರಬೇತಿಗೆ ರೂ. 2,40,250/-ಗಳನ್ನು ಹಾಗೂ ಸಹಾಯಕಿಯರ ಓರಿಯಂಟೇಶನ್ ತರಬೇತಿಗೆ (50 ಶಿಕ್ಷಣಾರ್ಥಿಗಳಿಗೆ 8 ದಿನಗಳು) ರೂ.90,000/-ಗಳನ್ನು ಪ್ರತಿ ತರಬೇತಿಗೆ ಒದಗಿಸಲಾಗುತ್ತದೆ.

6.	ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ (ಬಾಲಸಂಜೀವಿನಿ) 2235-02-102-0-30 (0:100)	ಅಂಗನವಾಡಿ ಕೇಂದ್ರಗಳಲ್ಲಿ ನೊಂದಣಿಯಾಗುವ ಮಕ್ಕಳಲ್ಲಿ, ತೀವ್ರ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಔಷದೋಪಾಚಾರಕ್ಕಾಗಿ/ ಚಿಕಿತ್ಸಾಹಾರಕ್ಕಾಗಿ ಪ್ರತಿ ಮಗುವಿಗೆ ವರ್ಷಕ್ಕೆ ರೂ. 2000/- ಗಳ ವೆಚ್ಚ ಭರಿಸಲಾಗುವುದು.
7.	ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ ಮರಣ ಪರಿಹಾರ 2235-02-103-0-99-100 (0:100)	ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರು ಸೇವಾ ವಧಿಯಲ್ಲಿ ಮರಣ ಹೊಂದಿದ ಸಂದರ್ಭದಲ್ಲಿ ರೂ. 50,000/- ಗಳನ್ನು ಹಾಗೂ ಕಾರ್ಯಕರ್ತೆ/ ಸಹಾಯಕಿಯರಿಗೆ ಗುರುತರವಾದ ಕಾಯಿಲೆಗಳ ವೈದ್ಯಕೀಯ ವೆಚ್ಚಕ್ಕಾಗಿ ಗರಿಷ್ಠ ಪರಿಹಾರ ಧನ ರೂ. 50,000/- ಗಳನ್ನು ನೀಡಲಾಗುವುದು.
8.	ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ ಹೊಸ ಪಿಂಚಣಿ ವ್ಯವಸ್ಥೆ (2235-60-103-0-01) (0:100)	ಸದರಿ ಯೋಜನೆಯಡಿ 18-55 ವರ್ಷದ ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿರಿಂದ ಕ್ರಮವಾಗಿ ರೂ. 150/- ಹಾಗೂ ರೂ. 84/-ಗಳನ್ನು ಮಾಹೆಯಾನ ವಂತಿಗೆ ರೂಪದಲ್ಲಿ ವಸೂಲಿ ಮಾಡಿ ಅಷ್ಟೇ ಮೊತ್ತದ ವಂತಿಗೆಯನ್ನು ಸರ್ಕಾರ ಭರಿಸುತ್ತದೆ. ಸದರಿ ಯೋಜನೆಯಡಿ ಕನಿಷ್ಠ ರೂ. 500/- ಕಾರ್ಯಕರ್ತೆಯರಿಗೆ ಹಾಗೂ ರೂ. 350/- ಸಹಾಯಕಿಯರಿಗೆ ಪಿಂಚಣಿ ನೀಡಲಾಗುವುದು.
9.	ಸಬಲ (SAG) ಪ್ರಾಯಪೂರ್ವ ಬಾಲಕಿಯರ ಯೋಜನೆ 2235-02-103-0-46-059 (60:40) (ಸಿ.ಎಸ್.ಎಸ್)	11-14 ವರ್ಷದ ಒಳಗಿನ ಶಾಲೆಯಿಂದ ಹೊರಗುಳಿದ ಮಕ್ಕಳ ಪೌಷ್ಠಿಕ ಕಾರ್ಯಕ್ರಮಕ್ಕಾಗಿ ಪ್ರತಿ ಫಲಾನುಭವಿಗಳಿಗೆ ಘಟಕ ವೆಚ್ಚ ರೂ. 9.50/-ರಂತೆ ವಾರ್ಷಿಕ 300 ದಿನಗಳಿಗೆ ರೂ. 487.52 ಲಕ್ಷಗಳನ್ನು ನಿಗದಿಪಡಿಸಲಾಗಿದೆ. (50:50) ಪೌಷ್ಠಿಕೇತರ ಕಾರ್ಯಕ್ರಮಕ್ಕಾಗಿ ಪ್ರತಿ ಯೋಜನೆಗೆ ರೂ.1.10ಲಕ್ಷಗಳಂತೆ ರೂ.224.40 ಲಕ್ಷ ಅನುದಾನವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ 60:40ರ ಅನುಪಾತದಲ್ಲಿ ಒದಗಿಸಲಾಗುತ್ತಿದೆ. ಈ ಯೋಜನೆಯ ಫಲಾನುಭವಿಗಳಿಗೆ ಐ.ಸಿ.ಡಿ.ಎಸ್. ಯೋಜನೆಯ ಪೂರಕ ಪೌಷ್ಠಿಕ ಕಾರ್ಯಕ್ರಮದಡಿ ಆಹಾರ ಒದಗಿಸಲಾಗುತ್ತಿದೆ. ಪೌಷ್ಠಿಕೇತರ ಕಾರ್ಯಕ್ರಮ (Non-Nutrition Components): ಈ ಕಾರ್ಯಕ್ರಮದಡಿ ಪ್ರಾಯಪೂರ್ವ ಬಾಲಕಿಯರಿಗೆ ಪೌಷ್ಠಿಕ ಆಹಾರ ಒದಗಿಸುವುದು. ಕಬ್ಬಿಣಾಂಶದ ಮಾತ್ರೆಗಳನ್ನು ನೀಡುವುದು. ಪೌಷ್ಠಿಕತೆ ಮತ್ತು ಆರೋಗ್ಯ ಶಿಕ್ಷಣ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಮರಳಿ ಶಾಲೆಗೆ ದಾಖಲಿಸಲು, ಸೇತುಬಂಧ ಕಲಿಕೆ/ಕೌಶಲ್ಯ ತರಬೇತಿಗಳ ಮೂಲಕ ಮುಖ್ಯವಾಹಿನಿಗೆ ತರುವುದು. ಮನೆ ನಿರ್ವಹಣೆ ಮತ್ತು ಜೀವನ ಕೌಶಲ್ಯ ಶಿಕ್ಷಣ ಸಾರ್ವಜನಿಕ ಸೇವೆಗಳ ಬಗ್ಗೆ ಸಲಹೆ ಮಾರ್ಗದರ್ಶನ ನೀಡುವುದು.
10.	ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ 2235-02-103-0-61 (60:40) (ಸಿ.ಎಸ್.ಎಸ್)	ಪ್ರತಿ ಫಲಾನುಭವಿಗೆ ರೂ. 5,000/ಗಳನ್ನು 3 ಕಂತುಗಳಲ್ಲಿ ಸದರಿ ಯೋಜನೆಯಡಿ ಫಲಾನುಭವಿ ಗಳಿಗೆ ಪ್ರತಿ ದಿನ ಪಿಎಫ್ಎಂಎಸ್ ಮೂಲಕ ನೇರ ನಗದು ವರ್ಗಾವಣೆ ಮಾಡಲಾಗುವುದು. ನಿಗದಿಪಡಿಸಲಾದ ಒಟ್ಟಾರೆ ಅನುದಾನದಲ್ಲಿ ರೂ. 570.00 ಲಕ್ಷಗಳ (ಶೇ. 1ರಷ್ಟು) ಅನುದಾನವನ್ನು ಆಡಳಿತ ವೆಚ್ಚಕ್ಕಾಗಿ ಮೀಸಲಿಡಲಾಗಿದೆ.
11.	ರಾಷ್ಟ್ರೀಯ ಶಿಶು ಪಾಲನಾ ಯೋಜನೆ 2235-02-102-0-13-103	ಉದ್ಯೋಗಸ್ಥ ಮಾತೆಯರ ಮಕ್ಕಳ ಪಾಲನೆ, ಪೋಷಣೆಗಾಗಿ ಶಿಶು ಪಾಲನಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ತಾಯಂದಿರು ಕೆಲಸದ ಸಮಯದಲ್ಲಿ ತಮ್ಮ 0-6 ವರ್ಷದ ಮಕ್ಕಳನ್ನು ಸುರಕ್ಷಿತವಾಗಿ ಬಿಟ್ಟುಹೋಗಲು ಅನುಕೂಲವಾಗುವಂತೆ ಹಾಗೂ ಮಕ್ಕಳ ಸಮಗ್ರ ಬೆಳವಣಿಗೆಗೊಸ್ಕರ, ಶಿಶುಪಾಲನಾ ಕೇಂದ್ರಗಳ ಉದ್ದೇಶವಾಗಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ 126 ಸ್ವಯಂಸೇವಾ ಸಂಸ್ಥೆಗಳ ಮೂಲಕ 591 ಶಿಶುಪಾಲನಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಪ್ರತಿ ಶಿಶುಪಾಲನಾ ಕೇಂದ್ರದಲ್ಲಿ 25 ಮಕ್ಕಳಿದ್ದು ಪ್ರತಿ ಮಗುವಿಗೆ ಪ್ರತಿ ದಿನಕ್ಕೆ ರೂ. 12/- ರಂತೆ ಪೂರಕ ಪೌಷ್ಠಿಕ ಆಹಾರಕ್ಕಾಗಿ ಖರ್ಚು ಭರಿಸಲಾಗುತ್ತದೆ. ಉಳಿದಂತೆ ಮೆಡಿಸಿನ್ ಕಿಟ್‌ಗಾಗಿ ರೂ. 1000/-, ಶಾಲಾಪೂರ್ವ ಶಿಕ್ಷಣ ಕಿಟ್

		ಗಾಗಿ ರೂ. 2000/- ಹಾಗೂ ಸಿಬ್ಬಂದಿಗಳ ಗೌರವಧನ ಒಳಗೊಂಡಂತೆ ಕ್ರಮವಾಗಿ ಕೇಂದ್ರ, ರಾಜ್ಯ ಹಾಗೂ ಸ್ವಯಂಸೇವಾ ಸಂಸ್ಥೆಗಳು 60:30:10ರ ಅನುಪಾತದಂತೆ ವೆಚ್ಚ ಭರಿಸಲು ಸ್ವಯಂಸೇವಾ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುತ್ತದೆ.
12.	ನಬಾರ್ಡ್ ಅಡಿಯಲ್ಲಿ ಅಂಗನವಾಡಿ ಕಟ್ಟಡಗಳ ನಿರ್ಮಾಣ 4235-02-102-0-01-436 (0:100)	2019-20ನೇ ಸಾಲಿನಲ್ಲಿ ಮಳೆಯಿಂದ ಹಾನಿಗೊಳಗಾದ 842 ಕಟ್ಟಡಗಳನ್ನು ನಿರ್ಮಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಕಟ್ಟಡಗಳನ್ನು ನಿರ್ಮಿಸಲು ಏಜೆನ್ಸಿಯನ್ನು ಗುರುತಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಆದೇಶ ನಿರೀಕ್ಷಿಸಲಾಗಿದೆ. ಈ 842 ಕಟ್ಟಡ ನಿರ್ಮಿಸಲು ರೂ. 13778.00 ಲಕ್ಷಗಳ ಅನುದಾನ ಅವಶ್ಯಕತೆಯಿರುತ್ತದೆ. ಪ್ರಸ್ತುತ ರೂ. 5000.00 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಪ್ರತಿ ಘಟಕದ ವೆಚ್ಚ ರೂ. 17.00 ಲಕ್ಷದಂತೆ 294 ಕಟ್ಟಡಗಳನ್ನು ನಿರ್ಮಿಸಬಹುದಾಗಿರುತ್ತದೆ.
13.	ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಅಂಗನವಾಡಿ ಕಟ್ಟಡಗಳ ನಿರ್ಮಾಣ 4235-02-102-0-02-133	ಅಂದಾಜು ಘಟಕ ವೆಚ್ಚ ರೂ.18.00 ಲಕ್ಷದ ಪ್ರಕಾರ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಭೌತಿಕ ಗುರಿ ನಿಗದಿಪಡಿಸಲಾಗಿದೆ.
14.	ಅಂಗನವಾಡಿ ಕಟ್ಟಡಗಳ ನಿರ್ವಹಣೆ (ಜಿಲ್ಲಾ ವಲಯ) 2211-00-102-0-61	ಸ್ವಂತ ಕಟ್ಟಡವನ್ನು ಹೊಂದಿರುವ ಅಂಗನವಾಡಿ ಕೇಂದ್ರಗಳ ದುರಸ್ತಿ, ಸುಣ್ಣಬಣ್ಣ ಮತ್ತು ನಿರ್ವಹಣೆಗಾಗಿ ಜಿಲ್ಲಾ ವಲಯ ಕಾರ್ಯಕ್ರಮದಡಿ ಪ್ರತಿ ಘಟಕಕ್ಕೆ ರೂ. 0.50 ಲಕ್ಷಗಳಂತೆ ವೆಚ್ಚ ಭರಿಸಲಾ ಗುವುದು. ಅರ್ಹ ಅಂಗನವಾಡಿ ಕೇಂದ್ರಗಳನ್ನು ಗುರುತಿಸಿ ತಾಲ್ಲೂಕು ಪಂಚಾಯತ್‌ಗಳಲ್ಲಿ ಕ್ರಿಯಾ ಯೋಜನೆ ಅನುಮೋದಿಸಲಾಗುತ್ತಿದೆ.
15.	ಅಂಗನವಾಡಿ ಕಟ್ಟಡಗಳ ನಿರ್ವಹಣೆ (2235-02-102-0-40) (60:40) (ರಾಜ್ಯ ವಲಯ)	ಅಂಗನವಾಡಿ ಕೇಂದ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರತಿ ಘಟಕಕ್ಕೆ ರೂ. 1.00 ಲಕ್ಷದಂತೆ ಅನುದಾನವನ್ನು ನಿಗದಿಪಡಿಸಲಾಗಿದೆ.
16.	ಅಂಗನವಾಡಿಗಳ ಉನ್ನತೀಕರಣ (4235-02-102-1-03-125) (ರಾಜ್ಯ ವಲಯಕಾರ್ಯಕ್ರಮ) (60:40)	2020-21ನೇ ಸಾಲಿನಲ್ಲಿ ಎಪಿಐಪಿನಲ್ಲಿ 500 ಅಂ.ಕಟ್ಟಡಗಳ ಉನ್ನತೀಕರಣಕ್ಕೆ ಪ್ರಸ್ತಾಪಿಸಲಾಗಿರುತ್ತದೆ. ಪ್ರತೀ ಕಟ್ಟಡಕ್ಕೆ ಘಟಕ ವೆಚ್ಚ ರೂ.2.00 ಲಕ್ಷಗಳಾಗಿರುತ್ತದೆ.
17.	ಅಂಗನವಾಡಿ ಕಟ್ಟಡಗಳ ನಿರ್ಮಾಣ (ಐಸಿಡಿಎಸ್-ನರೇಗಾ) 4235-02-102-0-06	ನರೇಗಾ ಯೋಜನೆಯಡಿ ಘಟಕ ವೆಚ್ಚ ರೂ.10 ಲಕ್ಷಗಳಲ್ಲಿ (ನರೇಗಾ - ರೂ.5.00 ಲಕ್ಷ + ಇಲಾಖೆ ರೂ.5.00 ಲಕಗಳ್ಲು) ಅಂಗನವಾಡಿ ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿದೆ.
18.	ನಗರ ಅಂಗನವಾಡಿಗಳ ಮೇಲ್ದರ್ಜೆಕರಣ (2235-02-102-0-44)	2017-18ನೇ ಸಾಲಿನಲ್ಲಿ ನಗರಪ್ರದೇಶದ ಕೊಳಗೇರಿಗಳ-100 2018-19ನೇ ಸಾಲಿನ ನಗರ ಪ್ರದೇಶದ-250 ಹಾಗೂ 2019-20ನೇ ಸಾಲಿನಲ್ಲಿ ನಗರ ಪ್ರದೇಶದ- 100 ಅಂಗನವಾಡಿ ಕೇಂದ್ರಗಳ ಸ್ಥಾಪನೆಗೆ ಮಂಜೂರಾತಿ ದೊರೆತಿದ್ದು, ಸದರಿ ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಪೂರಕ ಪೌಷ್ಠಿಕ ಆಹಾರ, ಗೌರವಧನ ಹಾಗೂ ಇತರೆ ಕಾರ್ಯಕ್ರಮಗಳಿಗೆ ಅನುದಾನದ ವೆಚ್ಚ ಭರಿಸಲಾಗುವುದು.
19.	ಪೋಷಣ ಅಭಿಯಾನ (ರಾಷ್ಟ್ರೀಯ ಪೌಷ್ಠಿಕಾಂಶ ಅಭಿಯಾನ) 2235-02-102-0-43-059	ರಾಜ್ಯಮಟ್ಟದ, ಜಿಲ್ಲಾ ಮಟ್ಟದ, ಮತ್ತು ತಾಲ್ಲೂಕು ಮಟ್ಟದ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ಇಂಟಿಗ್ರೇಟೆಡ್ ಲರ್ನಿಂಗ್ ಅಪ್ರೋಚ್ (ಐ.ಎಲ್.ಎ) 21 ಮಾಡ್ಯುಲ್‌ಗಳ ಬಗ್ಗೆ ತರಬೇತಿ ನೀಡಲಾಗುವುದು. ಐ.ಇ.ಸಿ., ಫ್ಲೆಕ್ಸಿ ಫಂಡ್ ಮತ್ತು ಇನ್ನೊವೇಟಿವ್ ಫಂಡ್ ಅಡಿಯಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ವೆಚ್ಚ ಭರಿಸಲಾಗುವುದು.
20.	ಅಂಗನವಾಡಿ ಕಟ್ಟಡಗಳ ನಿರ್ಮಾಣ (ಅನುಸೂಚಿತ ಜಾತಿಗಳ ಉಪ ಯೋಜನೆ	ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರ ಪರಿಷತ್ ಸಭೆಯಲ್ಲಿ ಅನುಮೋದಿಸಿರುವಂತೆ ಎಸ್.ಸಿ.ಎಸ್.ಪಿ.

	ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ (4235-02-102-0-05)	ಯಡಿ 17 ಅಂಗನವಾಡಿ ಕಟ್ಟಡ ಹಾಗೂ ಟಿ.ಎಸ್.ಪಿ. ಯಡಿ 2 ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸುವ ಗುರಿಯನ್ನು ಹೊಂದಲಾಗಿದೆ.
21.	ಸ್ತ್ರೀಶಕ್ತಿ ಯೋಜನೆ 2235-02-103-0-41	ಈ ಯೋಜನೆಯಡಿ ಸ್ತ್ರೀಶಕ್ತಿ ಗುಂಪುಗಳಿಗೆ ಸುತ್ತುನಿಧಿ, ಗುಂಪಿನ ಸದಸ್ಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ, ಸ್ತ್ರೀಶಕ್ತಿ ಗುಂಪುಗಳ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸಲು ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಗಳನ್ನು ಏರ್ಪಡಿಸಲಾಗುತ್ತಿದೆ ಹಾಗೂ ಸ್ತ್ರೀಶಕ್ತಿ ಸಮಾವೇಶಗಳನ್ನು ನಡೆಸಲಾಗುತ್ತಿದೆ. ಸ್ತ್ರೀಶಕ್ತಿ ಗುಂಪುಗಳನ್ನು ಪ್ರೋತ್ಸಾಹಿಸುವ ಸಲುವಾಗಿ ರಾಜ್ಯ ಮಟ್ಟದಲ್ಲಿ 3 ಅತ್ಯುತ್ತಮ ಸ್ತ್ರೀಶಕ್ತಿ ಗುಂಪುಗಳಿಗೆ ಹಾಗೂ 3 ಸ್ತ್ರೀಶಕ್ತಿ ತಾಲ್ಲೂಕು ಒಕ್ಕೂಟಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ ಹಾಗೂ ಯಶೋಧರಮ್ಮ ದಾಸಪ್ಪರವರ ಸ್ಮರಣಾರ್ಥ ಪ್ರತಿ ಕಂದಾಯ ವಿಭಾಗದಲ್ಲಿ 1 ಗುಂಪಿಗೆ ಪ್ರಶಸ್ತಿ ನೀಡಲಾಗುತ್ತಿದೆ.
22.	ಸಾಂತ್ವನ ಯೋಜನೆ 2235-02-103-0-99-100	ಸಮಾಜದಲ್ಲಿ ವರದಕ್ಷಿಣೆ ಕಿರುಕುಳ, ಲೈಂಗಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯ, ಅತ್ಯಾಚಾರಕ್ಕೊಳಗಾದ ಮಹಿಳೆಯರಿಗೆ ಕಾನೂನು ನೆರವು, ತಾತ್ಕಾಲಿಕ ಆಶ್ರಯ ಹಾಗೂ ಮುಖ್ಯವಾಗಿ ಕೌಟುಂಬಿಕ ಸಮಾಲೋಚನೆ ಒದಗಿಸಲು ಸಾಂತ್ವನ ಕೇಂದ್ರಗಳನ್ನು ತೆರೆಯಲಾಗಿದೆ. ಪ್ರಸ್ತುತ 194 ಸಾಂತ್ವನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.
23.	ಸ್ವಾಧಾರ ಗೃಹ 2235-02-103-0-64-059	ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗಾಗಿ ಆಶ್ರಯ, ಆಹಾರ, ಬಟ್ಟೆ, ತರಬೇತಿ ಹಾಗೂ ಶಿಕ್ಷಣ ನೀಡುವುದರ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ ಸಶಕ್ತರಾಗುವಂತೆ ಮಾಡುವ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕೇಂದಗಳಲ್ಲಿ ನೊಂದವರಿಗೆ ಮುಖ್ಯವಾಗಿ ತಾತ್ಕಾಲಿಕ ಆಶ್ರಯ ಒದಗಿಸುವ ಕೇಂದ್ರಗಳಾಗಿದೆ. ರಾಜ್ಯದಲ್ಲಿ ಪ್ರಸ್ತುತ 52 ಸ್ವಾಧಾರಗೃಹ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.
24.	ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005 ನಿಯಮ 2006 2235-02-103-0-52	ಕೌಟುಂಬಿಕ ಸಂಬಂಧದಿಂದ ದೈಹಿಕ, ಲೈಂಗಿಕ, ಆರ್ಥಿಕ ಭಾವನಾತ್ಮಕ ಹಿಂಸೆಗಳನ್ನು ಅನುಭವಿಸುತ್ತಿರುವ ಮಹಿಳೆಯರನ್ನು ಸಂರಕ್ಷಿಸುವುದು ಮುಖ್ಯ ಉದ್ದೇಶವಾಗಿದೆ.
25.	ಟ್ರಾನ್ಸಿಟ್ ಹಾಸ್ಟೆಲ್ 2235-02-103-0-62-059	ವಿವಿಧ ಕಡೆಗಳಿಂದ ಬೆಂಗಳೂರಿಗೆ ಉದ್ಯೋಗ ಮತ್ತು ಸಂದರ್ಶನ, ಮತ್ತು ಇತರೆ ಉದ್ದೇಶಗಳಿಗಾಗಿ ಬೆಂಗಳೂರಿಗೆ ಬರುವ ಮಹಿಳೆಯರಿಗೆ ಉಚಿತ ಊಟ ಮತ್ತು ವಸತಿ ಸೌಲಭ್ಯವನ್ನು 13 ಟ್ರಾನ್ಸಿಟ್ ಹಾಸ್ಟೆಲ್‌ಗಳಲ್ಲಿ ಒದಗಿಸಲಾಗುತ್ತಿದೆ.
26.	ಬಾಲಕಿಯರ ವಸತಿ ನಿಲಯ 2235-02-103-0-99-100	ಗ್ರಾಮಾಂತರ ಹಾಗೂ ಹಿಂದುಳಿದ ಪ್ರದೇಶಗಳ ಹೆಣ್ಣು ಮಕ್ಕಳಲ್ಲಿ ಶಿಕ್ಷಣ ಪ್ರೋತ್ಸಾಹಿಸಲು ಹಾಗೂ ಶಾಲೆ ಬಿಡುವ ಹೆಣ್ಣುಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡಲು ರಾಜ್ಯದಲ್ಲಿ 19 ಮೆಟ್ರಿಕ್ ಪೂರ್ವ ಮತ್ತು 20 ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಗಳನ್ನು ನಡೆಸಲಾಗುತ್ತಿದೆ.
27.	ಭಾಗ್ಯಲಕ್ಷ್ಮಿ-ಸುಕನ್ಯಾ ಸಮೃದ್ಧಿ ಖಾತೆ ಯೋಜನೆ 2235-02-102-0-25	ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬದ 2 ಹೆಣ್ಣು ಮಕ್ಕಳಿಗೆ ಭಾಗ್ಯಲಕ್ಷ್ಮಿ-ಸುಕನ್ಯಾ ಸಮೃದ್ಧಿ ಖಾತೆ ಯೋಜನೆಯಡಿ ಸೌಲಭ್ಯ ಕಲ್ಪಿಸುವುದು. (ಪ್ರತಿ ಫಲಾನುಭವಿಗೆ ರೂ.3000/-ದಂತೆ 15 ವರ್ಷಗಳ ವರೆಗೆ ಒಟ್ಟು ರೂ.45,000/-ಠೇವಣಿ ಹೂಡಬೇಕಾಗಿರುತ್ತದೆ.

		ಫಲಾನುಭವಿಗೆ 21 ವರ್ಷಗಳ ನಂತರ ಪರಿಪಕ್ವ ಮೊತ್ತವಾಗಿ ಅಂದಾಜು ರೂ. 1.27 ಲಕ್ಷ ಲಭ್ಯವಾಗುವುದು.
28.	ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ 2235-02-102-0-27	ತಮ್ಮ ಪ್ರಾಣದ ಹಂಗನ್ನು ತೊರೆದು ಇತರರ ಪ್ರಾಣ ರಕ್ಷಣೆಯಲ್ಲಿ ಶೌರ್ಯ ಪ್ರದರ್ಶಿಸಿದ ಮಕ್ಕಳನ್ನು ಗೌರವಿಸಿ ಸನ್ಮಾನಿಸುವುದು. ಶೌರ್ಯ ಪ್ರಶಸ್ತಿ ವಿಜೇತ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ನೆರವು ಒದಗಿಸುವುದು. ಪ್ರತಿಭೆ ಹೊಂದಿರುವ ಮಕ್ಕಳನ್ನು ಗುರುತಿಸಿ ಜಿಲ್ಲಾ ಮಟ್ಟದಲ್ಲಿ ಪ್ರಶಸ್ತಿ ನೀಡುವುದು.
29.	ಮಕ್ಕಳ ದಿನಾಚರಣೆ ಕಾರ್ಯಕ್ರಮ 2235-02-102-0-99-100	ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ವ್ಯಕ್ತಿ ಮತ್ತು ಸಂಸ್ಥೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು.
30.	ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ನಿವಾರಣೆ ಕಾರ್ಯಕ್ರಮ 2235-02-102-0-24	ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಟದ ಬಗ್ಗೆ ಹೆಚ್ಚಿನ ಅರಿವು ಮೂಡಿಸುವುದು.
31.	ಉಜ್ವಲ ಯೋಜನೆ 2235-02-103-0-67	ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ತಡೆಗಟ್ಟಲು ಹಾಗೂ ವಾಣಿಜ್ಯ ಲೈಂಗಿಕ ದುರುಪಯೋಗಕ್ಕೆ ಒಳಪಟ್ಟವರನ್ನು ರಕ್ಷಣೆ, ಪುರ್ನವಸತಿ, ಪುರ್ನವಿಲೀನಗೊಳಿಸಲು ಉಜ್ವಲ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.
32.	ಬೇಟಿ ಬಚಾವೊ ಬೇಟಿ ಪಡಾವೊ 2235-02-102-0-41	ಕೇಂದ್ರ ಸರ್ಕಾರದ ಕಾರ್ಯಕ್ರಮವವಾದ ಮಗಳನ್ನು ಉಳಿಸಿ ಮಗಳನ್ನು ಓದಿಸಿ ಲಿಂಗಾನುಪಾತ ಉತ್ತಮ ಪಡಿಸುವ ಹಿನ್ನಲೆಯಲ್ಲಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದಾಗಿರುತ್ತದೆ. ಅನುಷ್ಠಾನಗೊಳ್ಳುತ್ತಿರುವ ರಾಜ್ಯದ 5 ಜಿಲ್ಲೆಗಳಿಗೆ ಕೇಂದ್ರ ಸರ್ಕಾರದಿಂದ ನೇರವಾಗಿ ಜಿಲ್ಲೆಗಳಿಗೆ ಅನುದಾನ ಬಿಡುಗಡೆಯಾಗುತ್ತದೆ.
33.	ರಾಜ್ಯ ಮಹಿಳಾ ನಿಲಯ ಮತ್ತು ಸ್ವೀಕಾರ ಕೇಂದ್ರ 2235-02-106-0-06	ಅನೈತಿಕ ವ್ಯವಹಾರಗಳ (ತಡೆಗಟ್ಟುವ) ಅಧಿನಿಯಮ 1956 ನಿಯಮ 1989ರಡಿ ರಾಜ್ಯದಲ್ಲಿ 04 ಸ್ವೀಕಾರ ಕೇಂದ್ರಗಳು ಮತ್ತು 08 ರಾಜ್ಯ ಮಹಿಳಾ ನಿಲಯಗಳು ಸರ್ಕಾರದಿಂದ ನಡೆಸಲಾಗುತ್ತಿದೆ. ಸದರಿ ಸಂಸ್ಥೆಗಳಲ್ಲಿ ನಿವಾಸಿಯರಿಗೆ ಪಾಲನೆ, ಪೋಷಣೆ, ಪುನರ್ವಸತಿಯೊಂದಿಗೆ ಊಟ, ವಸತಿ, ಬಟ್ಟೆ, ವೈದ್ಯಕೀಯ ಸೌಲಭ್ಯ, ರಕ್ಷಣೆ ಮತ್ತು ಸ್ವಯಂ ಉದ್ಯೋಗಕ್ಕೆ ಅನುಕೂಲವಾಗುವಂತೆ ತರಬೇತಿಯನ್ನು ನೀಡಲಾಗುವುದು.
34.	ನಿರ್ಗತಿಕ ಮಕ್ಕಳ ಕುಟೀರ ಯೋಜನೆ 2211-00-102-0-26	ಸದರಿ ಯೋಜನೆಯಡಿ ಅನಾಥ ಮತ್ತು ನಿರ್ಗತಿಕ ಮಕ್ಕಳ ಪಾಲನೆ/ಪೋಷಣೆ ಮಾಡುವುದು ಮುಖ್ಯ ಉದ್ದೇಶವಾಗಿರುತ್ತದೆ. ಕನಿಷ್ಠ 3 ವರ್ಷ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿರುವ ನೋಂದಾಯಿತ ಸ್ವಯಂ ಸೇವಾ ಸಂಸ್ಥೆಗಳು ಕುಟೀರ ತೆರೆಯಲು ಅವಕಾಶವಿದ್ದು, ಗರಿಷ್ಠ 25 ಮಕ್ಕಳ ಪಾಲನೆ ಹಾಗೂ ಪೋಷಣೆ ನೀಡಲಾಗುತ್ತದೆ. ಪ್ರತಿ ಮಗುವಿನ ಪಾಲನೆ ಹಾಗೂ ಪೋಷಣೆಗೆ ವಾರ್ಷಿಕವಾಗಿ ರೂ.1000/- ಗಳನ್ನು ಸಹಾಯಧನವಾಗಿ ನೀಡಲಾಗುತ್ತಿದೆ.

ರಾಜ್ಯ ಬಾಲವಿಕಾಸ ಅಕಾಡೆಮಿ, ಧಾರವಾಡ

ರಾಜ್ಯದ 0–18 ವರ್ಷದ ಒಳಗಿನ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರದಿಂದ ಅನುಮೋದನೆಗೊಂಡ ಕ್ರಿಯಾ ಯೋಜನೆಯ ಅನುಸಾರ ವಿವಿಧ ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

******

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3505
ಸದಸ್ಯರ ಹೆಸರು	:	ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)
ಉತ್ತರಿಸುವ ದಿನಾಂಕ	:	24-03-2021.
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಬಾರಿ ಗ್ರಾಮ ಸಭೆಗಳನ್ನು ಕರೆಯಲಾಗಿದೆ;	ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 3-ಹೆಚ್ 2(1) ರಲ್ಲಿ ಮಕ್ಕಳ ಸಬಲೀಕರಣಕ್ಕಾಗಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದಕ್ಕಾಗಿ ಪ್ರತ್ಯೇಕವಾಗಿ ವರ್ಷಕ್ಕೆ ಒಂದು ಬಾರಿಯಾದರೂ ಮಕ್ಕಳ ಗ್ರಾಮ ಸಭೆ ನಡೆಸಿ, ಅವರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ ಗ್ರಾಮ ಪಂಚಾಯತಿಗಳು ಪ್ರತಿ ವರ್ಷ ಮಕ್ಕಳ ಗ್ರಾಮ ಸಭೆಗಳನ್ನು ನಡೆಸುತ್ತಿವೆ. ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಪ್ರಸ್ತುತ ಇರುವ 6009 ಗ್ರಾಮ ಪಂಚಾಯತಿಗಳ ಪೈಕಿ ಇದುವರೆವಿಗೆ 4431 ಗ್ರಾಮ ಪಂಚಾಯತಿಗಳಲ್ಲಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳನ್ನು ನಡೆಸಲಾಗಿದೆ.
(ಆ)	ಸದರಿ ಗ್ರಾಮ ಸಭೆಗಳ ಮೂಲಕ ಮಕ್ಕಳ ಸಮೀಕ್ಷೆ ಮತ್ತು ಅವರ ಶೈಕ್ಷಣಿಕ ಸ್ಥಿತಿಗತಿಗಳ ಕುರಿತು ಸಮೀಕ್ಷಾ ವರದಿಯನ್ನು ಸಿದ್ಧಗೊಳಿಸಲಾಗಿದೆಯೇ; ಹಾಗಿದ್ದಲ್ಲಿ, ಆ ಕುರಿತಾದ ವಿವರಗಳನ್ನು ನೀಡುವುದು;	ಗ್ರಾಮ ಪಂಚಾಯತಿಗಳು ಮಕ್ಕಳ ಹಕ್ಕುಗಳ ಗ್ರಾಮ ಸಭೆ ನಡೆಸಿದ ದಿನಾಂಕ, ಮಕ್ಕಳ ಸಮಸ್ಯೆಗಳು / ಬೇಡಿಕೆಗಳು/ ಪ್ರಶ್ನೆಗಳು, ಗ್ರಾಮ ಪಂಚಾಯತಿ ನಿರ್ಣಯ, ಗ್ರಾಮ ಸಭೆ ಕ್ರಿಯಾ ಯೋಜನೆ ಮತ್ತು ಅನುಷ್ಠಾನದ ಮಾಹಿತಿ ವಿವರವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಂಚತಂತ್ರ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಬೇಕಾಗಿರುತ್ತದೆ. ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಈ ಕೆಳಕಂಡ ನಿರ್ದಿಷ್ಟ ವಿಷಯಗಳ ಕುರಿತು ಚರ್ಚೆಗೆ ಮತ್ತು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಿ ಇಂತಹ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳುವಂತೆ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ನಿರ್ದೇಶನ ನೀಡಲಾಗಿದೆ. 1. ತಮ್ಮ ವಸತಿ ಪ್ರದೇಶ / ಶಾಲೆಯಲ್ಲಿನ ಮಕ್ಕಳ ಸ್ಥಿತಿಗತಿಗೆ ಸಂಬಂಧಿಸಿದಂತೆ ಶಾಲಾ ದಾಖಲಾತಿ, ಶಾಲೆ ಬಿಟ್ಟ ಮಕ್ಕಳು, ಹೆಣ್ಣು ಮಗುವಿನ ಶಿಕ್ಷಣ ಕುರಿತು ಹಾಗೂ ವಿಕಲಚೇತನರ ಅಗತ್ಯಗಳು. 2. ಬಾಲ್ಯ ವಿವಾಹ ಮತ್ತು ಮಕ್ಕಳ ಕಿಶೋರಾವ್ಯಸ್ಥೆಯ ಕಾರ್ಮಿಕತೆ, ಮಕ್ಕಳ ಜೀತ ಪದ್ಧತಿ. 3. ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳು, ಮಕ್ಕಳ ಮಾರಾಟ ಮತ್ತು ಸಾಗಾಟ. 4. ಹೆಣ್ಣು ಮಕ್ಕಳ ಮೇಲೆ ನಡೆಯುವ ದೌರ್ಜನ್ಯ.

		5. ಮಕ್ಕಳಿಗೆ ಚುಚ್ಚುಮದ್ದು ಮತ್ತು ಪೌಷ್ಠಿಕಾಂಶಗಳ ಲಭ್ಯತೆ. 6. ವಸತಿ ನಿಲಯಗಳ ಸಮಸ್ಯೆಗಳು. 7. ಪಂಚತಂತ್ರ ತಂತ್ರಾಂಶದಲ್ಲಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಮೂಡಿಬಂದ ಇಲಾಖಾವಾರು ಮಕ್ಕಳ ಬೇಡಿಕೆಗಳು/ಸಮಸ್ಯೆಗಳು/ಪ್ರಶ್ನೆಗಳು ನಮೂದಿಸಲಾಗುತ್ತಿದೆ ಹಾಗೂ ಪ್ರತಿ 15 ದಿನಕ್ಕೊಮ್ಮೆ ಆ ಸಮಸ್ಯೆಗಳ/ಬೇಡಿಕೆಗಳ/ಪ್ರಶ್ನೆಗಳ ಸ್ಥಿತಿಯನ್ನು ಹಾಗೂ ಕೈಗೊಂಡ ಕ್ರಮದ ಬಗ್ಗೆ ಪಂಚತಂತ್ರ ತಂತ್ರಾಂಶದಲ್ಲಿ ಇಂಧೀಕರಿಸಲಾಗುತ್ತಿದೆ.
(ಇ)	ಗ್ರಾಮಾಂತರ ಪ್ರದೇಶಗಳಲ್ಲಿ 6 ರಿಂದ 13 ವಯೋಮಾನದ ಎಷ್ಟು ಮಕ್ಕಳು ಶೈಕ್ಷಣಿಕವಾಗಿ ವಂಚಿತರಾಗಿದ್ದಾರೆಂಬುದನ್ನು ಗುರುತಿಸಲಾಗಿದೆ; ಗ್ರಾಮಾಂತರ ಪ್ರದೇಶಗಳಲ್ಲಿ ಮಕ್ಕಳು ಶೈಕ್ಷಣಿಕ ಸೌಲಭ್ಯಗಳಿಂದ ವಂಚಿತರಾಗದಂತೆ ಸರ್ಕಾರ ಕೈಗೊಂಡ ಪರಿಣಾಮಕಾರಿ ಕ್ರಮಗಳೇನು?	ದಿನಾಂಕ:22-03-2021 ರವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ 6 ರಿಂದ 13 ವಯೋಮಾನದ 20026 ಮಕ್ಕಳು ಶೈಕ್ಷಣಿಕವಾಗಿ ವಂಚಿತರಾಗಿದ್ದಾರೆಂಬುದನ್ನು ಗುರುತಿಸಲಾಗಿದೆ. ಸರ್ಕಾರದ ಆದೇಶ -ಸಂಖ್ಯೆ: ಕಪಂರಾಅ/ಅಭಿವೃದ್ಧಿ/79/2020, (ಭಾಗ-1) ದಿನಾಂಕ:29-12-2020 ರಲ್ಲಿ ಮನೆ ಮನೆ ಸಮೀಕ್ಷೆಯಲ್ಲಿ ಗುರುತಿಸಲಾದ ಶಾಲೆ / ಅಂಗನವಾಡಿಯಿಂದ ಹೊರಗುಳಿದ ಮಕ್ಕಳನ್ನು ಶಾಲೆ / ಅಂಗನವಾಡಿ ಮುಖ್ಯವಾಹಿನಿಗೆ ಸೇರಿಸಲು ಗ್ರಾಮ ಪಂಚಾಯತಿಗಳು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವಿವರವಾದ ಮಾರ್ಗಸೂಚಿಗಳನ್ನು ನೀಡಲಾಗಿದೆ. ಸುತ್ತೋಲೆ ಪ್ರತಿಯನ್ನು ಅನುಬಂಧ-1 ರಲ್ಲಿ ನೀಡಿದೆ.

ಸಂ. ಗ್ರಾಅಪ 159 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಅನುಬಂಧ-1

ಕರ್ನಾಟಕ ಸರ್ಕಾರ

ಸಂಖ್ಯೆ:ಕಪಂರಾಅ/ಅಭಿವೃದ್ಧಿ/79/2020(ಭಾಗ-1)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:29-12-2020.

ಸುತ್ತೋಲೆ

ವಿಷಯ "ಮನೆ-ಮನೆ ಸಮೀಕ್ಷೆ"ಯಲ್ಲಿ ಗುರುತಿಸಲಾದ ಶಾಲೆ/ಅಂಗನವಾಡಿಯಿಂದ ಹೊರಗುಳಿದ ಮಕ್ಕಳನ್ನು ಶಾಲೆ/ಅಂಗನವಾಡಿಯ ಮುಖ್ಯವಾಹಿನಿಗೆ ಸೇರಿಸಲು ಕೈಗೊಳ್ಳಬಹುದಾದ ಕ್ರಮಗಳ ಕುರಿತು

ಉಲ್ಲೇಖ: 1)ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ **1061** ಗ್ರಾಪಂಅ **2019**, ದಿನಾಂಕ: **11.12.2019.**
2)ಸರ್ಕಾರದ ಇದೇ ಸಮ ಸಂಖ್ಯೆಯ ಪತ್ರ ದಿನಾಂಕ: **16.12.2019.**
3)ಮಾನ್ಯ ಉಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:**15768/ 2013** ವಿಚಾರಣೆ ಸಂದರ್ಭದಲ್ಲಿ ನೀಡಿದ ಆದೇಶ ದಿನಾಂಕ: **18.12.2019.**
4)ಸರ್ಕಾರದ ಸುತ್ತೋಲೆ ಸಂಖ್ಯೆ: ಕಪಂರಾಅ/ ಅಭಿವೃದ್ಧಿ/79/2020, ದಿನಾಂಕ:**04.12.2020.**

***

ಭಾರತ ಸಂವಿಧಾನದ ಕಲಂ **21(ಎ)** ಪ್ರಕಾರ **6** ರಿಂದ **14** ವರ್ಷದ ಪ್ರತಿ ಮಗು **8** ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯುವುದು ಮೂಲಭೂತ ಹಕ್ಕಾಗಿರುತ್ತದೆ. ಉಲ್ಲೇಖ **(1)** ರ ಸುತ್ತೋಲೆ ಮತ್ತು ಉಲ್ಲೇಖ **(2)** ರ ಸರ್ಕಾರದ ಪತ್ರದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರಲು ಸ್ಥಳೀಯ ಸರ್ಕಾರಗಳು ಕೈಗೊಳ್ಳಬೇಕಾದ ಕಾರ್ಯಕ್ರಮದ ಮಾರ್ಗಸೂಚಿಗಳ ಬಗ್ಗೆ ಸವಿವರವಾಗಿ ತಿಳಿಸಲಾಗಿದೆ. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರಲು **The Karnataka Right of Children to Free and Compulsory Education Rules,2012** ರನ್ವಯ ಗ್ರಾಮ ಪಂಚಾಯಿತಿಗಳು ಗ್ರಾಮ ಶಿಕ್ಷಣ ರಿಜಿಸ್ಟರ್ನ್ನು ನಿರ್ವಹಿಸಬೇಕಾಗಿರುತ್ತದೆ.ಈ ಬಗ್ಗೆ ಉಲ್ಲೇಖ **(1)** ರ ಸುತ್ತೋಲೆಯಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳು ಗ್ರಾಮ ಶಿಕ್ಷಣ ರಿಜಿಸ್ಟರ್ ನಿರ್ವಹಿಸಲು ತಿಳಿಸಲಾಗಿದೆ. **The Karnataka Right of Children to Free and Compulsory Education (Amendment) Rules, 2014** ರನ್ವಯ ಮಕ್ಕಳ ಹಾಜರಾತಿಗೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳು ನಿರ್ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ ತಿಳಿಸಲಾಗಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, **1993** ರ ಪ್ರಕರಣ **58** ರಲ್ಲಿ ಗ್ರಾಮ ಪಂಚಾಯಿತಿಯ ಪ್ರಕಾರ್ಯಗಳ ಬಗ್ಗೆ ವಿವರಿಸಲಾಗಿದ್ದು, ಅದರಲ್ಲಿ ಗ್ರಾಮ ಪಂಚಾಯಿತಿಯು ಪ್ರಾಥಮಿಕ ಶಾಲೆಗೆ ಮಕ್ಕಳ ಸಾರ್ವತ್ರಿಕ ದಾಖಲಾತಿಯನ್ನು ಖಚಿತಪಡಿಸಿಕೊಳ್ಳುವುದು ಪ್ರಮುಖವಾದ ಕಡ್ಡಾಯ ಕಾರ್ಯ ವಾಗಿರುತ್ತದೆ.

ಉಲ್ಲೇಖ **(3)** ರ ರಿಟ್ ಪಿಟಿಷನ್ ವಿಚಾರಣೆ ಸಂದರ್ಭದಲ್ಲಿ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿರುತ್ತದೆ.

"We make it clear the responsibility of carrying out a door-to-door survey shall be of the local authorities and the task cannot be delegated to the teachers in the schools. While carrying out the survey, in case of students who have permanently abandoned the school, the registration number of the students can be of a great help. This aspect shall be borne in mind by the local authorities."

ಪ್ರಕರಣವು ಉಚ್ಚ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದ್ದು, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ತರಲು ನಿಖರವಾದ ಕ್ರಮಗಳನ್ನು ಸರ್ಕಾರದ ವತಿಯಿಂದ ಕೈಗೊಂಡು ಮಾನ್ಯ ನ್ಯಾಯಾಲಯಕ್ಕೆ ಅನುಪಾಲನಾ ವರದಿ ಸಲ್ಲಿಸಬೇಕಾಗಿರುತ್ತದೆ.

ಮೇಲ್ಕಂಡ ಆದೇಶದ ಹಿನ್ನಲೆಯಲ್ಲಿ, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರಿಸಲು ಕಟ್ಟುನಿಟ್ಟಿನ ಕ್ರಮಕೈಗೊಳ್ಳುವುದು ಅವಶ್ಯವಾಗಿದೆ. ಈ ಕಾರ್ಯದಲ್ಲಿ ಮಾನ್ಯ ನ್ಯಾಯಾಲಯವು ಆದೇಶಿಸಿರುವಂತೆ ಸ್ಥಳೀಯ ಗ್ರಾಮ ಪಂಚಾಯಿತಿಗಳು ಪ್ರಮುಖ ಪಾತ್ರ ವಹಿಸಬೇಕಾಗಿರುತ್ತದೆ. ಈ ದಿಶೆಯಲ್ಲಿ ಕೈಗೊಳ್ಳಬೇಕಾದ ಕಾರ್ಯ ಯೋಜನೆಯನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

1) **ಜನವರಿ 2021–** ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು/ಆಡಳಿತಾಧಿಕಾರಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸ್ಥಳೀಯ ಶಾಲೆಗಳ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಅಧ್ಯಕ್ಷರು, ಶಾಲಾ ಮುಖ್ಯೋಪಾಧ್ಯಾಯರು, ಅಂಗನವಾಡಿ ಮೇಲ್ವಿಚಾರಕರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಇತರರನ್ನು ಒಳಗೊಂಡ **ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ ಮತ್ತು ಮಹಿಳಾ ಸ್ವ-ಸಹಾಯ ಸಂಘದ ಪ್ರತಿನಿಧಿಗಳ** ಸಭೆ ನಡೆಸಿ ಕಾರ್ಯಕ್ರಮದ ಮಹತ್ವವನ್ನು ಮನವರಿಕೆ ಮಾಡುವುದು ಮತ್ತು ಸಮೀಕ್ಷೆಯ ಎಲ್ಲಾ ಹಂತಗಳ ಉಸ್ತುವಾರಿ ವಹಿಸುವುದು. **ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ ಸದಸ್ಯರುಗಳು ಅವರವರ ಜವಾಬ್ದಾರಿಗಳನ್ನು ನಿರ್ದಿಷ್ಟಪಡಿಸಿಕೊಳ್ಳಬೇಕು.**

2) **ಜನವರಿ-2021– ಫೆಬ್ರುವರಿ 2021** ಮೇಲ್ಕಂಡವರು ತಮ್ಮ ಶಾಲಾ ವ್ಯಾಪ್ತಿಯಲ್ಲಿ ಮಹಿಳಾ ಸ್ವ-ಸಹಾಯ ಸಂಘಗಳ ಪ್ರತಿನಿಧಿಗಳ ಮೂಲಕ ಸಮೀಕ್ಷೆ ನಡೆಸಿ ಶಾಲೆಗೆ ದಾಖಲಾಗದ, ದಾಖಲಾದರೂ ಹಾಜರಾಗದ ಮಕ್ಕಳನ್ನು ಗುರುತಿಸುವುದು. ವಿಶೇಷ ಮನವೊಲಿಕೆ ಕಾರ್ಯಕ್ರಮ ಅವಶ್ಯವಿದ್ದಲ್ಲಿ ಸಂಬಂಧಿಸಿದ ಶಾಲೆಯ ಮುಖ್ಯ ಶಿಕ್ಷಕರಿಂದ ಹಮ್ಮಿಕೊಳ್ಳುವುದು.

3) **ಫೆಬ್ರುವರಿ -2021** – ಮೇಲ್ಕಂಡಂತೆ ಸಮೀಕ್ಷೆಯಲ್ಲಿ ಗುರುತಿಸಲಾದ ಮಕ್ಕಳನ್ನು ಶಾಲೆ/ಅಂಗನವಾಡಿಗೆ **ದಾಖಲಿಸಲು ಹಾಗೂ ಹಾಜರಾಗುವಂತೆ** ಮಾಡಲು ಕ್ರಮ ವಹಿಸುವುದು.

4) **ಮಾರ್ಚ್ 2021** – ಗ್ರಾಮ ಪಂಚಾಯಿತಿ ವತಿಯಿಂದ ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರೊಡನೆ ಸಭೆ ನಡೆಸಿ ಶಾಲೆ/ಅಂಗನವಾಡಿಗೆ **ದಾಖಲಾದ ಮಕ್ಕಳ ಹಾಜರಾತಿ ಹಾಗೂ ಶೈಕ್ಷಣಿಕ ಪ್ರಗತಿ ಬಗ್ಗೆ ಪರಿಶೀಲನೆ.**

5) **ಮಾರ್ಚ್- 2021 - ಏಪ್ರಿಲ್-2021** ರಲ್ಲಿ ಇಡೀ ವರ್ಷದಲ್ಲಿ ಶಾಲೆ/ಅಂಗನವಾಡಿಯಿಂದ ಹೊರಗುಳಿದ ಮಕ್ಕಳ ದಾಖಲಾತಿ-ಹಾಜರಾತಿ ಪ್ರಕ್ರಿಯೆಯಲ್ಲಿ ಆದ ಪ್ರಗತಿ ಪರಾಮರ್ಶೆ ಮಾಡಿ ಮುಂದಿನ ವರ್ಷ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಕಾರ್ಯಯೋಜನೆ ಸಿದ್ಧಪಡಿಸುವುದು.

ಶಾಲೆ/ಅಂಗನವಾಡಿಯಿಂದ ಹೊರಗುಳಿದ ಮಕ್ಕಳು ಶಾಲೆ/ಅಂಗನವಾಡಿಗೆ ಹಾಜರಾಗದಿರಲು ವೈದ್ಯಕೀಯ ಕಾರಣಗಳು, ಆರ್ಥಿಕ ಕಾರಣಗಳು ಹಾಗೂ ಕೌಟುಂಬಿಕ ಕಾರಣಗಳು ಪ್ರಮುಖವಾದ ಕಾರಣಗಳಾಗಿರುತ್ತದೆ.

1. <u>ಅನಾರೋಗ್ಯ ಕಾರಣ ನೀಡಿದಲ್ಲಿ</u>:

- ಮಗುವಿನ ಮನೆಗೆ ಬೇಟಿ ನೀಡಿ ಮಗುವಿನ ಅನಾರೋಗ್ಯದ ಸ್ಥಿತಿಯನ್ನು ತಿಳಿದುಕೊಂಡು, ಅಗತ್ಯವಿದ್ದಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡಿಸುವುದು.

- ಲಭ್ಯವಿರುವ ಸರ್ಕಾರಿ ಯೋಜನೆ ಅಡಿಯಲ್ಲಿ ಆರೋಗ್ಯ ಸೇವೆಗಳನ್ನು ಪಡೆಯಲು ನೆರವು ನೀಡುವುದು. ಮಗುವಿನ ಕುಟುಂಬದಲ್ಲಿ ಆರೋಗ್ಯ ಕಾರ್ಡ್ ಪಡೆದಿದ್ದಲ್ಲಿ ಸದರಿ ಕಾರ್ಡ್‌ನ ಪ್ರಯೋಜನ ಪಡೆಯಲು ಸಹಾಯ ಮಾಡುವುದು. ಆರೋಗ್ಯ ಕಾರ್ಡ್ ಇಲ್ಲದಿದ್ದಲ್ಲಿ ಆರೋಗ್ಯ ಕಾರ್ಡ್ ಪಡೆಯಲು ಸಹಕರಿಸುವುದು.

- ಆರೋಗ್ಯ ಸುಧಾರಣೆಯ ನಂತರ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ ಮೂಲಕ ಮಗುವನ್ನು ಶಾಲೆ/ಅಂಗನವಾಡಿಗೆ ದಾಖಲಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

- ಶಾಲೆ/ಅಂಗನವಾಡಿಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು. ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ 15 ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ಯಲ್ಲಿ ತಿಳಿಸಿರುವಂತೆ ಕನಿಷ್ಠ 8 ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

2. <u>ವಿಶೇಷ ಅಗತ್ಯವುಳ್ಳ ಮಗುವಾಗಿದ್ದಲ್ಲಿ:</u>

- ಮನೆಗೆ ಭೇಟಿ ನೀಡಿ ಮಗುವಿನ ದೈಹಿಕ/ಮಾನಸಿಕ ಸ್ಥಿತಿ ಕುರಿತು ಗಮನಿಸುವುದು.

- ವಿಶೇಷ ಚೇತನರ ಹಕ್ಕುಗಳ ಅಧಿನಿಯಮ 2016ರಲ್ಲಿ ತಿಳಿಸಿರುವಂತೆ, ಅಂಗ ವೈಕಲ್ಯವನ್ನು ಪತ್ತೆ ಹಚ್ಚಲು ವೈದ್ಯಕೀಯ ತಪಾಸಣೆ ಆಗಿದ್ದು ಅರ್ಹರಿದ್ದಲ್ಲಿ ಸ್ವಾವಲಂಬನ ಕಾರ್ಡ್ ಪಡೆಯಲು ನೊಂದಣಿ ಹಾಗೂ ಅಗತ್ಯವಿರುವ ಸೌಲಭ್ಯಗಳನ್ನು ಪಡೆಯಲು ಸೂಕ್ತ ಕ್ರಮ ಕೈಗೊಳ್ಳುವುದು.

- ಒಂದು ವೇಳೆ ಅಂಗ ವೈಕಲ್ಯವನ್ನು ಪತ್ತೆ ಹಚ್ಚಲು ವೈದ್ಯಕೀಯ ತಪಾಸಣೆ ಆಗಿರದಿದ್ದಲ್ಲಿ ಗ್ರಾಮ ಪಂಚಾಯತಿ ಮಟ್ಟದ ಗ್ರಾಮೀಣ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮ ಅನುಷ್ಠಾನದ ಪರಿಶೀಲನಾ ಸಮಿತಿಯ ಮೂಲಕ ವೈದ್ಯಕೀಯ ತಪಾಷಣೆ ಮತ್ತು ಸ್ವಾವಲಂಬನ ಕಾರ್ಡ್ ಪಡೆಯಲು ಸಹಕರಿಸುವುದು.

- ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಂದ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಮೂಲಕ ಸರಳ ಸಹಾಯಕ ಸಾಧನಗಳ ಮತ್ತು ಶ್ರವಣ ಸಾಧನಗಳು ಸೇರಿದಂತೆ ವಿವಿಧ ಸೇವೆಗಳು ಸಿಗುವಂತೆ ಕ್ರಮ ವಹಿಸುವುದು.

- ಶಾಲೆಗೆ ಬರಲು ಸಾಧ್ಯವಾಗದ ವಿಕಲ ಚೇತನ ಮಗುವಿಗೆ ಶಿಕ್ಷಣವನ್ನು ಮಗುವು ಇರುವೆಡೆಯಲ್ಲೇ ಅಂದರೆ ಮಗುವಿನ ಮನೆಯಲ್ಲಿಯೇ ಶಿಕ್ಷಣ ನೀಡಬೇಕಾಗುತ್ತದೆ. ಸದರಿ ಶಿಕ್ಷಣಕ್ಕೆ ಕ್ಷೇತ್ರ ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರು (BIERT) ಸ್ಥಳೀಯ ಶಿಕ್ಷಕ/ಶಿಕ್ಷಕಿಗೆ ತರಬೇತಿ ನೀಡುವುದು.

- ತರಬೇತಿ ಹೊಂದಿದ ಸ್ಥಳೀಯ ಶಿಕ್ಷಕ/ಶಿಕ್ಷಕಿ ಮಗುವಿಗೆ ಸಾಧ್ಯವಾಗುವ ಕನಿಷ್ಠ ಮಟ್ಟದ ಶಿಕ್ಷಣ ನೀಡಿ ಶಾಲಾ ಮುಖ್ಯವಾಹಿನಿಗೆ ತರುವುದು.

- ವಿಶೇಷ ಅಗತ್ಯ ಉಳ್ಳ ಮಗುವಿನ ನಿರ್ದಿಷ್ಟ ಕಲಿಕಾ **ವೈಕಲ್ಯತೆ (Specific Learning Disability-SLD)** ಪತ್ತೆ ಹಚ್ಚುವುದು ಹಾಗೂ ಸಮನ್ವಯ ಶಿಕ್ಷಣ ತರಬೇತಿ ಹೊಂದಿದ ಸ್ಥಳೀಯ ಶಿಕ್ಷಕ/ಶಿಕ್ಷಕಿಯ ಮೂಲಕ ಮಗುವಿಗೆ ಸಾಧ್ಯವಾಗುವ ಕನಿಷ್ಠ ಮಟ್ಟದ ಶಿಕ್ಷಣ ನೀಡುವುದು.

- ಆಯಾ ತಾಲ್ಲೂಕಿನಲ್ಲಿರುವ ಶಿಕ್ಷಣ ಇಲಾಖೆಯ ಕ್ಷೇತ್ರ ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರು (BIERT),ಸ್ಥಳೀಯ ಶಿಕ್ಕಕ/ಶಿಕ್ಷಕಿಯರಿಗೆ ಸಮನ್ವಯ ಶಿಕ್ಷಣದ ತರಬೇತಿ ಆಗಿರುವುದು ಮತ್ತು ವಿಶೇಷ ಅಗತ್ಯ ಉಳ್ಳ ಮಕ್ಕಳ ಶಿಕ್ಷಣದ ಬಗ್ಗೆ ಅಗತ್ಯ ಉಸ್ತುವಾರಿ ವಹಿಸುವುದು.

- ಮಗುವಿನ ದಾಖಲೆಗಳನ್ನು ಶಾಲೆಯಲ್ಲಿ ನಿರ್ವಹಿಸುವುದು ಹಾಗೂ ಎಲ್ಲಾ ಮಕ್ಕಳಂತೆ ಈ ಮಕ್ಕಳಿಗೂ ಸೌಲಭ್ಯಗಳು ಲಭ್ಯವಾಗುವಂತೆ ಮಾಡುವುದು.

3. <u>ಮಗುವಿಗೆ ಅಪಘಾತವಾಗಿದ್ದಲ್ಲಿ:</u>

- ಮನೆಗೆ ಬೇಟಿ ನೀಡಿ ಅಪಘಾತದಿಂದ ಉಂಟಾದ ತೊಂದರೆ ಮತ್ತು ಪ್ರಸ್ತುತ ಪರಿಸ್ಥಿತಿಯನ್ನು ಕುರಿತು ಅವಲೋಕಿಸುವುದು ಹಾಗೂ ಅಗತ್ಯವಿದ್ದಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡಿಸುವುದು.

- ಮಗುವಿನ ಕುಟುಂಬದಲ್ಲಿ ಆರೋಗ್ಯ ಕಾರ್ಡ್ ಪಡೆದಿದ್ದಲ್ಲಿ ಸದರಿ ಕಾರ್ಡ್‌ನ ಮೂಲಕ ಲಭ್ಯವಿರುವ ಸರ್ಕಾರಿ ಯೋಜನೆ ಅಡಿಯಲ್ಲಿ ಆರೋಗ್ಯ ಸೇವೆಗಳನ್ನು ಪಡೆಯಲು ನೆರವು ನೀಡುವುದು. ಆರೋಗ್ಯ ಕಾರ್ಡ್ ಇಲ್ಲದಿದ್ದಲ್ಲಿ ಆರೋಗ್ಯ ಕಾರ್ಡ್ ಪಡೆಯಲು ಸಹಕರಿಸುವುದು.

- **ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ** ಮೂಲಕ ಮಗುವು ಶಾಲೆ/ಅಂಗನವಾಡಿಗೆ ಹಾಜರಾಗಲು ಸಾಧ್ಯವಿದ್ದಲ್ಲಿ ಶಾಲೆಗೆ/ಅಂಗನವಾಡಿ ದಾಖಲಿಸುವುದು. ಅಥವಾ ಆರೋಗ್ಯ ಸುಧಾರಣೆಯ ನಂತರ ಶಾಲೆಗೆ ದಾಖಲಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ 15 ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ಯಲ್ಲಿ ತಿಳಿಸಿರುವಂತೆ ಕನಿಷ್ಠ 8 ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು

<u>**ಶಾಲೆಗೆ /ಅಂಗನವಾಡಿ ಹಾಜರಾಗದಿರಲು ಆರ್ಥಿಕ ಕಾರಣಗಳಿದ್ದಲ್ಲಿ.**</u>

1. <u>ಕುಟುಂಬದಲ್ಲಿ ಯಾರೂ ವರಮಾನ ಇಲ್ಲದಿರುವವರು:</u>

- ಮನೆಗೆ ಬೇಟಿ ನೀಡಿ ಮನೆಯಲ್ಲಿನ ವಯಸ್ಕರ ದುಡಿಮೆ ಮತ್ತು ಕುಟುಂದ ಆರ್ಥಿಕ ಪರಿಸ್ಥಿತಿಯನ್ನು ವಿಶ್ಲೇಷಿಸಬೇಕು.

- ಗ್ರಾಮ ಪಂಚಾಯತಿಯಿಂದ ಮನೆಯಲ್ಲಿನ ವಯಸ್ಕರಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಅಥವಾ ಇತರೆ ಯೋಜನೆ ಅಡಿಯಲ್ಲಿ ದುಡಿಯಲು ಅವಕಾಶವನ್ನು ಒದಗಿಸುವುದು.

- ಪೋಷಕರಿಗೆ ಮಗುವಿನ ಆರೈಕೆ ಮಾಡಲು ಆಗುವುದಿಲ್ಲ ಎಂದು ಕಂಡು ಬಂದಲ್ಲಿ ಜಿಲ್ಲೆಯಲ್ಲಿರುವ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಮಗುವಿನ ಆರೈಕೆ ಮತ್ತು ಬೆಂಬಲಕ್ಕಾಗಿ ಹಾಜರು ಪಡಿಸುವುದು.

- ಪೋಷಕರು ಮಗುವಿನ ಆರೈಕೆ ಒಪ್ಪಿ ಸಹಾಯ ಕೇಳಿದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಕ ಪ್ರಾಯೋಜಕತ್ವದ ಅಡಿಯಲ್ಲಿ ಮಗುವಿನ ಶಿಕ್ಷಣ ಮತ್ತು ಪೌಷ್ಠಿಕ ಆಹಾರಕ್ಕಾಗಿ ಮಾಸಿಕ ಸಹಾಯಧನವನ್ನು ಕೊಡಿಸುವುದು ಹಾಗೂ ಶಾಲೆಗೆ ದಾಖಲಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

* ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

* ಮಗುವಿನ ಶಿಕ್ಷಣದ ಮುಂದುವರಿಕೆಗಾಗಿ ಪೋಷಕರ ಒಪ್ಪಿಗೆ ಪಡೆದು ಹತ್ತಿರದ ಸರ್ಕಾರಿ ವಸತಿ ಶಾಲೆಗೆ ದಾಖಲಿಸುವುದು.

* ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ 15 ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ಯಲ್ಲಿ ತಿಳಿಸಿರುವಂತೆ ಕನಿಷ್ಠ 8 ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

2. <u>ಕುಟುಂಬದ ಸದಸ್ಯರೊಂದಿಗೆ ದುಡಿಯಲು ಸಹಕರಿಸುವುದು</u>:

* ಮನೆಗೆ ಬೇಟಿ ನೀಡಿ, ಮಗುವು ಪೋಷಕAರೊಂದಿಗೆ ಸ್ವಂತ ಕುಟುಂಬದ ಕೆಲಸ ಮಾಡುತ್ತಿದ್ದಾನೆ/ಳೆಯೋ ಅಥವಾ ದುಡಿಮೆಗೆ ಹೋಗತ್ತಿದ್ದಾರೆಯೇ? ಎಂಬುದನ್ನು ತಿಳಿದುಕೊಳ್ಳಬೇಕು.

* ಕುಟುಂಬದಲ್ಲಿಯೇ ಕೆಲಸ ಮಾಡುತ್ತಿದ್ದಲ್ಲಿ ಕೆಲಸದ ಬಗ್ಗೆ ತಿಳಿದು ಅದರಿಂದ ಮಗುವಿನ ಶಿಕ್ಷಣಕ್ಕೆ ಆಗುವ ತೊಂದರೆ ಕುರಿತು ಮನವರಿಕೆ ಮಾಡುವುದು.

* ಮಗುವಿಗೆ ಶಿಕ್ಷಣ ಕೊಡಿಸಲು ಪೋಷಕರಿಗೆ ಆರ್ಥಿಕ ತೊಂದರೆ ಇದ್ದಲ್ಲಿ ಮಗುವಿನ ಶಿಕ್ಷಣ, ಆರೈಕೆ ಮತ್ತು ಬೆಂಬಲಕ್ಕಾಗಿ ಜಿಲ್ಲೆಯಲ್ಲಿನ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸುವುದು ಮತ್ತು ಸಮಿತಿ ಆದೇಶಗಳಂತೆ ಕ್ರಮ ಕೈಗೊಳ್ಳುವುದು ಮತ್ತು ಅನುಸರಣೆ ಮಾಡುವುದು.

* **ಒಂದು ವೇಳೆ ಮಗುವು ಪೋಷಕರೊಂದಿಗೆ ಅಪಾಯಕಾರಿ ಅಥವಾ ಅಪಾಯಕಾರಿ ಅಲ್ಲದ ಉದ್ದಿಮೆಯಲ್ಲಿ ದುಡಿಯುತ್ತಿದ್ದಲ್ಲಿ, ಮಗುವು ಕೆಲಸ ಮಾಡುತ್ತಿರುವ ಉದ್ದಿಮೆ ಮತ್ತು ಮಾಲೀಕರ ವಿವರಗಳನ್ನು ಪಡೆದ, ಮಕ್ಕಳ ಮತ್ತು ಕಿಶೋರಾವಸ್ಥೆಯ ಕಾರ್ಮಿಕ ಕಾಯಿದೆ ಅಡಿಯಲ್ಲಿ ತಿಳಿಸಿರುವಂತೆ ಕಾನೂನು ಮತ್ತು ಮಗುವಿನ ಪುನರ್ವಸತಿಗೆ ಕ್ರಮ ಕೈಗೊಳ್ಳುವುದು. (ಮಾಲೀಕರ ವಿರುದ್ಧ ಕೇಸ್ ದಾಖಲಿಸುವುದು, ಅಪಾಯಕಾರಿ ಉದ್ದಿಮೆ ಆದಲ್ಲಿ ರೂ 20,000/ ವಸೂಲಿ ಮಾಡಿ ಜಿಲ್ಲಾ ಪುನರ್ವಸತಿ ಯೋಜನಾ ಕಾರ್ಪಸ್ ನಿಧಿಗೆ ಜಮಾ ಮಾಡುವುದು.**

* ಮಗುವನ್ನು ಕೆಲಸದಿಂದ ಬಿಡಿಸಿ ಜಿಲ್ಲೆಯಲ್ಲಿ ಬಾಲ ಕಾರ್ಮಿಕ ಪುನರ್ವಸತಿ ಕೇಂದ್ರಗಳಿದ್ದಲ್ಲಿ ಅಂಥಹ ಕೇಂದ್ರಗಳಿಗೆ ದಾಖಲಿಸುವುದು. ಇಲ್ಲದಿದ್ದಲ್ಲಿ ಮಗುವನ್ನು ಜಿಲ್ಲೆಯಲ್ಲಿನ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸಿ, ಸಮಿತಿ ನಿರ್ದೇಶನದಂತೆ ಮುಂದಿನ ಕ್ರಮ ಮತ್ತು ಅನುಸರಣೆ ಮಾಡುವುದು.

- ಮಗುವು ತಮ್ಮ ಮನೆಯ ಸ್ವಂತ ಕೆಲಸ ಮಾಡುತ್ತಿದ್ದು, ಪೋಷಕರಿಗೆ ಆರೈಕೆ ಮಾಡಲು ಅನುಕೂಲವಿದ್ದಲ್ಲಿ, ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ ಮೂಲಕ ಸ್ಥಳೀಯ ಶಾಲೆಗೆ ದಾಖಲಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

3. <u>ಬೀದಿಯಲ್ಲಿರುವ ಮಗುವು ಆಗಿದ್ದಲ್ಲಿ</u>:

- ಮಗುವನ್ನು ವಿಚಾರಿಸಿ ಮಗುವಿನ ಪೋಷಕರ ಬಗ್ಗೆ ಮಾಹಿತಿ ಪಡೆದು, ಪೋಷಕರನ್ನು ಸಂಪರ್ಕಿಸಿ ವಿವರಗಳನ್ನು ಪಡೆದು ಮುಂದಿನ ಸೂಕ್ತ ಕ್ರಮಕ್ಕೆ ಜಿಲ್ಲೆಯಲ್ಲಿನ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸಿ, ಸಮಿತಿ ನಿರ್ದೇಶನದಂತೆ ಮುಂದಿನ ಕ್ರಮ ಮತ್ತು ಅನುಸರಣೆ ಮಾಡುವುದು.

- ಮಕ್ಕಳ ಕಲ್ಯಾಣ ಸಮಿತಿಯ ಗಮನಕ್ಕೆ ತರದೆ ಅಥವಾ ಸಮಿತಿಯ ಆದೇಶಗಳಿಲ್ಲದೆ ಮಗುವನ್ನು ಪೋಷಣೆಗಾಗಿ ಯಾವುದೇ ಕುಟುಂಬಕ್ಕೆ /ವ್ಯಕ್ತಿಗೆ ಒಪ್ಪಿಸಿದಲ್ಲಿ ಬಾಲ ನ್ಯಾಯ ಕಾಯಿದೆ **2015**ರ ಪ್ರಕಾರ ಅಪರಾಧವಾಗುತ್ತದೆ.

4. <u>ವಲಸೆ ಮಗುವಾಗಿದ್ದಲ್ಲಿ</u>:

- ವಲಸೆ ಮಗುವನ್ನು ವಿಚಾರಿಸಿ, ಮಗುವು ಕುಟುಂಬದ ಜೊತೆಗೆ ಅಥವಾ ಒಂಟಿಯಾಗಿ ಬಂದಿರುವ ಕುರಿತು ಮಾಹಿತಿ ಪಡೆಯಬೇಕು.

- ಕುಟುಂಬದ ಜೊತೆ ಬಂದಿದ್ದಲ್ಲಿ ಪೋಷಕರಿಗೆ ಮನವೊಲಿಸಿ ಮಗುವನ್ನು ಶಾಲೆಗೆ ದಾಖಲಿಸಲು ಕ್ರಮ ಕೈಗೊಳ್ಳುವುದು. ಕರ್ನಾಟಕ ರಾಜ್ಯದ ಮಗುವಾಗಿದ್ದಲ್ಲಿ (ಈ ಮೇಲೆ ವಿವರಿಸಿರುವಂತೆ ಶಾಲೆಯಿಂದ ಹೊರಗುಳಿದ ಮಗುವನ್ನು ಶಾಲೆಗೆ ದಾಖಲಿಸುವಾಗ ಅನುಸರಿಸಬೇಕಾದ ಕ್ರಮಗಳನ್ನು ಪಾಲಿಸುವುದು).

- ವಲಸೆಯ ಮಗುವು ಬೇರೆ ರಾಜ್ಯದ ಮಗುವಾಗಿದ್ದಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸಿ, ಸಮಿತಿ ನಿರ್ದೇಶನದಂತೆ ಮುಂದಿನ ಕ್ರಮ ಮತ್ತು ಅನುಸರಣೆ ಮಾಡುವುದು.

- ಒಂದು ವೇಳೆ ಮಗುವು ಒಂಟಿಯಾಗಿ ವಲಸೆ ಬಂದಿರುವುದು ಕಂಡುಬಂದಲ್ಲಿ, ಮಗುವನ್ನು ಮುಂದಿನ ಅಗತ್ಯಕ್ರಮಕ್ಕಾಗಿ ಜಿಲ್ಲೆಯಲ್ಲಿನ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸುವುದು ಮತ್ತು ಸಮಿತಿಯ ಆದೇಶಗಳಂತೆ ಮುಂದಿನ ಕ್ರಮ ಮತ್ತು ಅನುಸರಣೆ ಮಾಡುವುದು.

- ಗ್ರಾಮದಿಂದ ಕುಟುಂಬಗಳು ವಲಸೆ ಹೋಗುತ್ತಿದ್ದಲ್ಲಿ ಅವರ ಮಕ್ಕಳ ಶಿಕ್ಷಣ ಮುಂದುವರಿಸಲು ಗ್ರಾಮದಲ್ಲಿ ಅಥವಾ ಹತ್ತಿರದ ಗ್ರಾಮದಲ್ಲಿ/ಸೂಕ್ತ ಸ್ಥಳದಲ್ಲಿ ಋತುಮಾನ ವಸತಿಯುತ ಶಾಲೆಗಳನ್ನು ತೆರೆಯುವುದು ಹಾಗೂ ಋತುಮಾನ ಸೇತುಬಂಧ ಕೋರ್ಸ್‌ಗಳನ್ನು ನಡೆಸುವುದು.

- ಗ್ರಾಮೀಣ ಪ್ರದೇಶದಲ್ಲಿ ಮಕ್ಕಳೊಂದಿಗೆ ವಲಸೆ ಬಂದ ಕುಟುಂಬಗಳಿದ್ದಲ್ಲಿ, ಅವರ ಮಕ್ಕಳಿಗಾಗಿ ಗುಡಾರ ಶಾಲೆಗಳನ್ನು ವಲಸಿ ಬಿಡಾರ ಸ್ಥಳಗಳಲ್ಲಿ ಸ್ಥಾಪಿಸುವುದು, ಈ ಮಕ್ಕಳು ಔಪಚಾರಿಕ ಪಠ್ಯಕ್ರಮವನ್ನು ಅಭ್ಯಾಸ ಮಾಡುತ್ತಾರೆ. ವಲಸೆ ಅವಧಿ ಸೀಮಿತವಾದುದೆಂದು ಭಾವಿಸಿ ಗುಡಾರ ಶಾಲೆಗಳನ್ನು **06** ತಿಂಗಳವರೆಗೆ ನಡೆಸಬೇಕು. ವಲಸಿತ ಕುಟುಂಬಗಳು **6** ತಿಂಗಳಿಗಿಂತ ಹೆಚ್ಚು ಅವಧಿ ಇದ್ದಲ್ಲಿ ಗುಡಾರ ಶಾಲೆಗಳನ್ನು ಮುಂದುವರಿಸುವುದು.

5. <u>ಅಲೆಮಾರಿ/ಕುಟುಂಬದ ಮಗುವಾಗಿದ್ದಲ್ಲಿ</u>:

- ಮಗುವಿನ ಶಿಕ್ಷಣದ ಮಟ್ಟ ಕುರಿತು ಮಾಹಿತಿ ಪಡೆಯುವುದು, ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ ಮತ್ತು ಶಾಲೆಯ ವಿವರ.

- ಮಗುವಿನ ಶಿಕ್ಷಣದ ಮಹತ್ವವನ್ನು ಪೋಷಕರಿಗೆ ತಿಳಿಸಿ, ಅವರ ಮನವೊಲಿಸಿ, ಮಗುವಿಗೂ ಸಹ ಅಗತ್ಯವೆನಿಸಿದಲ್ಲಿ ಆಪ್ತಸಮಾಲೋಚನೆ ಮಾಡಿ ಮಗುವಿನ ಪ್ರಸ್ತುತ ಶೈಕ್ಷಣಿಕ ಮಟ್ಟ ಮತ್ತು ವಯಸ್ಸು ಆಧರಿಸಿ ಅಗತ್ಯವಿರುವ ಸೇತುಬಂಧ ಕಾರ್ಯಕ್ರಮವನ್ನು ನಡೆಸಿ, ಮಗುವನ್ನು ಶಾಲೆಗೆ ಅಥವಾ ವಸತಿ ಶಾಲೆಗೆ ದಾಖಲಿಸುವುದು.

- ಪೋಷಕರಿಗೆ ಮಗುವಿನ ಆರೈಕೆ ಮತ್ತು ಪೋಷಣೆ ತೊಂದರೆ ಆಗುತ್ತಿದೆ ಅಥವಾ ಪೋಷಕರಿಗೆ ಆರ್ಥಿಕ ಸಮಸ್ಯೆಗಳು ಇದ್ದಲ್ಲಿ, ಮಗುವನ್ನು ಜಿಲ್ಲೆಯಲ್ಲಿನ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸಿ, ಸಮಿತಿ ನಿರ್ದೇಶನದಂತೆ ಮುಂದಿನ ಕ್ರಮ ಮತ್ತು ಅನುಸರಣೆ ಮಾಡುವುದು.

<u>ಶಾಲೆ/ಅಂಗನವಾಡಿಗೆ ಹಾಜರಾಗದಿರಲು ಕೌಟುಂಬಿಕ ಕಾರಣಗಳಿದ್ದಲ್ಲಿ</u>.

1.<u>ಮಗುವು ಮನೆಗೆಲಸ ಮಾಡುತ್ತಿದ್ದಲ್ಲಿ</u>:

- ಮಗುವು ಮನೆಗೆಲಸ ಮಾಡುತ್ತಿದ್ದಲ್ಲಿ-ಸ್ವಂತ ಮನೆಕೆಲಸವೋ ಅಥವಾ ಬೇರೆಯವರ ಮನೆಕೆಲಸವೋ ತಿಳಿಯುವುದು.

- ಪೋಷಕರಿಗೆ ಮತ್ತು ಮಗುವಿಗೆ ಮನವೊಲಿಸಿ ಶಾಲೆ ಅಥವಾ ವಸತಿ ಶಾಲೆಗೆ ದಾಖಲಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ 15 ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ 8 ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

2. <u>ಮದುವೆಯಾದವರು</u>:

- ಮಗುವಿನ ವಿವಾಹದ ವಿವರಗಳನ್ನು ಪಡೆಯುವುದು ಹಾಗೂ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸುವುದು. ಸಮಿತಿಯ ಆದೇಶದಂತೆ ಮುಂದಿನ ಕ್ರಮ ಕೈಗೊಳ್ಳುವುದು.

- ಬಾಲ್ಯವಿವಾಹ ನಿಷೇಧ ಕಾಯಿದೆ ಅಡಿಯಲ್ಲಿ ಕಾನೂನು ಕ್ರಮ ಕೈಗೊಳ್ಳುವುದು ಹಾಗೂ ಮಗುವಿನ ಶಿಕ್ಷಣ ಮುಂದುವರಿಸಲು ವಿವಾಹ ಅಡ್ಡಿಯಾಗದಂತೆ ನೋಡಿಕೊಳ್ಳುವುದು.

- ಮಗುವು ಒಂದು ವೇಳೆ ಗರ್ಭವತಿ ಆಗಿದ್ದಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸಿ ಸಮಿತಿಯ ನಿರ್ದೇಶನದಂತೆ ಕ್ರಮ ಕೈಗೊಳ್ಳುವುದು.

- ಮಗುವು ಪೋಷಕರ ಮನೆಯಲ್ಲಿ ಇರಬೇಕೆ ಅಥವಾ ಬಾಲ ಮಂದಿರದಲ್ಲಿ ಇರಬೇಕೆಂಬುದನ್ನು ಮಕ್ಕಳ ಕಲ್ಯಾಣ ಸಮಿತಿಯಿಂದ ಆದೇಶ ಪಡೆಯುವುದು ಮತ್ತು ಅನುಸರಿಸುವುದು.

- ಮಗುವು ಪೋಷಕರ ಮನೆಯಲ್ಲಿ ಇರಲು ಮಕ್ಕಳ ಕಲ್ಯಾಣ ಸಮಿತಿ ಆದೇಶಿಸಿದಲ್ಲಿ ಮಗುವಿನ ಶಿಕ್ಷಣ ಮುಂದುವರಿಸಲು ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ ಅಗತ್ಯ ಕ್ರಮ ಕೈಗೊಳ್ಳುವುದು.

- ಶಾಲೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ

ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

3. <u>ಮನೆಯಿಂದ ಓಡಿಹೋದ ಮಗು:</u>

- ಮಗುವನ್ನು ಭೇಟಿ ಮಾಡಿ, ಓಡಿ ಹೋಗಲು ಕಾರಣಗಳು ಮತ್ತು ಓಡಿಹೋದ ಸಂದರ್ಭದಲ್ಲಿ ಮಗುವು ಅನುಭವಿಸಿದ ಪರಿಸ್ಥಿತಿ ಮತ್ತು ಸಂಕಷ್ಟಗಳ ಕುರಿತು ಮಾಹಿತಿ ಪಡೆದು, ವಿಶ್ಲೇಷಿಸಬೇಕು.

- ಮಗುವು ಕಡಿಮೆ ಅಪಾಯದ ಮಟ್ಟದಲ್ಲಿರುವದಾಗಿ, ಯಾವುದೇ ಆರೋಗ್ಯ ತೊಂದರೆ ಇಲ್ಲದಿದ್ದಲ್ಲಿ ಶಾಲೆ ಅಥವಾ ವಸತಿ ಶಾಲೆಗೆ ದಾಖಲಿಸಲು ಕ್ರಮ ಕೈಗೊಳ್ಳುವುದು.

- ಮಗುವು ಮನೆಯಲ್ಲಿ ಮುಂದುವರಿಯಲು ತೊಂದರೆ ಅನಿಸಿದಲ್ಲಿ ಹಾಗೂ ಮತ್ತೆ ಮಗುವು ಓಡಿಹೋಗುವ ಸಾಧ್ಯತೆಗಳು ಇದೆ ಎಂದು ಕಂಡು ಬಂದಲ್ಲಿ, ಮಗುವು ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಲ್ಲಿ ಅಥವಾ ವಿವಿಧ ಸಂಕಷ್ಟಗಳಿಗೆ ಒಳಗಾಗಿದ್ದಲ್ಲಿ ಸೂಕ್ತ ಆರೈಕೆ ಮತ್ತು ರಕ್ಷಣೆಗಾಗಿ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

4 <u>ಸಹೋದರ/ಸಹೋದರಿಯರ ಪಾಲನೆ ಮಾಡುತ್ತಿದ್ದಲ್ಲಿ</u>:

- ಪೋಷಕರಲ್ಲಿ ಮಗುವಿನ ಶಿಕ್ಷಣ ಕುರಿತು ಮನವೊಲಿಸುವುದು.

- ಮಗುವು ಪಾಲನೆ ಮಾಡುತ್ತಿದ್ದ ಮಗುವಿನ ವಯಸ್ಸು **03** ರಿಂದ **06** ವರ್ಷದೊಳಗೆ ಇದ್ದಲ್ಲಿ ಸ್ಥಳೀಯ ಅಂಗನವಾಡಿ ಕೇಂದ್ರಕ್ಕೆ ದಾಖಲಿಸಲು ತಿಳಿಸುವುದು ಹಾಗೂ ಸೂಕ್ತ ಕ್ರಮಕ್ಕೆ ಸ್ಥಳೀಯ ಅಂಗನವಾಡಿ ಕಾರ್ಯಕರ್ತರ ಗಮನಕ್ಕೆ ತರುವುದು.

- ಸಹೋದರ/ಸಹೋದರಿಯರ ಪಾಲನೆಯಲ್ಲಿದ್ದ ಮಗುವನ್ನು ಶಾಲೆ ಅಥವಾ ವಸತಿ ಶಾಲೆಗೆ ದಾಖಲಿಸುವುದು. (ಶಾಲೆಗೆ ದಾಖಲಿಸುವ ಮುನ್ನ ಅನುಸರಿಸಬೇಕಾದ ಅಗತ್ಯ ಕ್ರಮಗಳನ್ನು ಅನುಸರಿಸುವುದು)

- ಒಂದು ವೇಳೆ ಪಾಲಕರು ಒಪ್ಪದಿದ್ದಲ್ಲಿ ಮಕ್ಕಳ ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ಅಡಿಯಲ್ಲಿ ಪೋಷಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಅವಕಾಶ ಇರುವುದನ್ನು ತಿಳಿಸುವುದು. ಆಗಲೂ ಒಪ್ಪದಿದ್ದಲ್ಲಿ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಮುಂದಿನ ಕ್ರಮಕ್ಕೆ ಹಾಜರು ಪಡಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

5. ಪಾಲಕರ ನಿರಾಸಕ್ತಿ:

- ಪಾಲಕರಿಗೆ ಮಗುವಿನ ಶಿಕ್ಷಣ ಮಹತ್ವ ಕುರಿತು ಮನವೊಲಿಸುವುದು.

- ಪಾಲಕರು ಒಪ್ಪದಿದ್ದಲ್ಲಿ ಮಕ್ಕಳ ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ಅಡಿಯಲ್ಲಿ ಪೋಷಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಅವಕಾಶ ಇರುವುದನ್ನು ತಿಳಿಸುವುದು. ಆಗಲೂ ಒಪ್ಪದಿದ್ದಲ್ಲಿ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಮುಂದಿನ ಕ್ರಮಕ್ಕೆ ಹಾಜರು ಪಡಿಸುವುದು.

- ಪೋಷಕರು ಒಪ್ಪಿದಲ್ಲಿ, ಮಗುವಿನ ಶಿಕ್ಷಣ ಮಟ್ಟ ಕುರಿತು ಅವಲೋಕಿಸಿ, ಶಾಲೆಗೆ ಅಥವಾ ವಸತಿ ಶಾಲೆಗೆ ದಾಖಲಿಸಲು ಸಂಬಂಧಿಸಿದಂತೆ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯ ಮೂಲಕ ಅಗತ್ಯ ಕ್ರಮ ಅನುಸರಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ 15 ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ 8 ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

6. ಪೋಷಕರಲ್ಲಿನ ಒಡಕು:

- ಪೋಷಕರಲ್ಲಿನ ಒಡಕುನಿಂದ ಮಗುವಿನ ಮೇಲೆ ಆಗುವ ಪರಿಣಾಮ ಕುರಿತು ಹಾಗೂ ಮಗುವು ತನ್ನ ಶಿಕ್ಷಣವನ್ನು ಮುಂದುವರಿಸಲು ಸೂಕ್ತ ವಾತಾವರಣ ಇದೆಯೇ? ಎಂದು ವಿಶ್ಲೇಷಿಸಬೇಕು.

- ಮಗುವಿನ ಮುಂದಿನ ಸೂಕ್ತ ಆರೈಕೆ, ರಕ್ಷಣೆ ಮತ್ತು ಶಿಕ್ಷಣಕ್ಕಾಗಿ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸುವುದು. ಮಕ್ಕಳ ಕಲ್ಯಾಣ ಸಮಿತಿಯ ಆದೇಶಗಳನ್ನು ಅನುಸರಿಸುವುದು.

- ಒಂದು ವೇಳೆ ಮಕ್ಕಳ ಕಲ್ಯಾಣ ಸಮಿತಿಯು ಮಗುವು ಪೋಷಕರೊಂದಿಗೆ ಇರಲು ಆದೇಶಿಸಿದಲ್ಲಿ, ಮಗುವಿನ ಶಿಕ್ಷಣ ಮಟ್ಟ ಕುರಿತು ಅವಲೋಕಿಸಿ, ಶಾಲೆಗೆ ಅಥವಾ ವಸತಿ ಶಾಲೆಗೆ ದಾಖಲಿಸಲು ಸಂಬಂಧಿಸಿದಂತೆ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯ ಮೂಲಕ ಅಗತ್ಯ ಕ್ರಮ ಅನುಸರಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ 15 ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ 8 ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

7. <u>ವಯೋಮಾನಕ್ಕೆ ಬರುವುದು:</u>

- ಮಗುವನ್ನು ಮತ್ತು ಪೋಷಕರನ್ನು ಬೇಟಿ ಮಾಡಿ ಮಗುವು ಶಾಲೆ ಬಿಡಿಸಿರುವುದಕ್ಕೆ ಪೋಷಕರಲ್ಲಿ ಇರುವ ಆತಂಕವನ್ನು ಅರ್ಥ ಮಾಡಿಕೊಳ್ಳುವುದು.

- ವಯೋಮಾನದ ಕಾರಣಕ್ಕೆ ಶಾಲೆ ಬಿಡಿಸುವುದರಿಂದ ಮಗುವಿನ ಮೇಲೆ ಆಗುವ ಪರಿಣಾಮ ಮತ್ತು ಹೆಣ್ಣು ಮಗುವಿನ ಶಿಕ್ಷಣ ಮಹತ್ವ ಕುರಿತು ತಿಳಿಸುವುದು ಮತ್ತು ಪೋಷಕರ ಆತಂಕವನ್ನು ದೂರಮಾಡುವುದು.

- ಮಯೋಮಾನದ ಮಗುವಿಗೆ ಅಗತ್ಯ ರಕ್ಷಣೆ ಮತ್ತು ಸೌಲಭ್ಯಗಳನ್ನು ಶಾಲೆಯಲ್ಲಿ ಒದಗಿಸುವ ಕುರಿತು ಪೋಷಕರಿಗೆ ಬರವಸೆ ಮೂಡಿಸುವುದು.

- ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಮತ್ತು ಶಿಕ್ಷಕ ವೃಂದದ ಮೂಲಕ ಶಾಲೆಯಲ್ಲಿ ವಯೋಮಾನದ ಮಗುವಿಗೆ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸುವುದು. (ನೀರು & ಶೌಚಾಲಯದ ವ್ಯವಸ್ಥೆ,ಶುಚಿ ಪ್ಯಾಡ್ ವ್ಯಸ್ಥೆ, ಪ್ಯಾಡ್ ಬದಲಾಯಿಸಿಕೊಳ್ಳಲು ಪ್ರತ್ಯೇಕ ಕೋಣೆ, ಪ್ಯಾಡ್ ವಿಲೇವಾರಿ ವ್ಯವಸ್ಥೆ ಇತ್ಯಾದಿ)

- ಮಗುವಿನ ಶಿಕ್ಷಣ ಮಟ್ಟ ಕುರಿತು ಅವಲೋಕಿಸಿ, ಶಾಲೆಗೆ ಅಥವಾ ವಸತಿ ಶಾಲೆಗೆ ದಾಖಲಿಸಲು ಸಂಬಂಧಿಸಿದಂತೆ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯ ಮೂಲಕ ಅಗತ್ಯ ಕ್ರಮ ಅನುಸರಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ 15 ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ 8 ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

8. <u>ಮಗುವು ಅನಾಥವಾಗಿದ್ದಲ್ಲಿ:</u>

- ಮಗುವು ಅನಾಥವಾಗಿದ್ದಲ್ಲಿ ಬಾಲ ನ್ಯಾಯ ಕಾಯಿದೆಯ ಪ್ರಕಾರ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸುವುದು.

- ಅನಾಥ ಮಗುವಿನ ಪೋಷಣೆಗೆ ಸ್ಥಳೀಯರು ಆಸಕ್ತಿ ತೋರಿಸಿದಲ್ಲಿ ಅಂಥವರು ಸಮಿತಿಯ ಮುಂದೆ ಹಾಜರಾಗಿ, ತಮ್ಮ ಕೋರಿಕೆಯನ್ನು ಸಲ್ಲಿಸುವುದು.

- ಮಗುವನ್ನು ದತ್ತು ಕೊಡಲು ಮಗುವು ಅರ್ಹವೇ? ಎಂಬುದನ್ನು ಮಕ್ಕಳ ಕಲ್ಯಾಣ ಸಮಿತಿಗೆ ನಿರ್ಣಯ ತೆಗೆದುಕೊಳ್ಳಲು ಅವಕಾಶವಿದೆ. ಸಮಿತಿಯ ಮೂಲಕ/ಸಹಾಯದಿಂದ ಮುಂದಿನ ಕ್ರಮ ಅನುಸರಿಸಿ ಆಸಕ್ತರು ಮಗುವನ್ನು ನ್ಯಾಯಾಲಯದ ಮೂಲಕ/ದತ್ತು ಏಜೆನ್ಸಿ ಮೂಲಕ ದತ್ತು ಪಡೆಯುವುದು.

- ಮಕ್ಕಳ ಕಲ್ಯಾಣ ಸಮಿತಿಯ ಹಾಗೂ ನ್ಯಾಯಾಲಯದ ಆದೇಶಗಳಿಲ್ಲದೆ ಅನಾಥ ಮಗುವನ್ನು ಯಾರೂ ಕೂಡ ತಮ್ಮಲ್ಲಿ ಇಟ್ಟುಕೊಳ್ಳಲು ಅವಕಾಶ ಇರುವುದಿಲ್ಲ.

<u>9.ಶಾಲೆಯು ಮಗುವಿನ ಮನೆಯಿಂದ ದೂರವಿರುವುದು:</u>

- ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಮತ್ತು ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ ಈ ಕುರಿತು ಪರಿಹಾರ ಕಂಡುಕೊಳ್ಳುವುದು. (ಸ್ಥಳೀಯ ವಾಹನದ ವ್ಯವಸ್ಥೆ ಆಗಬಹುದು)

- ಮಗುವಿಗೆ ಶಾಲೆಗೆ ಹಾಜರಾಗಲು ಸೌಲಭ್ಯ ಒದಗಿಸಲು ಆಗದಿದ್ದಲ್ಲಿ, ಮಗುವು ಮತ್ತು ಪೋಷಕರನ್ನು ಮನವೊಲಿಸಿ ವಸತಿ ಶಾಲೆಗೆ ದಾಖಲಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ 15 ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ 8 ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

10. <u>ಆಕರ್ಷಕವಿಲ್ಲದ ಶಾಲೆ:</u>

- ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಮತ್ತು ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ ಈ ಕುರಿತು ಶಿಕ್ಷಕ ವೃಂದದವರೊಂದಿಗೆ ಮತ್ತು ಶಾಲೆಯಲ್ಲಿನ ಮಕ್ಕಳೊಂದಿಗೆ ಸಮಾಲೋಚಿಸಿ ಮಕ್ಕಳ ಕಲಿಕೆ ಆಕರ್ಷಣೀಯವಾಗುವಂತೆ ಕ್ರಮ ಕೈಗೊಳ್ಳುವುದು.

- ಶಾಲೆ/ಅಂಗನವಾಡಿಯಲ್ಲಿ ಆಕರ್ಷಣೀಯವಾದ ಕಲಿಕಾ ಸಾಮಾಗ್ರಿಗಳ ಮತ್ತು ಗೋಡೆ ಚಿತ್ರಗಳನ್ನು ಹಾಕುವುದು.

- ಶಾಲೆ/ಅಂಗನವಾಡಿಯಲ್ಲಿನ ಅನುಪಯುಕ್ತ ವಸ್ತು/ಸಾಮಾಗ್ರಿಗಳನ್ನು ತೆಗೆದು ಹಾಕಿ, ಸುಣ್ಣ ಬಣ್ಣ ಮಾಡುವುದು.

- ಶಿಕ್ಷಕರ ವೃಂದ ಮಕ್ಕಳಿಗೆ ಆಕರ್ಷಣೀಯವಾಗಿ ಮಾತನಾಡುವ ಕಲೆ/ಕೌಶಲ್ಯ ವೃದ್ಧಿಸಿಕೊಳ್ಳುವುದು.

- ಶಾಲೆ/ಅಂಗನವಾಡಿಯಲ್ಲಿ ಸಹಪಾಠಿಗಳಿಂದ ಬೆದರಿಸುವ ಪ್ರಕ್ರಿಯೆಗಳಿಂದ ಮಗುವು ಶಾಲೆಯಿಂದ ದೂರ ಉಳಿದಿದ್ದಲ್ಲಿ, ಈ ಕುರಿತು ವಿಚಾರಿಸಿ, ಬೆದರಿಸಿದ ಮಕ್ಕಳಿಗೆ ಶಿಕ್ಷಕರಿಂದ ಸೂಕ್ತ ರೀತಿಯಲ್ಲಿ ತಿಳಿಹೇಳಿ, ಬೆದರಿಸುವ ಪ್ರಕ್ರಿಯೆ ಮರುಕಳಿಸದಂತೆ ಕ್ರಮ ಕೈಗೊಳ್ಳುವುದು.

- ಬೆದರಿಕೆಗೆ ಒಳಗಾದ ಮಗುವಿಗೆ ಆಪ್ತ ಸಮಾಲೋಚನೆ ನಡೆಸಿ, ಭಯದಿಂದ ಮುಕ್ತಗೊಳಿಸುವುದು.

- ಶಾಲೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ

ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

11. <u>ಮಕ್ಕಳ ನಿರಾಸಕ್ತಿ:</u>

- ಮಗುವನ್ನು ಬೇಟಿ ಮಾಡಿ, ಆಪ್ತ ಸಮಾಲೋಚನೆ ಮೂಲಕ ಶಿಕ್ಷಣದ ಬಗ್ಗೆ ಮಗುವಿನಲ್ಲಿ ನಿರಾಸಕ್ತಿ ಉಂಟಾಗಲು ಕಾರಣಗಳನ್ನು ತಿಳಿಯುವುದು.

- ಮಗುವು ನೀಡಿದ ಕಾರಣಗಳನ್ನು ಅವಲೋಕಿಸಿ, ಮಗುವಿನ ಆತಂಕವನ್ನು ದೂರ ಮಾಡಲು ಪರಿಹಾರಗಳನ್ನು ಕಂಡುಕೊಳ್ಳಬೇಕು.

- ಮಗುವಿಗೆ ಶಿಕ್ಷಣದ ಬಗ್ಗೆ ಭರವಸೆ ಮೂಡಿಸಿ ಶಾಲೆಗೆ ದಾಖಲಿಸಬೇಕು.

